# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## *ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 06-08-2018ರಂದು ನಡೆದ ಸಭೆಯ ನಡವಳಿಗಳು*

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| **ಮಹದೇವ. ಎಂ. – ಅಧ್ಯಕ್ಷರು** | ಕೌನ್ಸಿಲ್ ಕಾರ್ಯದರ್ಶಿ, |
| **ಎಂ. ಆನಂದ್ – ಸದಸ್ಯರು** | ಮುಖ್ಯಲೆಕ್ಕಾಧಿಕಾರಿ, |
| **ಉಮಾ. ಎನ್ – ಸದಸ್ಯರು** | ಮುಖ್ಯ ಆರ್ಥಿಕ ಅಧಿಕಾರಿ, |
| **ಮಂಜುಳ ವಿಜಯಕುಮಾರ್ – ಸದಸ್ಯರು** | ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ), (ಸಾರಿಗೆ), (ಓ.ಎಫ್.ಸಿ), |
| **ಅನ್ಸರ್ ಪಾಷ. ಎಸ್ – ಸದಸ್ಯರು** | |
| **ಆಂಜನಪ್ಪ. ಎಂ – ಸದಸ್ಯರು** | ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಾರಿಗೆ), (ಹೆಚ್.ಬಿ.ಆರ್.ಲೇಔಟ್), |
| **ಕೆ.ಗಣೇಶ್ ರಾವ್ ಮಾನೆ – ಸದಸ್ಯರು** | |
| **ದಾಸೇಗೌಡ. ಸಿ – ಸದಸ್ಯರು** | ತಹಸಿಲ್ದಾರ್ (ಭೂಸ್ವಾಧೀನ) |
| **ಶಿವಕುಮಾರ್. ಕೆ – ಸದಸ್ಯರು** | ಸಂಬಂಧಪಟ್ಟ ಅಧಿಕಾರಿಗಳು, |
| **ಎಂ. ವೆಂಕಟೇಶ್ (ಸಂಗಾತಿ) – ಸದಸ್ಯರು** | --- |
| **ಹೆಚ್.ಸಿ. ನಾಗರತ್ನ ರಾಮಮೂರ್ತಿ – ಸದಸ್ಯರು** | --- |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

### *01]. ವಿಷಯದ ಸಂಖ್ಯೆ: ತೆಆಸ್ಥಾಸ/ 144 /2017-18*

ಪ್ರಧಾನ ಅಭಿಯಂತರರರ ದಿನಾಂಕ: 13-10-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮುಖ್ಯ ಅಭಿಯಂತರರು (ಪಶ್ಚಿಮ) ರವರು ಕಂಡಿಕೆ (07)ರಲ್ಲಿ ವಾರ್ಡ್ ನಂ.138ರಲ್ಲಿ ಕೈಗೊಳ್ಳಬೇಕಾದ ಕಾಮಗಾರಿಯಾದ Construction of Samudhaya bhavan at Flower Garden Rs.50.00 Lakhs ಗಳಿಗೆ ಅಂದಾಜು ಪಟ್ಟಿಯನ್ನು 2016-17ನೇ ಸಾಲಿನ ಲೋಕೋಪಯೋಗಿ ದರಪಟ್ಟಿಯ ದರಗಳನ್ನು ಅಳವಡಿಸಿ ತಯಾರಿಸಿದ್ದು ಲೆಕ್ಕಶೀರ್ಷಿಕೆ-0472ರ ಅಡಿಯಲ್ಲಿ ಅನುವು ಮಾಡಲು ಕೋರಿರುತ್ತಾರೆ. ಈ ಹಿನ್ನಲೆಯಲ್ಲಿ ಚಾಮರಾಜಪೇಟೆ ಮತಕ್ಷೇತ್ರದ ಶಾಸಕರು ಪತ್ರ ದಿ: 28.07.2017 ರಂದು ಸದರಿ ಕಾಮಗಾರಿಗೆ ಅನುದಾನ ಒದಗಿಸಲು ಕೋರಿರುತ್ತಾರೆ. ಮುಖ್ಯ ಆರ್ಥಿಕ ಅಧಿಕಾರಿರವರು ಕಂಡಿಕೆ (12) ರಲ್ಲಿ ಲೆಕ್ಕಶೀರ್ಷಿಕೆ ಪಿ-0472ರ ಅಡಿಯಲ್ಲಿ ಮೊತ್ತ ರೂ.50.00 ಲಕ್ಷಗಳ ಅನುದಾನವು ಲಭ್ಯವಿದ್ದು ಹಾಗೂ ಈ ಅನುದಾನಕ್ಕಾಗಿ ಸಮಿತಿಯ ಮುಂದೆ ಸಲ್ಲಿಸಲು ವರದಿ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರು ಆದೇಶಿಸಿದಂತೆ ವಾರ್ಡ್-138 ರಲ್ಲಿ ಮೇಲಿನ ಕಾಮಗಾರಿಯನ್ನು ಲೆಕ್ಕಶೀರ್ಷಿಕೆ ಪಿ-0472ರ ಅಡಿಯಲ್ಲಿ ಮೊತ್ತ ರೂ.50.00 ಲಕ್ಷಗಳನ್ನು ಅನುವು ಮಾಡಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಆರ್ಥಿಕ ವರ್ಷವು ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿದೆ.**

***02]. ವಿಷಯದ ಸಂಖ್ಯೆ: ತೆಲಆಸ್ಥಾಸ/ 180 /2017-18***

ಪ್ರಧಾನ ಅಭಿಯಂತರರರ ದಿನಾಂಕ: 30-11-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮುಖ್ಯ ಅಭಿಯಂತರರು (ದಾಸರಹಳ್ಳಿ) ರವರು ಕಂಡಿಕೆ (05) ರಲ್ಲಿ ಕಾಮಗಾರಿಯಾದ Providing man power wupply to the Dasarahalli zonal control room ಗೆ ಒಂದು ವರ್ಷ ಅವಧಿಗೆ ಹಾಲಿ ಇರುವ Labour Department minium wages Act ಪ್ರಕಾರ ದರಗಳನ್ನು ಅಳವಡಿಸಿ ಅಗತ್ಯವಿರುವ man power ಗಳಿಗೆ ಅಂದಾಜು ಪಟ್ಟಿಯನ್ನು ರೂ.28.00 ಲಕ್ಷಗಳಿಗೆ ತಯಾರಿಸಿದ್ದು ಲೆಕ್ಕಶೀರ್ಷಿಕೆ-3156ರ ಅಡಿ ಜಬ್‌ಸಂಖ್ಯೆ ನೀಡಲು ಕೋರಿರುತ್ತಾರೆ. ಈ ವಿಚಾರದಲ್ಲಿ ಮುಖ್ಯ ಆರ್ಥಿಕ ಲೆಕ್ಕಾಧಿಕಾರಿರವರು ಕಂಡಿಕೆ (11) ರಲ್ಲಿ 2017-18ನೇ ಸಾಲಿನ ಆಯವ್ಯಯದ ಲೆಕ್ಕಶೀಷಿಕೆ-3156ರ ಅಡಿಯಲ್ಲಿ ಸದರಿ ಕಾಮಗಾರಿಯ ಮೊತ್ತ ರೂ.28.00 ಲಕ್ಷಗಳಿಗೆ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ವರದಿ ಸಲ್ಲಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರು ಆದೇಶಿಸಿದಂತೆ ಸದರಿ ಕಾಮಗಾರಿಗೆ ಲೆಕ್ಕಶೀರ್ಷಿಕೆ-3156 (Maintenance of control rooms in all zones) ರ ಅಡಿಯಲ್ಲಿ ರೂ.28.00 ಲಕ್ಷಗಳ ಮೊತ್ತವನ್ನು ಮರುಹೊಂದಾಣಿಕೆ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಆರ್ಥಿಕ ವರ್ಷವು ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿದೆ.**

***03]. ವಿಷಯದ ಸಂಖ್ಯೆ: ತೆಲಆಸ್ಥಾಸ/ 193 /2017-18***

ಪ್ರಧಾನ ಅಭಿಯಂತರರರ ದಿನಾಂಕ: 18-12-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆ ವ್ಯಾಪ್ತಿಯ ತಗ್ಗು ಪ್ರದೇಶಗಳಲ್ಲಿ ಮಳೆಗಾಲದ ಸಂದರ್ಭದಲ್ಲಿ ಮಳೆ ನೀರಿನಿಂದ ಜಲಾವೃತವಾಗಿ ಸಾರ್ವಜನಿಕ ಜೀವನಕ್ಕೆ ಸಾಕಷ್ಟು ಕಷ್ಟಗಳನ್ನು ಮತ್ತು ಪ್ರಾಣಹಾನಿ ಸಂಭವಿಸುವುದನ್ನು ಗಮನಿಸಲಾಗಿದೆ. ದಿ:14.08.2017 ರಂದು ರಾತ್ರಿ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅತೀ ಹೆಚ್ಚು ಮಳೆ ಆಗಿದ್ದರಿಂದ ಕೋರಮಂಗಲದ ಎಸ್.ಟಿ.ಬೆಡ್, ಹೆಚ್.ಎಸ್.ಆರ್.ಲೇಔಟ್, ಮಹದೇವಪುರ, ಶಾಂತಿನಗರ ಹಾಗೂ ಬೊಮ್ಮನಹಳ್ಳಿ ವ್ಯಾಪ್ತಿಯ ತಗ್ಗು ಪ್ರದೇಶಗಳಲ್ಲಿ ಸುಮಾರು 5 ಅಡಿಗಳಷ್ಟು ನೀರು ನಿಂತ್ತಿದ್ದು, ನಿಂತ್ತಿರುವ ನೀರನ್ನು ಅತೀ ಜರೂರಾಗಿ ತೆರವುಗೊಳಿಸದೇ ಸಾರ್ವಜನಿಕರು ನಿಂತ ನೀರಿನಲ್ಲಿಯೇ ಸುಮಾರು 3 ರಿಂದ 4 ದಿನಗಳ ತನಕ ಸಾರ್ವಜನಿಕರು ಕಷ್ಟವನ್ನು ಅನುಭವಿಸಬೇಕಾಯಿತು. ಬೆಂಗಳೂರು ನಗರಾಭಿವೃದ್ಧಿ ಸಚಿವರು ಹಾಗೂ ಪೂಜ್ಯ ಮಹಾಪೌರರು ಸದರಿ ಪ್ರದೇಶಗಳ ಪರಿವೀಕ್ಷಣಾ ಸಮಯದಲ್ಲಿ ಜಲಾವೃತಗೊಂಡ ತಗ್ಗು ಪ್ರದೇಶಗಳಲ್ಲಿ ಸಾರ್ವಜನಿಕರು ಅನುಭವಿಸಿದ ಕಷ್ಟದಿಂದ ಸದರಿ ಪ್ರದೇಶಗಳ ನಾಗರೀಕರಿಂದ ಸಾಕಷ್ಟು ಆಕ್ರೋಶವನ್ನು ಎದುರುರಿಸಿದ್ದು ಗಮನಿಸಲಾಗಿದೆ.

ಈ ಹಿನ್ನಲೆಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಹೆಚ್ಚುವರಿ ಅಶ್ವಶಕ್ತಿ ಡಿಸಲ್ ಪಂಪ್ ಹೊಂದಿದಲ್ಲಿ ದಿ:14-08-2017 ರಂದು ಜಲಾವೃತ ಪ್ರದೇಶದಿಂದ ನೀರನ್ನು ಅತೀ ಶೀಘ್ರವಾಗಿ ತೆರವುಗೊಳಿಸಿ ಸಾರ್ವಜನಿಕ ಜೀವನಕ್ಕೆ ಅನಾನುಕೂಲವಾಗುವುದನ್ನು ತಪ್ಪಿಸಬಹುದಾಗಿತ್ತು. ಈ ಕ್ರಮದಿಂದ ಪಾಲಿಕೆಗೆ ಸಾರ್ವಜನಿಕರಿಂದ ಪ್ರಶಂಶೆಗೆ ಅರ್ಹರಾಗುವ ಸಾಧ್ಯತೆಯಿತ್ತು.

ಈ ಹಿನ್ನಲೆಯಲ್ಲಿ ಮುಂದಿನ ದಿನಗಳಲ್ಲಿ ಮಳೆಯಿಂದ ಪಾಲಿಕೆಯ ತಗ್ಗು ಪ್ರದೇಶಗಳಲ್ಲಿ ಹಾಗೂ ಮಳೆ ನೀರಿನ ಚರಂಡಿಯ ಆಸುಪಾಸಿನಲ್ಲಿ ಜಲಾವೃತಗೊಂಡಲ್ಲಿ ಅತೀ ಜರೂರಾಗಿ ಮಳೆ ನೀರನ್ನು ತೆರವುಗೊಳಿಸಲು ಮೆ॥ Aryan Pump and Enviro Solutions Pvt ltd. ರವರು ನೀರಿನಿಂದ ಜಲಾವೃತಗೊಂಡ ಪ್ರದೇಶದಿಂದ ನೀರನ್ನು ತೆರವುಗೊಳಿಸಲು ಹೆಚ್ಚುವರಿ ಅಶ್ವಶಕ್ತಿಯ ಡೀಸಲ್ ಪಂಪ್‌ನ್ನು

(Auto Prime Trash Pump set model AT-6000) ನಮೂನೆಯ ಪಂಪ್‌ನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದು, ಸದರಿ ಪಂಪ್‌ನಿಂದ ಜಲಾವೃತಗೊಂಡ ಪ್ರದೇಶದಿಂದ ನೀರನ್ನು ಸರಾಗವಾಗಿ ತೆರವುಗೊಳಿಸಬಹುದಾಗಿರುತ್ತದೆ. ಸದರಿ ಪಂಪ್‌ನಿಂದ ಪ್ರತಿ ನಿಮಿಷಕ್ಕೆ ಸುಮಾರು 6000 ಲೀಟರ್‌ಗಳಷ್ಟು ನೀರನ್ನು ತೆರವುಗೊಳಿಸಬಹುದಾಗಿರುತ್ತದೆ.

ಸದರಿ ಕಂಪನಿಯ ಡೀಸಲ್ ಪಂಪ್‌ನ್ನು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆ ವಿಭಾಗದವರು ಮೆ॥.Aryan Pump and Enviro Solutions Pvt ltd. ರವರಿಂದ ಟೆಂಡರ್ ಮುಖೇನ 06 ಡೀಸಲ್ ಪಂಪ್‌ಗಳನ್ನು ರೂ.102.00 ಲಕ್ಷಗಳಿಗೆ ಖರೀದಿಸಿದ್ದು, ಕಾರ್ಯದೇಶದ ಪ್ರತಿಯನ್ನು ತಮ್ಮ ಅವಗಾಹನೆಗಾಗಿ ಕಡತದಲ್ಲಿ ಲಗತ್ತಿಸಿದೆ.

ಸದರಿ ಡೀಸಲ್ ಪಂಪ್‌ನ್ನು ಖರೀದಿಸುವುದರಿಂದ ಪಾಲಿಕೆಗೆ ಮುಂದಿನ ದಿನಗಳಲ್ಲಿ ಜಲಾವೃತಗೊಂಡ ಪ್ರದೇಶದಿಂದ ಮಳೆ ನೀರನ್ನು ತೆರವುಗೊಳಿಸಲು ಸುಲಭ ಸಾಧ್ಯವಾಗುವುದರಿಂದ ಪಾಲಿಕೆಯ ಪೂರ್ವ, ಪಶ್ಚಿಮ, ದಕ್ಷಿಣ ಮತ್ತು ಬೊಮ್ಮನಹಳ್ಳಿ ವಲಯಗಳಲ್ಲಿ ಒಟ್ಟು 04 ಪಂಪ್‌ಗಳನ್ನು ಖರೀದಿಸಿ ಸಂಬಂಧಪಟ್ಟ ವಲಯದ ನಿಯಂತ್ರಣಾ ಕೊಠಡಿಯ ಸುಪರ್ಧಿಗೆ ನೀಡಿದಲ್ಲಿ ಆಯಾ ಪ್ರದೇಶಗಳಲ್ಲಿ ಮಳೆ ನೀರಿನಿಂದ ಆಗುವ ಅನಾಹುತವನ್ನು ತಪ್ಪಿಸಬಹುದಾಗಿರುತ್ತದೆ.

ಮೆ॥.Aryan Pump and Enviro Solutions Pvt ltd. ರವರು ಸದರಿ ಪಂಪ್‌ಗೆ ರೂ.16.90 ಲಕ್ಷಗಳ ಅಂದಾಜು ಸಲ್ಲಿಸಿದ್ದು, 04 ಪಂಪ್‌ಗಳಿಗೆ ಒಟ್ಟು ಮೊತ್ತ ರೂ.70.00 ಲಕ್ಷಗಳಿಗೆ ಕಾಮಗಾರಿ ಸಂಕೇತವನ್ನು 2017–18ನೇ ಸಾಲಿನ ಮಾನ್ಯ ಆಯುಕ್ತರವರ ವಿವೇಚನೆ ಅಡಿ ನಿಗದಿಪಡಿಸಿರುವ ಅನುದಾನದ ಲೆಕ್ಕಶೀರ್ಷಿಕೆ ಅಡಿಯಲ್ಲಿ ಜಾಬ್‌ಕೋಡ್ ನೀಡಲು ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳಿಗೆ ಕೋರಿದ್ದು ಸದರಿಯವರ ಅಭಿಪ್ರಾಯದಂತೆ 2017–18ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–0541 ಅಡಿಯಲ್ಲಿ ಅನುದಾನ ಲಭ್ಯವಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ.

ಈ ಹಿನ್ನಲೆಯಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರು ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರ ಆದೇಶದಂತೆ ಈ ಕೆಳಕಂಡ ಅಂಶಕ್ಕೆ ಸೂಕ್ತ ನಿರ್ಣಯ ಕೋರಿ ಮಂಡಿಸಲಾದ ಟಿಪ್ಪಣಿ.

ಮೆ॥.Aryan Pump and Enviro Solutions Pvt ltd. ರವರು ಸದರಿ ಪಂಪ್‌ಗೆ ರೂ.16.90 ಲಕ್ಷಗಳ ಅಂದಾಜು ಸಲ್ಲಿಸಿದ್ದು, 04 ಪಂಪ್‌ಗಳಿಗೆ ಒಟ್ಟು ಮೊತ್ತ ರೂ.70.00 ಲಕ್ಷಗಳಿಗೆ ಕಾಮಗಾರಿ ಸಂಕೇತವನ್ನು 2017–18ನೇ ಸಾಲಿನ ಲೆಕ್ಕಶೀರ್ಷಿಕೆ ಪಿ–0541 ಅಡಿಯಲ್ಲಿ ಅನುದಾನ ಮರುಹೊಂದಾಣಿಕೆ ಮಾಡಿಕೊಂಡು ಜಾಬ್‌ಸಂಖ್ಯೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಮಳೆಗಾಲವು ಆರಂಭವಾಗಿರುವ ಹಿನ್ನಲೆಯಲ್ಲಿ ಸದರಿ ಯೋಜನೆಯನ್ನು ಎಂಟು ವಲಯ ವ್ಯಾಪ್ತಿಗಳಲ್ಲಿ ಅಳವಡಿಸಿಕೊಳ್ಳುವುದು ಸೂಕ್ತವಾಗಿ ರುವುದ್ದರಿಂದ ಇದಕ್ಕಾಗಿ ಆಗಬಹುದಾದ ವೆಚ್ಚಗಳ ವಿವರಗಳೊಂದಿಗೆ ಸಮಿತಿಯ ಮುಂದೆ ಮರುಮಂಡಿಸಲು ಕಡತವನ್ನು ಹಿಂದಿರುಗಿಸಲು ಸಮಿತಿಯು ತೀರ್ಮಾನಿಸಿತು.**

***04]. ವಿಷಯದ ಸಂಖ್ಯೆ: ತೆಆಸ್ಥಾಸ/ 210 /2017–18***

ಜಂಟಿ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ ಮತ್ತು ಆರೋಗ್ಯ) ರವರ ದಿನಾಂಕ: 08–12–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ರವರ ಆದೇಶ

ಸಂಖ್ಯೆ: ಪೌ.ನಿ/18/ಘವನಿ/2015-16 ದಿ:06-05-2016ರಲ್ಲಿ ಬಿಬಿಎಂಪಿಗೆ ಸ್ವಚ್ಛ ಭಾರತ್ ಅಭಿಯಾನದ ಅನುದಾನದಡಿಯಲ್ಲಿ ಕೇಂದ್ರದ ಪಾಲಿನ ಅನುದಾನ ರೂ.81.66 ಕೋಟಿಗಳು ಹಾಗೂ ರಾಜ್ಯದ ಪಾಲಿನ ಅನುದಾನ ರೂ.27.22 ಕೋಟಿಗಳು ಒಟ್ಟು ರೂ.108.88 ಕೋಟಿಗಳ ಅನುದಾನವನ್ನು ನಿಗಧಿಪಡಿಸಿ ಒಟ್ಟು ರೂ.41.15 ಕೋಟಿಗಳ ಅನುದಾನವನ್ನು ಬಿಬಿಎಂಪಿಗೆ ಬಿಡುಗಡೆ ಮಾಡಲಾಗಿತ್ತು.

ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ರವರು ಅನುದಾನ ನಿಗಧಿಪಡಿಸಿರುವಂತೆ 2016-17ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ3112 ಅಡಿಯಲ್ಲಿ ರೂ.50.69 ಕೋಟಿಗಳಿಗೆ ಹಾಗೂ 2017-18ನೇ ಸಾಲಿನಲ್ಲಿ ರೂ.400.00 ಲಕ್ಷಗಳಿಗೆ ಒಟ್ಟು ರೂ.60.69 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದ್ದು, ಉಳಿಕೆ ರೂ.48.19 ಕೋಟಿಗಳ ಅನುದಾನವನ್ನು ಸರ್ಕಾರದಿಂದ ನಿರೀಕ್ಷಿಸಿ ಬೆಳ್ಳಹಳ್ಳಿ, ಬಾಗಲೂರು ಮತ್ತು ಮಿಟ್ಟಗಾನಹಳ್ಳಿ ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿ ಘಟಕಗಳ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಮಾನ್ಯ ಶಾಸಕರು ಮಹದೇವಪುರ ವಿಧಾನಸಭಾ ಕ್ಷೇತ್ರ ಹಾಗೂ ಕೃಷಿ ಸಚಿವರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ಶಾಸಕರು ರವರು ಸಾರ್ವಜನಿಕ ಸೇವಾ ಹಾಗೂ ಆರೋಗ್ಯ ಹಿತದೃಷ್ಟಿಯಿಂದ ಕೈಗೊಳ್ಳಬೇಕಾಗಿರುವ ಅಭಿವೃದ್ಧಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಲು ಕೋರಿರುವ ಕಾಮಗಾರಿಗಳನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು 2017-18ನೇ ಸಾಲಿನಲ್ಲಿ ಸ್ವಚ್ಛ ಭಾರತ್ ಅಭಿಯಾನ ಅನುದಾನ ಲೆಕ್ಕಶೀರ್ಷಿಕೆ ಪಿ3112 ಅಡಿ ಅಳವಡಿಸಿಕೊಳ್ಳುವುದನ್ನು ನಿರೀಕ್ಷಿಸಿ ಸಾರ್ವಜನಿಕ ಹಿತದೃಷ್ಟಿಯಿಂದ ಕಾಮಗಾರಿಗಳನ್ನು ಕೈಗೊಳ್ಳಲು ಜಾಬ್‌ಸಂಖ್ಯೆಯನ್ನು ನೀಡಲಾಗಿದೆ.

ಈ ಹಿನ್ನಲೆಯಲ್ಲಿ ಸ್ವಚ್ಛಭಾರತ್ ಅಭಿಯಾನ ಅನುದಾನ ರೂ.48.19 ಕೋಟಿಗಳನ್ನು ಲೆಕ್ಕಶೀರ್ಷಿಕೆ ಪಿ3112 ಅಡಿ 2017-18ನೇ ಸಾಲಿಗೆ ಅಳವಡಿಸಿಕೊಳ್ಳಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

<u>***-ಮುಂದೂಡಿದೆ-***</u>

## ***05]. ವಿಷಯದ ಸಂಖ್ಯೆ: ತೆಆಸ್ಥಾಸ/ 231 /2017-18***

ಆಯುಕ್ತರ ದಿನಾಂಕ: 27-01-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಮತ್ತು ಪಾಲಿಕೆಯ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ ಹೊಸ ವಾಹನಗಳ ಅಗತ್ಯವಿರುವುದಾಗಿ ತಿಳಿಸಿ ಹೊಸ ವಾಹನಗಳನ್ನು ಒದಗಿಸಲು ಪ್ರಸ್ತಾವನೆಗಳನ್ನು ಸಲ್ಲಿಸಲಾಗಿರುತ್ತದೆ.

ಹೊಸ ವಾಹನಗಳನ್ನು ಖರೀದಿ ಮಾಡಲು DGS&D ದರಗಳಲ್ಲಿ ಕಾರು ಮಳಿಗೆ (ಷೋ ರೂಮ್) ರವರಿಂದ ನೀಡಲು ಕೋರಿದ್ದು, ಸದರಿ ಮಳಿಗೆ ರವರು DGS&D ದರವನ್ನು ಜನವರಿ-2017ರ ಮಾಹೆಯಿಂದ 2017-18ನೇ ಸಾಲಿನಲ್ಲಿ ನಿಗಧಿ ಪಡಿಸಿರುವುದಿಲ್ಲವಾದ್ದರಿಂದ ಪಾಲಿಕೆಯಿಂದ ಖರೀದಿಸ ಬಹುದಾದ ಹೊಸ ವಾಹನಗಳನ್ನು GEM (Government E Marketing) ನಿಂದ ಪಡೆಯ ಬಹುದಾಗಿದ್ದು GEM ನ ಅಡಿ ನೊಂದಣಿ ಮಾಡಲಾಗಿರುತ್ತದೆ.

ಮೇಲ್ಕಂಡ ಮಾಹಿತಿಯನ್ನು ತಮ್ಮ ಅವಗಾಹನೆಗೆ ಮಂಡಿಸುತ್ತಾ ಪಾಲಿಕೆಯ ಅಧಿಕಾರಿಗಳಿಗೆ ಮತ್ತು ಪಾಲಿಕೆಯ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ ಸಿಯಾಜ್ ಮತ್ತು ಇನ್ನೋವಾ ಖರೀದಿಸಲು ಪ್ರಸ್ತಾವನೆ ಇರುತ್ತದೆ ಮತ್ತು ಹೊಸ ವಾಹನ ಖರೀದಿಗಾಗಿ ಪಿ-0110 ಅನುದಾನದ ಅಡಿಯಲ್ಲಿ ರೂ.150.00 ಲಕ್ಷ ಅನುದಾನ ಲಭ್ಯವಿರುತ್ತದೆ.

ಹೊಸ ವಾಹನ ಖರೀದಿಗಾಗಿ ರೂ.150.00 ಲಕ್ಷಗಳ ಅನುದಾನ ಲಭ್ಯವಿರುವುದರಿಂದ ಪ್ರಸ್ತಾಪಿಸಲಾಗಿರುವ ಒಟ್ಟು 12 ವಾಹನಗಳಲ್ಲಿ 09 Toyota Innova (7 SEATER-DIESEL) ಹಾಗೂ ಒಟ್ಟು 03 Maruti Suzuki CIAZ (Sigma-PETROL) ವಾಹನಗಳನ್ನು ಖರೀದಿಸಲು ಅಭಿಪ್ರಾಯಿಸಲಾಗಿರುತ್ತದೆ.

ಮುಂದುವರೆದಂತೆ, GEM ದರಗಳಂತೆ (ರಸ್ತೆ ತೆರಿಗೆ ಮತ್ತು ವಾಹನ ವಿಮೆ ಹೊರತುಪಡಿಸಿ) ಒಟ್ಟು 09 ಇನ್ನೋವಾ ವಾಹನಗಳಿಗೆ 09*12,76,353.00=1,14,87,177 (ಒಂದು ಕೋಟಿ ಹದಿನಾಲ್ಕು ಲಕ್ಷದ ಎಂಭತ್ತೇಳು ಸಾವಿರದ ಒಂದು ನೂರ ಎಪ್ಪತ್ತೇಳು ರೂಪಾಯಿಗಳು ಮಾತ್ರ) ಹಾಗೂ ಒಟ್ಟು 03 ಸಿಯಾಜ್ ವಾಹನಗಳಿಗೆ 03*712284.13=21,36,852.39 (ಇಪ್ಪತ್ತೊಂದು ಲಕ್ಷದ ಮೂವತ್ತಾರು ಸಾವಿರದ ಎಂಟು ನೂರ ಐವತ್ತೇರಡು ರೂಪಾಯಿಗಳು ಮಾತ್ರ) ಗಳಾಗಿರುತ್ತದೆ. ಒಟ್ಟು ಮೊತ್ತ ರೂ. 1,14,87,177 + 21,36,852 = 1,36,24,029.00 (ಒಂದು ಕೋಟಿ ಮೂವತ್ತಾರು ಲಕ್ಷದ ಇಪ್ಪತ್ನಾಲ್ಕು ಸಾವಿರದ ಇಪ್ಪತ್ತೊಂಭತ್ತು ರೂಪಾಯಿಗಳು ಮಾತ್ರ) ಗಳಾಗಿರುತ್ತದೆ.

ಮೇಲ್ಕಂಡ ಮಾಹಿತಿಗಳನ್ನು ತಮ್ಮ ಅವಗಾಹನೆಗೆ ಮಂಡಿಸುತ್ತಾ, ಪಾಲಿಕೆಯ ಅಧಿಕಾರಿಗಳಿಗೆ ಮತ್ತು ಪಾಲಿಕೆಯ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ 09 ಟಯೋಟಾ ಇನ್ನೋವಾ ಕ್ರಿಸ್ಟಾ ಮತ್ತು 03 ಮಾರುತಿ ಸಿಯಾಜ್ ವಾಹನಗಳನ್ನು ಖರೀದಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಕೋರಿ ಮಂಡಿಸಿದೆ.

<u>***-ಮುಂದೂಡಿದೆ-***</u>

## <u>*06]. ವಿಷಯದ ಸಂಖ್ಯೆ: ತೆಆಸ್ಥಾಸ/ 240 /2017-18*</u>

### <u>*ದಿನಾಂಕ 14-02-2018ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಸಭೆಯ ನಡವಳಿ:-*</u>

ಮಾನ್ಯ ಸಚಿವರು ಶ್ರೀ. ಕೆ ಜೆ. ಜಾರ್ಜ್, ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು ಮತ್ತು ಬೆಂಗಳೂರು ನಗರ ಜಿಲ್ಲಾ ಉಸ್ತವಾರಿ ಸಚಿವರ ಪತ್ರ ಸಂಖ್ಯೆ: ಬೆಂ.ಅ & ನ.ಯೋ.ಸ/489/2017-18 ದಿನಾಂಕ:27.1.2018ರ ಪತ್ರದಲ್ಲಿ ಸರ್ವಜ್ಞನಗರ ವಿಧಾನ ಸಭಾಕ್ಷೇತ್ರಕ್ಕೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳೊಯಿಂದ ಸರ್ವರಿಗೂ ಸೂರು ಯೋಜನೆಯಡಿಯಲ್ಲಿ ಬಡ ವರ್ಗದವರಿಗಾಗಿ 624 ಮನೆಗಳನ್ನು ಕಟ್ಟುತ್ತಿದ್ದು, ಸದರಿ ಯೋಜನೆಯಡಿಯಲ್ಲಿ 392 ಜನೆ ಪರಿಶಿಷ್ಟ ಜಾತಿ ಮತ್ತು 12 ಜನ ಪರಿಶಿಷ್ಟ ಪಂಗಡದವರಿಗೆ ರೂ. 48,000/-ಗಳಂತೆ ಒಟ್ಟು 404 ಫಲಾನುಭಿವಿಗಳಿಗೆ ರೂ.1,93,92,000/- ಮತ್ತು ಇತರೆ ಪಂಗಡಗಳ 220 ಪಲಾನುಭವಿಗಳಿಗೆ ವಂತಿಗೆಯಾಗಿ ರೂ.57,600/- ರೂ.ಗಳಂತೆ ರೂ.12672000/-ಗಳನ್ನು ಒಟ್ಟು 624 ಪಲಾನುಭವಿಗಳಿಗೆ ಒಟ್ಟು ಮೊತ್ತ ರೂ.3,20,64,000/-ಗಳನ್ನು ಪಾವತಿಸಬೇಕಾಗಿರುತ್ತದೆ. ಸದರಿ ನಿವಾಸಿಗಳು ಕಡು ಬಡವರಾಗಿರುವುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಪಂಗಡದ ವಿಶೇಷ ಘಟಕದ ಅನುದಾನದಲ್ಲಿ ಎಸ್‌ಇಪಿ ಯಡಿಯಲ್ಲಿ ರೂ. 3,20,64/-ಗಳನ್ನು (624 ಪಲಾನುಭವಿಗಳಿಗೆ) ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಇವರಿಗೆ ನಿಯಮಾನುಸಾರ ಪಾವತಿ ಮಾಡುವಂತೆ ಆಯುಕ್ತರು, ಬೃಹತ್ ಬೆಂಗಳೂರ ಮಹಾನಗರ ಪಾಲಿಕೆ ರವರಿಗೆ ಪತ್ರ ಮುಖೇನ ಸೂಚಿಸಿರುತ್ತಾರೆ. ಸದರಿ ಪತ್ರದಲ್ಲಿ ಆಯುಕ್ತರು ಕೌನ್ಸಿಲ್ ಕಾರ್ಯದರ್ಶಿಯವರಿಗೆ "Please place it before Social Justice Committee" ಎಂದು ಸೂಚಿಸಿರುತ್ತಾರೆ, ಅದರಂತೆ ಕೌನ್ಸಿಲ್ ಕಾರ್ಯದರ್ಶಿಯವರು ಸದರಿ ಪ್ರಸ್ಥಾವನೆಯನ್ನು ಸಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುತ್ತಾರೆ.

**ಹಾಗೂ**

ಮಾನ್ಯ ಸಚಿವರು ಶ್ರೀ. ಕೆ ಜೆ. ಜಾರ್ಜ್, ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು ಮತ್ತು ಬೆಂಗಳೂರು ನಗರ ಜಿಲ್ಲಾ ಉಸ್ತವಾರಿ ಸಚಿವರ ಪತ್ರ ಸಂಖ್ಯೆ: ಬೆಂ.ಅ&ನ.ಯೋ.ಸ/490/2017-18 ದಿನಾಂಕ:27.1.2018ರ ಪತ್ರದಲ್ಲಿ ಸರ್ವಜ್ಞನಗರ ವಿಧಾನ ಸಭಾಕ್ಷೇತ್ರದಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದವರು ವಾಸ ಮಾಡುತ್ತಿರುವ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು ತುರ್ತಾಗೆ ರೂ.5.00ಕೋಟಿ ಹಣವನ್ನು ಬಿಡುಗಡೆಮಾಡುವಂತೆ ಆಯುಕ್ತರು, ಬೃಹತ್ ಬೆಂಗಳೂರ ಮಹಾನಗರ ಪಾಲಿಕೆ ರವರಿಗೆ ಪತ್ರ ಮುಖೇನ ಸೂಚಿಸಿರುತ್ತಾರೆ. ಸದರಿ ಪತ್ರದಲ್ಲಿ ಆಯುಕ್ತರು ಕೌನ್ಸಿಲ್ ಕಾರ್ಯದರ್ಶಿಯವರಿಗೆ "Please place it before Social Justice Committee" ಎಂದು ಸೂಚಿಸಿರುತ್ತಾರೆ, ಅದರಂತೆ ಕೌನ್ಸಿಲ್ ಕಾರ್ಯದರ್ಶಿಯವರು ಸದರಿ ಪ್ರಸ್ಥಾವನೆಯನ್ನು ಸಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುತ್ತಾರೆ.

**ಮೇಲ್ಕಂಡ ಮಾನ್ಯ ಸಚಿವರ ಪ್ರಸ್ಥಾವನೆಗಳನ್ನು ಸಮಿತಿಯು ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನಿಸಿದೆ:-**

ಮೇಲ್ಕಂಡ ಮಾನ್ಯ ಸಚಿವರ ಪ್ರಸ್ಥಾವನೆಗಳನ್ನು ಸಮಿತಿಯು ಚರ್ಚಿಸಿ, ಮಾನ್ಯ ಸಚಿವರು, ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು ಮತ್ತು ಬೆಂಗಳೂರು ನಗರ ಜಿಲ್ಲಾ ಉಸ್ತವಾರಿ ಸಚಿವರು, ರವರ ಪ್ರಸ್ಥಾವನೆಯನ್ನು ಅನುಮೋದಿಸುತ್ತಾ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು ತೀರ್ಮಾನಿಸಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ: 14.02.2018ರ ಸಭೆಯ ನಿರ್ಣಯ.

***-ಮುಂದೂಡಿದೆ-***

***07]. ವಿಷಯದ ಸಂಖ್ಯೆ: ತೆಆಸ್ಥಾಸ/ 242 /2017-18***

ಪ್ರಧಾನ ಅಭಿಯಂತರರು ರವರ ದಿನಾಂಕ: 14-2-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜ ನಗರ) ಹಾಗೂ ಮುಖ್ಯ ಅಭಯಂತರರು (ಪಶ್ಚಿಮ) ರವರು ದಿ: 30-12-2017 ರಂದು ಮಾನ್ಯ ಶಾಸಕರು ಗೋವಿಂದರಾಜ ನಗರ ವಿಧಾನ ಸಭಾ ಕ್ಷೇತ್ರ ರವರು ಮಾನ್ಯ ಆಯುಕ್ತರು ರವರಿಗೆ ಪತ್ರ ನೀಡಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2016-17ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ-3075 ಅಡಿಯಲ್ಲಿ ವಾರ್ಡ್ ಸಂಖ್ಯೆ:103, 104, 105, 106, 125, 126, 127, 128, & 131 ರಲ್ಲಿನ ಈ ಕೆಳಕಂಡಂತೆ ಜಾಬ್ ಕೋಡ್ ನೀಡಿರುವ ಕಾಮಗಾರಿಗಳಿಗೆ ಬದಲಾಗಿ ವಾರ್ಡ್ ಸಂಖ್ಯೆ;128 ರಲ್ಲಿ ಬದಲಿ ಕಾಮಗಾರಿಗಳನ್ನು ನಿರ್ವಹಿಸಲು ಜಾಬ್ ಸಂಖ್ಯೆ ನೀಡಲು ಹಾಗೂ ಸದರಿಕಾಮಗರಿಗಳನ್ನು ತುರ್ತಾಗಿ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ನಿರ್ವಹಿಸಲು ಅಗತ್ಯ ಕ್ರಮವಹಿಸಲು ಕೋರಿರುತ್ತಾರೆ.

| ಕ್ರ. ಸಂ | ಪಿ.ಆರ್.ನಂ, ದಿ | ಈಗಾಗಲೇ ಜಾಬ್ ಕೋಡ್ ಪಡೆದ ಕಾಮಗಾರಿ | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಬದಲಿ ಕಾಬ್ ಕೋಡ್ ನೀಡಲು ಕೋರಿರುವ ಕಾಮಗಾರಿ | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|---|---|---|---|
| 1 | **EIC/PR/11084 / 2017-18, Dt:14-02-2018** | Providing asphalting to 23 cross Govindha nagar Govindarajaswamy Temple backside road in ward No.104 and providing asphalting to Gangadhara Layout cross roads in ward No.104 (104-17-000056) | 50.00 | Providing balance works to Chandra layout park at 11th cross road near SWD in warf No.128 | 50.00 |

| | | | | | |
|---|---|---|---|---|---|
| 2 | **EIC/PR/11083 /2017-18, Dt:14-02-2018** | Providing drinking water filter units of works in Govindarajanagara constituency (Keonics) in ward No.103, 104, 105, 106, 125, 126, 127, 128 and 131 (103-17-000075) | 200.00 | Providing asphalting to cross roads of Chandra layout 1stage, 1phase in ward No.128 | 100.00 |
| | | | | Providing asphalting to cross roads of Chandra layout 1st stage 11 phase in wad No.128 | 100.00 |
| 3 | **EIC/PR/ 11084/2017-18, Dt:14-02-2018** | Development of park in metro rail entire stretch along the road side in Govindarajanagara constituency in ward No.104, 105 & 125 (125-17-000039) | 100.00 | Providing ornamental Grill to park at BCC Layout beside indira canteen in ward No.128 | 70.00 |
| | | | | Improvement s to Drain of western side of 11th cross Chandra layout in ward No.128 | 30.00 |
| | | **TOTAL** | **350.00** | **TOTAL** | **350.00** |

ಮುಂದುವರೆದು ಮಾನ್ಯ ಶಾಸಕರು ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರ ರವರ ಕೋರಿಕೆಯಂತೆ ಬದಲಿ ಕಾಮಗಾರಿಗಳಿಗೆ ಹೊಸದಾಗಿ ಜಾಬ್ ಕೋಡ್ ನಂಬರ್ ನೀಡಲು ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿದ್ದು, ಮುಖ್ಯ ಅಭಿಯಂತರರು (ದಕ್ಷಿಣ) ರವರು ಶಿಫಾರಸ್ಸು ಮಾಡಿದ್ದು, ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರು ರವರು ಪ್ರಸ್ಥಾವನೆಯ ಸೂಕ್ತ ತೀರ್ಮಾನಕ್ಕಾಗಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು ಒಪ್ಪಿಗೆ ನೀಡಿರುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿ ರವರು ಪ್ರಸ್ತಾವನೆಯನ್ನು ಪರಿಶೀಲಿಸಿ 2017–18 ರ ಆಯವ್ಯಯದಲ್ಲಿನ ಲೆಕ್ಕ ಶೀರ್ಷಿಕೆ ಪಿ–3075 ಅಡಿ ಮುಂದುವರೆದ ಕಾಮಗಾರಿಗಳ ಅಡಿ ಅನುದಾನ ಮೀಸಲಿರಿಸಿರುವುದಿಲ್ಲ ಬಾಕಿ ಬಿಲ್ಲುಗಳ ಅಡಿ ಪಾವತಿಗಾಗಿ ರೂ.1000.00 ಲಕ್ಷಗಳ ಅನುದಾನ ಮೀಸಲಿರಿಸಿದೆ ಎಂದು ವರದಿಸುತ್ತಾ 2016–17ನೇ ಸಾಲಿನ ಪಿ–3075 ರಡಿ ವಾರ್ಡ್ ಸಂಖ್ಯೆ:103, 104, 105, 106, 125, 126, 127, 128, & 131 ನೀಡಲಾದ ಜಾಬ್ ಕೋಡ್ 104–17–000056, 125-17-000039 & 125–17–000039 ರದ್ದುಗೊಳಿಸಿ 2016–17 ರ ಪಿ–3075 ರಡಿ ವಾರ್ಡ್ ಸಂಖ್ಯೆ:128 ರ 03 ಕಾಮಗಾರಿಗಳಿಗೆ ರೂ.350.00 ಲಕ್ಷಗಳಿಗೆ ಬದಲಿ ಜಾಬ್ ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯಂತೆ ಕ್ರಮ ವಹಿಸಬಹುದಾಗಿದೆ ಎಂದು ಅಭಿಪ್ರಾಯಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರು ರವರು ಆದೇಶಿಸಿದಂತೆ 2016–17 ನೇ ಸಾಲಿನ ಪಿ–3075 ರಡಿ ವಾರ್ಡ್ ಸಂಖ್ಯೆ:103, 104, 105, 106, 125, 126, 127, 128, & 131 ನೀಡಲಾದ ಜಾಬ್ ಕೋಡ್ 104–17–000056, 125-17-000039 & 125–17–000039 ರದ್ದುಗೊಳಿಸಿ 2016–17 ರ ಪಿ–3075 ರಡಿ ವಾರ್ಡ್ ಸಂಖ್ಯೆ:128 ರ 03 ಕಾಮಗಾರಿಗಳಿಗೆ ರೂ.350.00 ಲಕ್ಷಗಳಿಗೆ ಬದಲಿ ಜಾಬ್ ಸಂಖ್ಯೆ ನೀಡಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

***08]. ವಿಷಯದ ಸಂಖ್ಯೆ: ತೆಆಸ್ಥಾಸ/ 243 /2017–18***

ಆಯುಕ್ತರ ದಿನಾಂಕ: 06–02–2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಜಯನಗರ ನೇಚರ್ ಕ್ಯೂರ್ (ರಿ), ನಂ 1537/1, 9ನೇ ಮುಖ್ಯರಸ್ತೆ, 3ನೇ ಬ್ಲಾಕ್, ಜಯನಗರ, ಬೆಂಗಳೂರು–560011, ರವರಿಗೆ 2017–18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ,

ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-03ರಲ್ಲಿ, ಕ್ರಮ ಸಂಖ್ಯೆ: 64 ರಲ್ಲಿ ಮೊತ್ತ ರೂ.100.00 (ಒಂದು ನೂರು) ಲಕ್ಷಗಳನ್ನು ಸದರಿ ಸಂಸ್ಥೆಗೆ ಮೀಸಲಿರಿಸಲಾಗಿರುತ್ತದೆ.

ಈ ಸಂಬಂಧವಾಗಿ ಮಾನ್ಯ ಆಯುಕ್ತರ ಅದೇಶ ಸಂಖ್ಯೆ: ಮುಲೆಅ/ಪಿಆರ್/254/2017-18, ದಿನಾಂಕ:27-12-2017ರಲ್ಲಿ ತಿಳಿಸಿರುವಂತೆ ಸದರಿ ಸಂಸ್ಥೆಯವರಿಗೆ ಮೀಸಲಿಟ್ಟಿರುವ ಮೊತ್ತ ರೂ.100.00 (ಒಂದು ನೂರು) ಲಕ್ಷಗಳಲ್ಲಿ ಶೇ.25ರಷ್ಟು ಬಿಡುಗಡೆ ಮಾಡಬಹುದಾಗಿದ್ದು ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ಅನುಮೋದಿತ ಆಯವ್ಯಯದಲ್ಲಿ ಹಣ ಬಿಡುಗಡೆ ಮಾಡುವ ಬಗ್ಗೆ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ರೂ.5.00 (ರೂ. ಐದು ಲಕ್ಷ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

***09]. ವಿಷಯದ ಸಂಖ್ಯೆ: ತೆಆಸ್ಥಾಸ/ 248 /2017-18***

ಆಯುಕ್ತರ ದಿನಾಂಕ: 05-01-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ ಅಬ್ದುಲ್ ರಕೀಬ್ ಝಾಕೀರ್, ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ರವರ ಪತ್ರದ ಸಂ:ಸಾನ್ಯಾಸ್ಥಾಸ/ಎಲ್/06/17-18, ದಿ:06-12-2017ರ ಟಿಪ್ಪಣಿಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ವಾಸವಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಏಳಿಗೆಗಾಗಿ ಹಾಗೂ ಅವರುಗಳು ವಾಸಿಸುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಅಭಿವೃದ್ಧಿಪಡಿಸುವುದು ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅತ್ಯಾವಶ್ಯಕವಾಗಿರುತ್ತದೆ. ಆದರೆ ಸೂಕ್ತ ಅನುದಾನದ ಲಭ್ಯವಿಲ್ಲದೆ ಮೇಲಿನ ಜನಾಂಗದ ಏಳಿಗೆಗೆ ಅಡಚಣೆ ಉಂಟಾಗಿರುತ್ತದೆ.

ಆದ್ದರಿಂದ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ವಾಸಿಸುವ ಪ್ರದೇಶಗಳ ಅಭಿವೃದ್ಧಿಯ ಹಿತದೃಷ್ಟಿಯಿಂದ ಪಾಲಿಕೆಯ ಆಯವ್ಯಯದಲ್ಲಿ ಕಲ್ಯಾಣ ಯೋಜನೆಗಳ ವಿವಿಧ ಶೀರ್ಷಿಕೆಯಲ್ಲಿ ಮೀಸಲಿರಿಸಿ, ಉಪಯೋಗವಾಗದೆ ಬಾಕಿ ಉಳಿದಿರುವ ಅನುದಾನವನ್ನು ಕ್ರೋಢೀಕರಿಸಿ, ಸರ್ಕಾರದ ಸುತ್ತೋಲೆಯಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ನಿಧಿಯ ಆದಾಯ ಲೆಕ್ಕಚಾರ ಹಾಗೂ ನಿಧಿ ವಿನಿಯೋಗದ ಬಗ್ಗೆ ಹೊರಡಿಸಿರುವ ಪರಿಷ್ಕೃತ ಮಾರ್ಗಸೂಚಿಗಳನ್ನು ಉಲ್ಲಂಘಿಸದಂತೆ ಪರಿಪಾಲಿಸಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕಲ್ಯಾಣಕ್ಕೆ ಮೀಸಲಿರಿಸಿರುವ ಅನುದಾನದಲ್ಲಿ ವರ್ಷಾಂತ್ಯಕ್ಕೆ ಉಳಿತಾಯವಾಗಬಹುದಾದ 2017-18ನೇ ಸಾಲಿನ ಆಯವ್ಯಯದ ಮಿತಿಯೊಳಗೆ ರೂ.100.00 ಕೋಟಿಗಳನ್ನು ಆಯವ್ಯಯದ ಲೆಕ್ಕಶೀರ್ಷಿಕೆ ಪಿ1878ಕ್ಕೆ ಮರುಹೊಂದಾಣಿಕೆ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯು ಕೈಗೊಂಡಿರುವ ದಿನಾಂಕ: 30.12.2017ರ ಸ್ವಯಂ ನಿರ್ಣಯವನ್ನು ಒಪ್ಪುತ್ತಾ, ಆಯುಕ್ತರು ಅಗತ್ಯ ಕ್ರಮಕೈಗೊಳ್ಳಲು ಸಮಿತಿಯು ದಿನಾಂಕ: 02.01.2018ರಂದು ನಡೆದ ಸಭೆಯಲ್ಲಿ ವಿಷಯ ಸಂಖ್ಯೆ:ತೆಆಸ್ಥಾಸ/203/2017-18ರಲ್ಲಿ ತೀರ್ಮಾನಿಸಿ ರುವಂತೆ ಕ್ರಮವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *10]. ವಿಷಯದ ಸಂಖ್ಯೆ: ತೆಆಸ್ಥಾಸ/ 252 /2017-18*

ಪ್ರಧಾನ ಅಭಿಯಂತರರರ ದಿನಾಂಕ: 17-02-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2017-18ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ-3156ರ ಅಡಿಯಲ್ಲಿ ಒಟ್ಟು ಮೊತ್ತ ರೂ.210.00 ಲಕ್ಷಗಳನ್ನು ಅನುವು ಮಾಡಿದ್ದು, ಈ ಅನುದಾನದಲ್ಲಿ ಈ ಪೈಕಿ ದಕ್ಷಿಣ ವಲಯಕ್ಕೆ ಕಾಮಗಾರಿಯಾದ Supply of labourers, machinaries and Vehicles to south zone control room to combat emergencies during night hours ರೂ.23.90 ಲಕ್ಷಗಳ ಮೊತ್ತಕ್ಕೆ ಜಾಬ್ ಕೋಡ್ ನೀಡಲು ಕಂಡಿಕೆ (09)ರಲ್ಲಿ ಜಂಟಿ ಆಯುಕ್ತರು (ದಕ್ಷಿಣ) ರವರು ವರದಿ ಮಂಡಿಸಿರುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿ ರವರು ಕಂಡಿಕೆ (16)ರಲ್ಲಿ ಲೆಕ್ಕಶೀರ್ಷಿಕೆ ಪಿ-3156ರ ಅಡಿಯಲ್ಲಿ ಸದರಿ ಒಟ್ಟು ಮೊತ್ತ ರೂ.210.00 ಲಕ್ಷಗಳನ್ನು ಅನುವು ಮಾಡಿದ್ದು, ಸದರಿ ಕಾಮಗಾರಿಗೆ ಅನುದಾನ ಲಭ್ಯವಿರುವುದಿಲ್ಲ ಮತ್ತು ಕೊರತೆ ಅನುದಾನವಾದ ರೂ.23.90 ಲಕ್ಷಗಳಿಗೆ ಮರು ಹೊಂದಾಣಿಕೆಗೆ ಸಮಿತಿಗೆ ಅನುಮೋದನೆಗೆ ಸಲ್ಲಿಸಲು ವರದಿ ಸಲ್ಲಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರ ಆದೇಶದಂತೆ, ದಕ್ಷಿಣ ವಲಯದಲ್ಲಿ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಕೊರತೆಯ ಮೊತ್ತ ರೂ.23.90 ಲಕ್ಷಗಳಿಗೆ ಮರುಹೊಂದಣಿಕೆಯ ಅನುಮೋದನೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಪ್ರಸ್ತಾಪಿತ ಕಾಮಗಾರಿಗೆ ಕೊರತೆಯಿರುವ ಅನುದಾನವನ್ನು 2018-19ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಭರಿಸಿಕೊಳ್ಳುವ ಷರತ್ತಿಗೆ ಒಳಪಟ್ಟು ಪಾವತಿಗೆ ಕ್ರಮವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *11]. ವಿಷಯದ ಸಂಖ್ಯೆ: ತೆಆಸ್ಥಾಸ/ 256 /2017-18*

ಆಯುಕ್ತರ ದಿನಾಂಕ: 03.11.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಳೇ ವಾರ್ಡ್ ಸಂಖ್ಯೆ: 5 ಕೋದಂಡರಾಮಪುರ ಹೊಸ ವಾರ್ಡ್ ಸಂಖ್ಯೆ: 64 ರಾಜಮಹಲ್ ಗುಟ್ಟಹಳ್ಳಿ ಮಲ್ಲೇಶ್ವರಂ ಈಜುಕೊಳದ ಬಡಾವಣೆ 6ನೇ ಅಡ್ಡ ರಸ್ತೆಯಲ್ಲಿರುವ ನಗರ ಪಾಲಿಕೆ ನಿವೇಶನ 60*90=5400 ಚದರ ಅಡಿಗಳ ವಿಸ್ತೀರ್ಣದ ಜಾಗವನ್ನು ಸಂಸ್ಕೃತಿಕ ಕೇಂದ್ರವನ್ನು ದಿನಾಂಕ: 13-08-1957 ರಿಂದ 30 ವರ್ಷಗಳ ಅವಧಿಗೆ ವಾರ್ಷಿಕ ರೂ. 6/ ಗಳಂತೆ, ಗುತ್ತಿಗೆಗೆ ನೀಡಿದ್ದು ಸದರಿ ಗುತ್ತಿಗೆಯ ಅವಧಿಯು ದಿನಾಂಕ: 12-08-1987 ರಂದು ಮುಕ್ತಾಯಗೊಂಡಿರುತ್ತದೆ. ಸದರಿ ಸಂಸ್ಥೆಯವರು ದಿನಾಂಕ: 15-12-2003 ರಂದು 90 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಲು ಮನವಿ ಸಲ್ಲಿಸಿರುತ್ತಾರೆ.

ಸದರಿ ಸಂಸ್ಥೆಯವರು ಸದರಿ ಜಾಗದಲ್ಲಿ ಒಂದು ಗಣೇಶ ದೇವಸ್ಥಾನ, ಲಕ್ಷ್ಮಿವೆಂಕಟೇಶ್ವರ ದೇವಸ್ಥಾನ, ಆಂಜನೇಯ ಸ್ವಾಮಿ, ನವಗ್ರಹ ದೇವಸ್ಥಾನಗಳನ್ನು ನಿರ್ಮಿಸಿರುತ್ತಾರೆ. ಸದರಿ ಸಂಸ್ಥೆಯನ್ನು ಬಡಾವಣೆಯ ಅಂದಿನ ಹಿರಿಯ ನಾಗರೀಕರು 1955-56 ರಲ್ಲಿ ಸ್ಥಾಪಿಸಿ, ನೋಂದಾಯಿಸಿ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಸಾರ್ವಜನಿಕ ಸೇವಾಕೇಂದ್ರವಾಗಿ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಸಂಸ್ಥೆಯು ನಡೆಸುತ್ತಿರುವ ಸೇವಾಕಾರ್ಯ ಚಟುವಟಿಕೆಗಳಲ್ಲಿ ಬಡ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಉಚಿತ ಪಾಠ ಪ್ರವಚನ, ಶಿಶುವಿಹಾರ ಕೇಂದ್ರ, ಉಚಿತ ವಾಚನಾಲಯ, ಹಾಗೂ ದೈಹಿಕ ವ್ಯಾಯಾಮ ತರಬೇತಿ ಹಾಗೂ ಯೋಗಾಭ್ಯಾಸ, ಸಾರ್ವಜನಿಕ ಉಚಿತ ತಪಾಸಣಾ ಶಿಬಿರಗಳನ್ನು ನಡೆಸಿಕೊಂಡು ಬರುತ್ತಿದ್ದು, ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ಗುತ್ತಿಗೆ ಅವಧಿಯನ್ನು 90 ವರ್ಷಗಳಿಗೆ ವಿಸ್ತರಿಸಿ, ನಾಮ ಮಾತ್ರದ ಕನಿಷ್ಠ ಗುತ್ತಿಗೆ ಹಣವನ್ನು ನಿಗಧಿಪಡಿಸಿ ನವೀಕರಿಸಲು ಕೋರಿರುತ್ತಾರೆ.

ಈ ಬಗ್ಗೆ ಮಲ್ಲೇಶ್ವರಂ, ವಿಧಾನ ಸಭಾ ಕ್ಷೇತ್ರದ ಶಾಸಕರು ಶಿಫಾರಸ್ಸು ಪತ್ರ ಬರೆದು ಸಂಸ್ಕೃತಿ ಕೇಂದ್ರ ಒಂದು ಸೇವಾ ಸಂಸ್ಥೆಯಾಗಿರುವುದರಿಂದ ಅತ್ಯಂತ ಕಡಿಮಗೆ ಗುತ್ತಿಗೆ ಹಣ ವಿಧಿಸಿ, ಮುಂದಿನ 30 ವರ್ಷಗಳ ಅವಧಿಗೆ ವಿಸ್ತರಿಸಬೇಕೆಂದು ಕೋರಿರುತ್ತಾರೆ.

ಸದರಿ ಸಂಸ್ಥೆಯವರಿಗೆ ಗುತ್ತಿಗೆ ಮುಕ್ತಾಯಗೊಂಡಿರುವ ದಿನಾಂಕದಿಂದ ಅಂದರೆ, ದಿನಾಂಕ: 13–08–1987 ರಿಂದ 12–08–2002 ರವರೆಗೆ (15–ವರ್ಷಗಳಿಗೆ) ಹಿಂದೆ ನಿಗದಿಪಡಿಸಿದ್ದ ವಾರ್ಷಿಕ ರೂ. 6/– ರಂತೆ ನಿಗಧಿಪಡಿಸಬಹುದು. ದಿನಾಂಕ: 01–03–2002ರ ಸುತ್ತೋಲೆಯಲ್ಲಿ ಪಾಲಿಕೆ ಸ್ವತ್ತುಗಳನ್ನು ಗುತ್ತಿಗೆ ಅಥವಾ ಕಾಯಂ ಪರಭಾರೆ ಮಾಡುವಾಗ, ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ನಿಗಧಿ ಮಾಡಿದ್ದು ಅದರಂತೆ, ಸ್ವತ್ತಿನ ಪ್ರಸ್ತುತ ಮಾರುಕಟ್ಟೆ ಬೆಲೆಯು ಕನಿಷ್ಠ ಶೇ: 10 ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿಗಧಿಪಡಿಸಬೇಕಾಗುತ್ತದೆ. ದಿನಾಂಕ: 12–07–2002ರ ಸರ್ಕಾರದ ಮಾರ್ಗಸೂಚಿ ದರದಂತೆ, ಸದರಿ ಜಾಗದ ಮಾರ್ಗಸೂಚಿ ಮೌಲ್ಯವು ವಾಣಿಜ್ಯ ಉದ್ದೇಶಕ್ಕೆ ಚದರ ಅಡಿಗೆ ರೂ. 1200/– ಗಳಿದ್ದು, 60*90=5400 ಚದರ ಅಡಿ ವಿಸ್ತೀರ್ಣಕ್ಕೆ 5400*1200=64,80,000/– ಗಳಾಗುತ್ತದೆ. ಇದರ ಶೇ: 10 ರಂತೆ ವಾರ್ಷಿಕ ಗುತ್ತಿಗೆ ದರ ರೂ. 6,48,000/– ಗಳಾಗುತ್ತಿದ್ದು, ಮಾಸಿಕ ಗುತ್ತಿಗೆ ದರ ರೂ. 54,000/– ಗಳಾಗುತ್ತದೆ. ಇದರಂತೆ ದಿನಾಂಕ: 13–08–2002 ರಿಂದ 12–08–2004ರವರೆಗೆ ನಿಗದಿಪಡಿಸಬೇಕಾಗಿರುತ್ತದೆ.
ದಿನಾಂಕ: 21–07–2004ರ ಸರ್ಕಾರದ ಮಾರ್ಗಸೂಚಿ ದರದಂತೆ, ಸದರಿ ಜಾಗದ ಮೌಲ್ಯವು ಮಾಣಿಜ್ಯ ಉದ್ದೇಶಕ್ಕೆ ಚದರ ಅಡಿಗೆ ರೂ. 1680/–ಗಳಿದ್ದು, 60*90=5400 ಚದರ ಅಡಿ ವಿಸ್ತೀರ್ಣಕ್ಕೆ 5400*1680=90,72,000/– ಗಳಾಗುತ್ತದೆ. ಇದರ ಶೇ: 10 ರಂತೆ ವಾರ್ಷಿಕ ಗುತ್ತಿಗೆ ದರ ರೂ. 9,07,200/– ಗಳಾಗುತ್ತಿದ್ದು, ಮಾಸಿಕ ಗುತ್ತಿಗೆ ದರ ರೂ, 75,000/–ಗಳಾಗುತ್ತದೆ. ಇದರಂತೆ ದಿನಾಂಕ: 13–08–2004 ರಿಂದ 12–08–2007ರವರೆಗೆ ನಿಗಧಿಪಡಿಸಬೇಕಾಗಿರುತ್ತದೆ.

ದಿನಾಂಕ: 17–07–2007ರ ಸರ್ಕಾರದ ಮಾರ್ಗಸೂಚಿ ದರದಂತೆ, ಸದರಿ ಜಾಗದ ಮೌಲ್ಯವು ವಾಣಿಜ್ಯ ಉದ್ದೇಶಕ್ಕೆ ಚದರ ಅಡಿಗೆ ರೂ. 3360/–ಗಳಿದ್ದು, 60*90=5400 ಚದರ ಅಡಿ ವಿಸ್ತೀರ್ಣಕ್ಕೆ 5400*3360=1,81,44,000/–ಗಳಾಗುತ್ತದೆ. ಇದರ ಶೇ 10 ರಂತೆ ವಾರ್ಷಿಕ ಗುತ್ತಿಗೆ ದರ ರೂ. 18,14,400/–ಗಳಾಗುತ್ತಿದ್ದು, ಮಾಸಿಕ ಗುತ್ತಿಗೆ ದರ ರೂ. 1,51,200/– ಗಳಾಗುತ್ತದೆ. ಇದರಂತೆ ದಿನಾಂಕ: 13–08–2007 ರಿಂದ ತಹಲ್‌ವರೆಗೂ ಹಾಗೂ ನವೀಕರಿಸಬಹುದಾಗ ಗುತ್ತಿಗೆ ಅವಧಿಗೂ ಸಹ ನಿಗದಿಪಡಿಬೇಕಾಗುತ್ತದೆ.

ಸದರಿ ಸಂಸ್ಥೆಯ ಗುತ್ತಿಗೆ ಅವಧಿಯನ್ನು ದಿನಾಂಕ: 27–05–2011 ರಿಂದ 10–01–2016ರವರೆಗೆ 5 ವರ್ಷಗಳ ಕಾಲ ಅವಧಿಗೆ ಗುತ್ತಿಗೆ ನೀಡಿರುವ ಕರಾರು ಪತ್ರ ನೊಂದಾಯಿಸಲಾಗಿದೆ. ಪತ್ರ ನೊಂದಣಿ ಸಂಖ್ಯೆ: MLS-1-00428/2011-12 C.D ಸಂಖ್ಯೆ: 30 ದಿನಾಂಕ: 08–07–2011 ರಂದು ಹಿರಿಯ ಉಪನೊಂದಾವಣೆ ಕಛೇರಿ ಮಲ್ಲೇಶ್ವರಂ ಬೆಂಗಳೂರು ಇಲ್ಲಿ ನೊಂದಾಯಿಸಲಾಗಿರುವುದು ಪತ್ರದಿಂದ ಕಂಡುಬಂದಿರುತ್ತದೆ. ಸದರಿ ಗುತ್ತಿಗೆ ಅವಧಿಯು 10–01–2016ಕ್ಕೆ ಮುಕ್ತಾಯಗೊಂಡಿರುತ್ತದೆ. ಸದರಿ ಸಂಸ್ಥೆಯವರು 2013–14, 2014–15, 2015–16 ಈ ಮೂರು ವರ್ಷಗಳ ವಾರ್ಷಿಕ ಗುತ್ತಿಗೆ ಹಣ ರೂ. 5000/– ಗಳಂತೆ ಒಟ್ಟು ರೂ. 15000/– ಪಾಲಿಕೆಗೆ ಪಾವತಿ ಮಾಡಿರುತ್ತಾರೆ. ರಶೀದಿ ಸಂಖ್ಯೆ: RE-ifms151-misc/000116 ದಿನಾಂಕ: 02–12–2015.

ದಿನಾಂಕ: 27–10–2014ರ ಸರ್ಕಾರದ ಮಾರ್ಗಸೂಚಿ ದರದಂತೆ, ಸದರಿ ಜಾಗದ ಮೌಲ್ಯವು ವಾಣಿಜ್ಯ ಉದ್ದೇಶಕ್ಕೆ ಚದರ ಅಡಿಗೆ ರೂ. 7500/–ಗಳಿದ್ದು, 60*90=5400 ಚದರ ಅಡಿ ವಿಸ್ತೀರ್ಣಕ್ಕೆ 54*7500=4,05,00,000/–ಗಳಾಗುತ್ತದೆ. ಇದರ ಶೇ: 10 ರಂತೆ ವಾರ್ಷಿಕ ಗುತ್ತಿಗೆ ದರ ರೂ. 40,50,000/– ಗಳಾಗುತ್ತಿದ್ದು, ಮಾಸಿಕ ಗುತ್ತಿಗೆ ದರ ರೂ. 3.37,500/–ಗಳಾಗುತ್ತದೆ. ಇದರಂತೆ ದಿನಾಂಕ:

11–01–2016 ರಿಂದ ತಹಲ್‌ವರೆಗೂ ಹಾಗೂ ನವೀಕರಿಸಬಹುದಾದ ಗುತ್ತಿಗೆ ಅವಧಿಗೂ ಸಹ ನಿಗದಿಪಡಿಸಬೇಕಾಗುತ್ತದೆ.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ರವರು ಪಾಲಿಕೆಗೆ ಪತ್ರ ಬರೆದು ಸದರಿ ಸಂಸ್ಕೃತಿ ಕೇಂದ್ರಕ್ಕೆ ಗುತ್ತಿಗೆಗೆ ನೀಡಿರುವ ಜಾಗವನ್ನು ಮುಂದಿನ (2016 ರಿಂದ 2046) 30 ವರ್ಷಗಳ ಕಾಲಾವಧಿಗೆ ನವೀಕರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕೋರಿರುವ ಮೇರೆಗೆ ಮೇಲ್ಕಂಡ ವಿವರವಾದ ಟಿಪ್ಪಣಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ **ಆಯುಕ್ತರ ದಿನಾಂಕ: 03–11–2017ರ ಟಿಪ್ಪಣಿಯ ಬಗ್ಗೆ ಚರ್ಚಿಸಿ ಸಂಸ್ಕೃತಿ ಕೇಂದ್ರಕ್ಕೆ ಗುತ್ತಿಗೆ ನವೀಕರಿಸಲು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 06.02.2018ರ ಸಭೆಯ ನಿರ್ಣಯ.**

**ನಿರ್ಣಯ: ಆಯುಕ್ತರ ದಿನಾಂಕ: 03.11.2017ರ ಟಿಪ್ಪಣಿಯನ್ನು ಒಪ್ಪುತ್ತಾ, ಮಾಸಿಕ ದರ ರೂ.25,000/– (ರೂ.ಇಪ್ಪತ್ತೈದು ಸಾವಿರ ಮಾತ್ರ)ಗಳ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *12]. ವಿಷಯದ ಸಂಖ್ಯೆ: ತೆಆಸ್ಥಾಸ/ 267 /2017–18*

ಪ್ರಧಾನ ಅಭಿಯಂತರರ ದಿನಾಂಕ: 27–02–2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ಸಂಖ್ಯೆ: 119 ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡ್ ವ್ಯಾಪ್ತಿಯಲ್ಲಿ Construction of M.S.Building at Dasappa Hospital Premissesin ward No.119 ನಿರ್ಮಾಣದ ಕಾಮಗಾರಿಗಳನ್ನು ಕೈಗೊಳ್ಳಲು ಪಿ–3173 (Special Development Works) ಅನುದಾನದಡಿಯಲ್ಲಿ ಕೈಗೆತ್ತಿಕೊಳ್ಳಲು ಜೌಬ್‌ಸಂಖ್ಯೆ ನೀಡಲು ಹಾಗೂ ಕ್ರಿಯಾಯೋಜನೆ ಅನುಮೋದನೆಗೆ ಮುಖ್ಯ ಅಭಿಯಂತರರು (ದಕ್ಷಿಣ) ಪ್ರಸ್ತಾವನೆ ಸಲ್ಲಿಸಿದ್ದು, ಕಾಮಗಾರಿಯ ವಿವರಗಳು ಈ ಕೆಳಕಂಡಂತ್ತಿದೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| 1 | Construction of M.S.Building at Dasappa Hospital Premissesin ward No.119 | 99.00 |

ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳು ರವರು ಅನುದಾನ ಲಭ್ಯತೆಯ ಬಗ್ಗೆ ವರದಿ ಮಾಡಿರುವಂತೆ ಲೆಕ್ಕಶೀರ್ಷಿಕೆ ಪಿ–3173 ರ ಅಡಿ ಚಾಲ್ತಿ ಕಾಮಗಾರಿಗಳಿಗೆ ಅನುದಾನ ಮೀಸಲಿರಿಸಿರುವುದಿಲ್ಲವೆಂದು ತಿಳಿಸುತ್ತಾ, ಹೆಚ್ಚುವರಿ ಅನುದಾನ ಅಳವಡಿಸಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಅಭಿಪ್ರಾಯಿಸಿದ್ದು, ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರು ರವರು ಪ್ರಸ್ತಾವನೆಯ ಸೂಕ್ತ ತೀರ್ಮಾನಕ್ಕಾಗಿ ಟಿಪ್ಪಣಿಯೊಂದಿಗೆ ಮಂಡಿಸಲು ಒಪ್ಪಿಗೆ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರು ರವರು ಆದೇಶಿಸಿದಂತೆ ಸದರಿ ಕಾಮಗಾರಿಯ ಅಂದಾಜು ಮೊತ್ತವಾದ ರೂ.99.00 ಲಕ್ಷಗಳನ್ನು 2017–18ನೇ ಸಾಲಿನ ಲೆಕ್ಕಶೀರ್ಷಿಕೆ ಪಿ–3173 ರಡಿಯಲ್ಲಿ ಚಾಲ್ತಿ ಕಾಮಗಾರಿಗಳ ಅಡಿಯಲ್ಲಿ ಹೆಚ್ಚುವರಿ ಅನುದಾನವನ್ನು ಅಳವಡಿಸಿಕೊಂಡು ಜಾಬ್‌ಕೋಡ್ ನೀಡಲು

ಹಾಗೂ ಮೇಲ್ಕಾಣಿಸಿದ ಪ್ರಸ್ತಾಪಿತ ಕಾಮಗಾರಿಯ ಅಂದಾಜು ಮೊತ್ತವಾದ ರೂ.99.00 ಲಕ್ಷಗಳ ಕಾಮಗಾರಿಗೆ ಕ್ರಿಯಾಯೋಜನೆ ಅನುಮೋದನೆ ಹಾಗೂ ಜಾಬ್‌ಕೋಡ್ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆರ್ಥಿಕ ವರ್ಷವು ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿದೆ.**

## ***13]. ವಿಷಯದ ಸಂಖ್ಯೆ: ತೆಆಸ್ಥಾಸ/ 279 /2017-18***

ಪ್ರಧಾನ ಅಭಿಯಂತರರ ದಿನಾಂಕ: 15-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ಸಂಖ್ಯೆ: 134ರಲ್ಲಿ (ಬಾಪೂಜಿ ನಗರ) ವಾರ್ಡ್ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ ಪಿ-3253 (Special Development works) ಅನುದಾನದಡಿಯಲ್ಲಿ ಕೈಗೆತ್ತಿಕೊಳ್ಳಲು ಜಾಬ್ ಸಂಖ್ಯೆ ನೀಡಲು ಹಾಗೂ ಕ್ರಿಯಾ ಯೋಜನೆ ಅನುಮೋದನೆಗೆ ಮುಖ್ಯ ಅಭಿಯಂತರರು (ಪಶ್ಚಿಮ) ಪ್ರಸ್ತಾವನೆ ಸಲ್ಲಿಸಿದ್ದು, ಕಾಮಗಾರಿಯ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| 1 | Providing Street Light fittings, Timer, Switches and Accessories to Bapujinagar, shamanna garden surrounding area in ward no.134 | 50.00 |

2017-18 ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ-2353 ಅಡಿ ವಾರ್ಡ್ 47ರ ಕಾಮಗಾರಿಗಳಿಗೆ ರೂ.1500.00 ಲಕ್ಷಗಳ ಅನುದಾನ ನಿಗಧಿಪಡಿಸಿದೆ. ಪೂಜ್ಯ ಮಾಹಪೌರರು ಪತ್ರ ಸಂಖ್ಯೆ. ಮಪೌ/ಆಶಾ/ಪಿಆರ್/50/ 2017-18, ದಿ:14-02-2018ರ ಪತ್ರದಲ್ಲಿ ಪಿ2353 ಅಡಿ ವಾರ್ಡ್ 47ಕ್ಕೆ ಮೀಸಲಿಟ್ಟಿರುವ ಅನುದಾನದಲ್ಲಿ ವಾರ್ಡ್ 134 ಕ್ಕೆ ರೂ.50.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿ ಜಾಬ್ ಕೋಡ್ ನೀಡಲು ಕೋರಿರುತ್ತಾರೆ.

ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳು ರವರು ಅನುದಾನ ಲಭ್ಯತೆಯ ಬಗ್ಗೆ ವರದಿ ಮಾಡಿರುವಂತೆ, 2017-18 ನೇ ಸಾಲಿನ ಪಾಲಿಕೆ ಅಯವ್ಯಯದ ಪಿ-2353 ಅಡಿಯಲ್ಲಿ ರೂ.704.00 ಲಕ್ಷಗಳ ಅನುದಾನ ಲಭ್ಯವಿರುತ್ತದೆ. ವಾರ್ಡ್ 47ರ ಮೊತ್ತ ರೂ.900.00 ಲಕ್ಷಗಳ ಅನುದಾನದಲ್ಲಿ ವಾರ್ಡ್ ಸಂಖ್ಯೆ.134ರ ಪ್ರಸ್ತಾವನೆಯ ಮೊತ್ತ ರೂ.50.00ಲಕ್ಷಗಳ ಅನುದಾನ ಹಂಚಿಕೆ ಮಾಡಿ ಜಾಬ್ ಕೋಡ್ ನೀಡುವ ಬಗ್ಗೆ ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿ ಮಂದೆ ಮಂಡಿಸಲು ಕೋರಿರುತ್ತಾರೆ ಹಾಗು ಮೇಲ್ಕಂಡ ಉಲ್ಲೇಖದ ಅಡಿಯಲ್ಲಿ ಮಾನ್ಯ ಅಯುಕ್ತರವರು ಪ್ರಸ್ಥಾವನೆಯ ಅನುಮೋದನೆಗೆ ಸ್ಥಾಯಿ ಸಮಿತಿಯ ಮಂದೆ ಮಂಡಿಸಲು ಒಪ್ಪಿಗೆ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರು ರವರು ಆದೇಶಿಸಿದಂತೆ 2017-18ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ-2353 ಅಡಿಯಲ್ಲಿ ಲಭ್ಯವರುವ ರೂ.704.00 ಲಕ್ಷಗಳ ಅನುದಾನದಲ್ಲಿ ವಾರ್ಡ್ 47ರ ಮೊತ್ತ ರೂ.900.00 ಲಕ್ಷಗಳ ಅನುದಾನದಲ್ಲಿ ವಾರ್ಡ್ ಸಂಖ್ಯೆ.134ರ ಪ್ರಸ್ತಾವನೆಯ ಮೊತ್ತ ರೂ.50.00ಲಕ್ಷಗಳ ಅನುದಾನ ಹಂಚಿಕೆ ಮಾಡಿ ಮೇಲ್ಕಾಣಿಸಿದ ಕಾಮಗಾರಿಗೆ ಜಾಬ್ ಕೋಡ್ ನೀಡುವ ಬಗ್ಗೆ ಹಾಗೂ

ಕಾಮಗಾರಿಯ ಕ್ರಿಯಾ ಯೋಜನೆ ಅನುಮೋದನೆ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆರ್ಥಿಕ ವರ್ಷವು ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿದೆ.**

***14]. ವಿಷಯದ ಸಂಖ್ಯೆ: ತೆಆಸ್ಥಾಸ/ 298 /2017-18***

ಆಯುಕ್ತರ ದಿನಾಂಕ: 12-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಯಂಗ್‌ಸ್ಟರ್ಸ್ ಕಬ್ಬಡ್ಡಿ ಕ್ಲಬ್ (ರಿ), ನಂ.95, ಸುಬ್ಬಯ್ಯ ರಸ್ತೆ, ಕೋದಂಡರಾಮಪುರ, ಮಲ್ಲೇಶ್ವರ, ಬೆಂಗಳೂರು-560003, ರವರು ಕ್ರೀಡಾ ಹಾಗೂ ಪರಿಸರ ಕೆಲಸ ಕಾರ್ಯಗಳನ್ನು ಸುಗಮವಾಗಿ ನಡೆಸುತ್ತಿದ್ದು, 2017-18ನೇ ಸಾಲಿನ ಆಯವ್ಯಯ, ಲೆಕ್ಕ ಶೀರ್ಷಿಕೆ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-03ರಲ್ಲಿ, ಕ್ರಮ ಸಂಖ್ಯೆ 58ರಲ್ಲಿ ಮೊತ್ತ ರೂ.03.00 (ಮೂರು) ಲಕ್ಷಗಳ ಅನುದಾನ ನೀಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಯಂಗ್‌ಸ್ಟರ್ಸ್ ಕಬ್ಬಡ್ಡಿ ಕ್ಲಬ್ (ರಿ), ಸಂಸ್ಥೆಯವರಿಗೆ 2017-18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-03ರಲ್ಲಿ, ಕ್ರಮ ಸಂಖ್ಯೆ 58ರಲ್ಲಿ ಮೊತ್ತ ರೂ.03.00 (ಮೂರು) ಲಕ್ಷಗಳನ್ನು ಸದರಿ ಸಂಸ್ಥೆಗೆ ಮೀಸಲಿರಿಸಲಾಗಿರುತ್ತದೆ.

ಆದ್ದರಿಂದ, ಯಂಗ್‌ಸ್ಟರ್ಸ್ ಕಬ್ಬಡ್ಡಿ ಕ್ಲಬ್ (ರಿ), ಸಂಸ್ಥೆಯವರಿಗೆ ಮೀಸಲಿಟ್ಟಿರುವ ಮೊತ್ತ ರೂ.03.00 (ಮೂರು) ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ರೂ.1.00 (ರೂ. ಒಂದು ಲಕ್ಷ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

***15]. ವಿಷಯದ ಸಂಖ್ಯೆ: ತೆಆಸ್ಥಾಸ/ 299 /2017-18***

ಆಯುಕ್ತರ ದಿನಾಂಕ: 12-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕರ್ನಾಟಕ ರಕ್ಷಣಾ ವೇದಿಕೆ (ರಿ), ನಂ.25, ಪ್ರವೀಣ್ ಕಟ್ಟಡ, 2ನೇ ಮಹಡಿ, 5ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು-560009, ರವರು ವಿಶ್ವ ಕನ್ನಡಿಗರ ಜಾಗೃತಿ ಸಮಾವೇಶ ಹಾಗೂ ರಾಷ್ಟ್ರೀಯ ಜಾನಪದ ಉತ್ಸವ ಸಮಾರಂಭಕ್ಕೆ, 2017-18ನೇ ಸಾಲಿನ ಆಯವ್ಯಯ, ಲೆಕ್ಕ ಶೀರ್ಷಿಕೆ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-03ರಲ್ಲಿ, ಕ್ರಮ ಸಂಖ್ಯೆ 07ರಲ್ಲಿ ಮೊತ್ತ ರೂ.05.00 (ಐದು) ಲಕ್ಷಗಳ ಅನುದಾನ ನೀಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಕರ್ನಾಟಕ ರಕ್ಷಣಾ ವೇದಿಕೆ (ರಿ), ಸಂಸ್ಥೆಯವರಿಗೆ 2017-18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-03ರಲ್ಲಿ, ಕ್ರಮ ಸಂಖ್ಯೆ 07ರಲ್ಲಿ ಮೊತ್ತ ರೂ.05.00 (ಐದು) ಲಕ್ಷಗಳನ್ನು ಸದರಿ ಸಂಸ್ಥೆಗೆ ಮೀಸಲಿರಿಸಲಾಗಿರುತ್ತದೆ.

ಆದ್ದರಿಂದ, ಕರ್ನಾಟಕ ರಕ್ಷಣಾ ವೇದಿಕೆ (ರಿ), ಸಂಸ್ಥೆಯವರಿಗೆ ಮೀಸಲಿಟ್ಟಿರುವ ಮೊತ್ತ ರೂ.05.00 (ಐದು) ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ರೂ.5.00 (ರೂ. ಐದು ಲಕ್ಷ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

***16]. ವಿಷಯದ ಸಂಖ್ಯೆ: ತೆಆಸ್ಥಾಸ/ 300 /2017-18***

ಆಯುಕ್ತರ ದಿನಾಂಕ: 12-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕಾಡುಮಲ್ಲೇಶ್ವರ ಗೆಳೆಯರ ಬಳಗ (ರಿ), ನಂ.596/2, 1ನೇ ಮಹಡಿ, 15ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003, ರವರು ಸಾಂಸ್ಕೃತಿಕ ಹಾಗೂ ಪರಿಸರ ಜಾಗೃತಿಯ ಕೆಲಸ ಕಾರ್ಯಗಳನ್ನು ಸುಗಮವಾಗಿ ನಡೆಸುತ್ತಿದ್ದು, 2017-18ನೇ ಸಾಲಿನ ಆಯವ್ಯಯ, ಲೆಕ್ಕ ಶೀರ್ಷಿಕೆ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-03ರಲ್ಲಿ, ಕ್ರಮ ಸಂಖ್ಯೆ 19ರಲ್ಲಿ ಮೊತ್ತ ರೂ.03.00 (ಮೂರು) ಲಕ್ಷಗಳ ಅನುದಾನ ನೀಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಕಾಡುಮಲ್ಲೇಶ್ವರ ಗೆಳೆಯರ ಬಳಗ (ರಿ), ಸಂಸ್ಥೆಯವರಿಗೆ 2017-18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-03ರಲ್ಲಿ, ಕ್ರಮ ಸಂಖ್ಯೆ 19ರಲ್ಲಿ ಮೊತ್ತ ರೂ.03.00 (ಮೂರು) ಲಕ್ಷಗಳನ್ನು ಸದರಿ ಸಂಸ್ಥೆಗೆ ಮೀಸಲಿರಿಸಲಾಗಿರುತ್ತದೆ.

ಆದ್ದರಿಂದ, ಕಾಡುಮಲ್ಲೇಶ್ವರ ಗೆಳೆಯರ ಬಳಗ (ರಿ), ಸಂಸ್ಥೆಯವರಿಗೆ ಮೀಸಲಿಟ್ಟಿರುವ ಮೊತ್ತ ರೂ.03.00 (ಮೂರು) ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ರೂ.1.00 (ರೂ. ಒಂದು ಲಕ್ಷ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

***17]. ವಿಷಯದ ಸಂಖ್ಯೆ: ತೆಆಸ್ಥಾಸ/ 301 /2017-18***

ಪ್ರಧಾನ ಅಭಿಯಂತರರು ದಿನಾಂಕ: 15-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಮುಖ್ಯ ಆರ್ಥಿಕ ಅಧಿಕಾರಿಗಳು ರವರಿಗೆ ಪತ್ರ ನೀಡಿ 2016-17 ಸಾಲಿನ ಪಾಲಿಕೆ ಆಯವ್ಯಯ ಲೆಕ್ಕಶೀರ್ಷಿಕೆ ಪಿ-3322 ಅನುದಾನದಡಿ ವಾರ್ಡ್ ಸಂಖ್ಯೆ-63ಕ್ಕೆ ವಿಶೇಷ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ-400.00 ಲಕ್ಷಗಳ ಅನುದಾನ ಹಂಚಿಕೆ ಮಾಡಿದ್ದು, ಲೆಕ್ಕಶೀರ್ಷಿಕೆ ಪಿ-3322ರ ಅನುದಾನದಲ್ಲಿ ರಾಮಮೂರ್ತಿನಗರ ವಾರ್ಡ್ ಸಂಖ್ಯೆ: 26ಕ್ಕೆ ರೂ.100.00 ಲಕ್ಷಗಳ ಅನುದಾನ ಒದಗಿಸಿ ಜಾಬ್ ಸಂಖ್ಯೆ ನೀಡಲು ಸೂಚಿಸಿರುತ್ತಾರೆ.

ಅದರಂತೆ ರಾಮಮೂರ್ತಿನಗರ ವಾರ್ಡ್ ಸಂಖ್ಯೆ-26ರ ಪಾಲಿಕೆ ಸದಸ್ಯರು ಮಾನ್ಯ ಅಧ್ಯಕ್ಷರು ಸೂಚಸಿರುವಂತೆ ರೂ.100.00 ಲಕ್ಷಗಳ 3 ಕಾಮಗಾರಿಗಳಿಗೆ ಅನುದಾನ ಒದಗಿಸಿ ಜಾಬ್ ಸಂಖ್ಯೆ ನೀಡಲು ಈ ಕೆಳಕಂಡ ಕಾಮಗಾರಿಗಳಿಗೆ ಪ್ರಸ್ತಾವನೆ ಕೋರಿರುತ್ತಾರೆ.

| S.No | ward No | P-Code | Name of Work | Est. Cost Rs.in Lakhs |
|---|---|---|---|---|
| 1 | 26 | P-3322 | Improvements to Kalyani area balance works in R.M.Nagara ward No-26 (stage-3) | 45.00 |
| 2 | 26 | P-3322 | Providing & improvements to roads & drains at Akshya Nagara 1st block 15th cross & surrounding area R.M.Nagara ward no-26 | 47.00 |
| 3 | 26 | P-3322 | Providing & improvements drains, culverts at rain damages surrounding area R.M.Nagara ward no-26 | 8.00 |
| | | | **Total Cost** | **100.00** |

ಆದುದರಿಂದ ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರದಲ್ಲಿ ಸೂಚಿಸಿರುವಂತೆ 2017–18ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ ವಿಶೇಷ ಅಭಿವೃದ್ಧಿ ಕಾಮಗಾರಿಗಳು ಪಿ–3322ರ ಅನುದಾನದಲ್ಲಿ ವಾರ್ಡ್ ಸಂಖ್ಯೆ–63ಕ್ಕೆ ರೂ.400.00 ಲಕ್ಷಗಳನ್ನು ಕಾಯ್ದಿರಿಸಿರುವ ಅನುದಾನದಲ್ಲಿ, ಮೇಲ್ಕಂಡ 3 ಕಾಮಗಾರಿಗಳ ಒಟ್ಟು ಅಂದಾಜು ಮೊತ್ತವಾದ ರೂ.100.00 ಲಕ್ಷಗಳನ್ನು ರಾಮಮೂರ್ತಿನಗರ ವಾರ್ಡ್ ಸಂಖ್ಯೆ–26ಕ್ಕೆ ವರ್ಗಾವಣೆ ಮಾಡಲು ಹಾಗೂ ಮೇಲ್ಕಾಣಿಸಿದ ಕಾಮಗಾರಿಗಳಿಗೆ ಪ್ರತ್ಯೇಕವಾಗಿ ಜಾಬ್ ಸಂಖ್ಯೆ ನೀಡಲು ಮುಖ್ಯ ಅಭಿಯಂತರರು (ಮಹದೇವಪುರ) ರವರು ಕೋರಿದ್ದು, ಮೇಲ್ಕಂಡ ಮಾನ್ಯ ಆಯುಕ್ತರವರು ವಾರ್ಡ್ ಅನುದಾನ ಬದಲಾವಣೆ ಪ್ರಸ್ತಾವನೆಯ ಅನುಮೋದನೆಗೆ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಟಿಪ್ಪಣಿಯೊಂದಿಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಲು ಒಪ್ಪಿಗೆ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರು ರವರು ಆದೇಶಿಸದಂತೆ ಈ ಕೆಳಕಂಡ ಅಂಶಗಳಿಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

ವಾರ್ಡ್ ಸಂಖ್ಯೆ–63ಕ್ಕೆ ರೂ.400.00 ಲಕ್ಷಗಳನ್ನು ಕಾಯ್ದಿರಿಸುವ ಅನುದಾನದಲ್ಲಿ, ಮೇಲ್ಕಂಡ 03 ಕಾಮಗಾರಿಗಳ ಒಟ್ಟು ಅಂದಾಜು ಮೊತ್ತವಾದ ರೂ.100.00 ಲಕ್ಷಗಳನ್ನು ರಾಮಮೂರ್ತಿನಗರ ವಾರ್ಡ್ ಸಂಖ್ಯೆ–26ಕ್ಕೆ ವರ್ಗಾವಣೆ ಮಾಡಲು ಹಾಗೂ ಮೇಲ್ಕಾಣಿಸಿದ ಕಾಮಗಾರಿಗೆ ಪ್ರತ್ಯೇಕವಾಗಿ ಜಾಬ್ ಸಂಖ್ಯೆ ನೀಡಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆರ್ಥಿಕ ವರ್ಷವು ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿದೆ.**

## *18]. ವಿಷಯದ ಸಂಖ್ಯೆ: ತೆಆಸ್ಥಾಸ/ 302 /2017-18*

ಪ್ರಧಾನ ಅಭಿಯಂತರರ ದಿನಾಂಕ: 17-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಪೂರ್ವ ವಲಯಕ್ಕೆ ಸೇರಿರುವ ವಾರ್ಡ್ ಸಂಖ್ಯೆ: 47 ಕ್ಕೆ ಲೆಕ್ಕ ಶೀರ್ಷಿಕೆ ಪಿ-2353 ರಲ್ಲಿ ಪ್ರಸ್ತಾಪಿತ 03 ಕಾಮಗಾರಿಗಳಿಗೆ ಅನುವು ಮಾಡಿದ್ದು ಇದರ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ | ಕಾಮಗಾರಿ ವಿವರ | ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1 | Sinking of Borewell and pipe in Hoodi, Kodihalli and sadaramangala in ward no.54 | 50.00 |
| 2 | Sinking of Borewell and pipe in Betlur colony village in ward no.54 | 50.00 |
| 3 | Sinking of Borewell and pipe in Varanasi and bilishivale village in ward no.54 | 50.00 |
| 4 | Sinking of Borewell and pipe in Byrathi and Byrathi Bande village in ward no.54 | 50.00 |

2017-18ನೇ ಸಾಲಿನ ಲೆಕ್ಕಶೀರ್ಷಿಕೆ ಪಿ-2353 ಅಡಿ ವಾರ್ಡ್ 47ರ ಕಾಮಗಾರಿಗಳಿಗೆ ರೂ.1500.00 ಲಕ್ಷಗಳ ಅನುದಾನ ನಿಗಧಿಪಡಿಸಿದೆ. ಪೂಜ್ಯ ಮಹಾಪೌರರ ಪತ್ರ ಸಂಖ್ಯೆ ಮಪೌ/ಆಶಾ/ಪಿಆರ್/53/2017-18, ದಿ: 14.02.2018ರ ಪತ್ರದಲ್ಲಿ ಪಿ-2353 ಅಡಿ ವಾರ್ಡ್ 47ಕ್ಕೆ ಮೀಸಲಿಟ್ಟಿರುವ ಅನುದಾನದಲ್ಲಿ ವಾರ್ಡ್ 54ಕ್ಕೆ ರೂ.200.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿ ಜಾಬ್ ಕೋಡ್ ನೀಡಲು ಕೋರಿರುತ್ತಾರೆ.

ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳು ವರು ಅನುದಾನ ಲಭ್ಯತೆಯ ಬಗ್ಗೆ ವರದಿ ನ್ಮಾಡಿರುವಂತೆ, 2017-18ನೇ ಸಾಲಿನ ಪಾಲಿಕೆ ಆಯವ್ಯಯದ ಪಿ-2353 ಅಡಿಯಲ್ಲಿ ರೂ.504.00 ಲಕ್ಷಗಳ ಅನುದಾನ ಲಭ್ಯವಿರುತ್ತದೆ. ವಾರ್ಡ್ 47ರ ಮೊತ್ತ ರೂ.900.00 ಲಕ್ಷಗಳ ಅನುದಾನದಲ್ಲಿ ವಾರ್ಡ್ ಸಂಖ್ಯೆ: 54ರ ಪ್ರಸ್ತಾವನೆಯ ಮೊತ್ತ ರೂ.200.00 ಲಕ್ಷಗಳ ಅನುದಾನ ಹಂಚಿಕೆ ಮಾಡಿ ಜಾಬ್ ಕೋಡ್ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಕೋರಿರಿತ್ತಾರೆ ಹಾಗೂ ಮೇಲ್ಕಂಡ ಉಲ್ಲೇಖದ ಅಡಿಯಲ್ಲಿ ಮಾನ್ಯ ಆಯುಕ್ತರವರು ಪ್ರಸ್ತಾವನೆಯ ಅನುಮೋದನೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು ಒಪ್ಪಿಗೆ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರ ಆದೇಶಿಸಿದಂತೆ 2017-18ನೇ ಸಾಲಿನ ಲೆಕ್ಕಶೀರ್ಷಿಕೆ ಪಿ-2353 ಅಡಿಯಲ್ಲಿ ಲಭ್ಯವಿರುವ ರೂ.504.00 ಲಕ್ಷಗಳ ಅನುದಾನದಲ್ಲಿ ವಾರ್ಡ್ ವಾರ್ಡ್ ಸಂಖ್ಯೆ:47 ರ ಮೊತ್ತ ರೂ.900.00 ಲಕ್ಷಗಳ ಅನುದಾನದಲ್ಲಿ ವಾರ್ಡ್ ಸಂಖ್ಯೆ: 134ರ ಪ್ರಸ್ತಾವನೆಯ ಮೊತ್ತ ರೂ.200.00 ಲಕ್ಷಗಳ ಅನುದಾನ ಹಂಚಿಕೆ ಮಾಡಿ ಮೇಲ್ಕಾಣಿಸಿದ ಕಾಮಗಾರಿಗೆ ಜಾಬ್ ಕೋಡ್ ನೀಡುವ ಬಗ್ಗೆ ಹಾಗೂ ಕಾಮಗಾರಿಯ ಕ್ರಿಯಾ ಯೋಜನೆ ಅನುಮೋದನೆ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆರ್ಥಿಕ ವರ್ಷವು ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿದೆ.**

## *19]. ವಿಷಯದ ಸಂಖ್ಯೆ: ತೆಆಸ್ಥಾಸ/ 304 /2017-18*

ಆಯುಕ್ತರ ದಿನಾಂಕ: 26-02-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳಲ್ಲಿ ಪಾಲಿಕೆಯು ಹುಡ್ಕೋ ಸಂಸ್ಥೆಯಿಂದ ಪಡೆದ ಸಾಲವನ್ನು ಶೇ.8.10 ಬಡ್ಡಿ ದರದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗೆ (SBI) ವರ್ಗಾಯಿಸಲು ಅನುಮೊದನೆ ನೀಡಲಾಗಿರುತ್ತದೆ.

ಈ ಬಗ್ಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದವರು ಉಲ್ಲೇಖಿತ ಪತ್ರ ಸಂಖ್ಯೆ-2ರಲ್ಲಿ ಕೋಷ್ಟಕರಲ್ಲಿನ ಕ್ರ.ಸಂ. 6ರಲ್ಲಿ ಸಾಲದ ಮರುಪಾವತಿಗೆ ಸಂಬಂಧಿಸಿದ ಭದ್ರತೆಗಾಗಿ ಪ್ರಾಥಮಿಕವಾಗಿ (Primary security) ಎಸ್ಕ್ರೋ ಖಾತೆಯನ್ನು ತೆರೆಯಲು ಮತ್ತು ಪಾಲಿಕೆ ಆಸ್ತಿ ತೆರಿಗೆ ಈ ಖಾತೆಗೆ ಜಮೆಯಾಗುವಂತೆ ಮತ್ತು ಸಾಲದ ಒಟ್ಟು ಮೊತ್ತಕ್ಕೆ ಶೇ1.30ರಷ್ಟು ಸ್ಥಿರಾಸ್ತಿಯನ್ನು (Collateral security) ಅಡಮಾನ ಮಾಡಲು ಕೋರಿರುತ್ತಾರೆ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI)ಗೆ ಪಾಲಿಕೆಯ ಪರವಾಗಿ ಆಸ್ತಿ ತೆರಿಗೆಯನ್ನು ಸಂಗ್ರಹಿಸಲು ಅನುಮೊದನೆ ನೀಡಿ ಹೀಗೆ ಸಂಗ್ರಹವಾದ ಆಸ್ತಿ ತೆರಿಗೆ ಮೊತ್ತದಿಂದ ಪಾಲಿಕೆ ಪಡೆದ ಸಾಲವನ್ನು ಮರು ಪಾವತಿಸಲು ಅನುವಾಗುವಂತೆ ಒಂದು ಎಸ್ಕ್ರೋ ಖಾತೆಯನ್ನು ತೆರೆಯಲು ಅನುಮೊದನೆ ನೀಡಲಾಗಿರುತ್ತದೆ.

ಈ ಮಧ್ಯೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI) ಉಲ್ಲೇಖಿತ ಪತ್ರ ಸಂಖ್ಯೆ-4ರಲ್ಲಿ ತಮ್ಮ ಪತ್ರದಲ್ಲಿ ಬಡ್ಡಿದರವನ್ನು ಶೇ.8.05ಗೆ ಇಳಿಸಿ ಕೆಲವು ನಿಬಂಧನೆಗಳೊಂದಿಗೆ ಆಸ್ತಿ ತೆರಿಗೆಯನ್ನು ಸಂಗ್ರಹಿಸಲು ಅನುವಾಗುವಂತೆ ಒಂದು ಉಳಿತಾಯ ಖಾತೆಯನ್ನು ತೆರೆಯಲು ಮತ್ತು ಪಾಲಿಕೆ ಪರವಾಗಿ ವಸೂಲಾತಿ ಮಾಡುವ ಆಸ್ತಿ ತೆರಿಗೆ ಮೊತ್ತವನ್ನು ಈ ಖಾತೆಗೆ ಜಮಾ ಮಾಡುವಂತೆ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

ಸರ್ಕಾರದ ಆದೇಶದಂತೆ ಹೊಸದಾಗಿ ಬ್ಯಾಂಕ್ ಖಾತೆಯನ್ನು ತೆರೆಯಲು ಅನುಮೊದನೆ ನೀಡುವ ಅಧಿಕಾರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಪ್ರದತ್ತವಾಗಿರುವುದರಿಂದ ಈ ಕೆಳಗಿನ ಅಂಶಗಳಿಗೆ ಅನುಮೊದನೆ ಕೋರಿ ಮಂಡಿಸಲಾದ ಟಿಪ್ಪಣಿ.

1. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI) ಕಮರ್ಷಿಯಲ್ ಬ್ರಾಂಚ್, ಹಡ್ಸನ್ ಸರ್ಕಲ್ ಇಲ್ಲಿ ಪಾಲಿಕೆಯ ಆಸ್ತಿ ತೆರಿಗೆಯ **ಉಳಿತಾಯ ಖಾತೆಯೊಂದಿಗೆ ಸಾವಧಿ ಠೇವಣಿ (Flixy) ಖಾತೆಯನ್ನು** ತೆರೆಯಲು ಮತ್ತು ಪಾಲಿಕೆಯಿಂದ ಅಧಿಸೂಚಿತವಾಗಿ ಆಸ್ತಿ ತೆರಿಗೆ ವಸೂಲಾತಿ ಮಾಡುತ್ತಿರುವ ಎಲ್ಲಾ ನೋಡಲ್ ಬ್ಯಾಂಕ್‌ಗಳು ತಾವು ಸಂಗ್ರಹಿಸುವ ಆಸ್ತಿ ತೆರಿಗೆಯನ್ನು ನೇರವಾಗಿ ಈ ಖಾತೆಗೆ ಜಮಾ ಮಾಡಲು ಅನುಮೊದನೆ. ಮತ್ತು ಈ ಖಾತೆಯಿಂದ ಸ್ವಯಂ ಚಾಲಿತವಾಗಿ ಅಸಲು ಮತ್ತು ಬಡ್ಡಿ ಮೊತ್ತವು ಸಾಲದ ಖಾತೆಗೆ ವರ್ಗಾವಣೆ ಮಾಡಲು ಅನುಮೊದನೆ ಕೋರಿದೆ.
2. ಪಾಲಿಕೆಯ ಆಸ್ತಿ ತೆರಿಗೆ ತಂತ್ರಾಂಶದಲ್ಲಿ ಅಗತ್ಯ ಬದಲಾವಣೆಯನ್ನು ಮಾಡಿಕೊಳ್ಳಲು ಸಂಬಂಧಿಸಿದ ಎಲ್ಲಾ ಬ್ಯಾಂಕ್‌ಗಳು ಮತ್ತು ಎನ್.ಐ.ಸಿ.ಯವರಿಗೆ ನಿರ್ದೇಶನ ನೀಡಲು ಅನುಮೊದನೆ.
3. ಹುಡ್ಕೋ ಸಂಸ್ಥೆಯಲ್ಲಿನ ಸಾಲಕ್ಕೆ ಪ್ರಸ್ತುತ ಅಡಮಾನ ಮಾಡಲಾದ 8 ಸ್ವತ್ತುಗಳಲ್ಲಿ (ಹಳೆಯ ಮತ್ತು ಹೊಸ ಕೆ.ಆರ್. ಮಾರುಕಟ್ಟೆ, ದಾಸಪ್ಪ ಆಸ್ಪತ್ರೆ ಕಟ್ಟಡ, ಪಿ.ಯು.ಬಿ. ಕಟ್ಟಡ, ಪಾಲಿಕೆ ಪೂರ್ವ ಕಚೇರಿಗಳು (ಮೇಯೋಹಾಲ್ ಕೋರ್ಟ ಕಾಂಪ್ಲೆಕ್ಸ್) ಕಲಾಸಿಪಾಳ್ಯ ಮಾರುಕಟ್ಟೆ, ಬಿಬಿಎಂಪಿ ಕಾಂಪ್ಲೆಕ್ಸ್ ರಾಜಾಜಿನಗರ, ಟ್ಯಾನರಿ/ಪ್ಯಾಟ್ರೀ ರಸ್ತೆಯ 3 ಸಂಖ್ಯೆ ಸ್ಲ್ಯಾಟರ್ ಹೌಸ್‌ಗಳು) ಸದರಿ ಸಂಸ್ಥೆಯಲ್ಲಿ ಉಳಿಸುವ ಸಾಲದ ಮೊತ್ತಕ್ಕೆ ಶೇ.1.50ರಷ್ಟು ಪ್ರಮಾಣದ ಸ್ಥಿರಾಸ್ಥಿಯನ್ನು ಭದ್ರತೆಯನ್ನಾಗಿ ಒದಗಿಸಿ ಅಲ್ಲಿಯೇ ಉಳಿಸಲು ಹಾಗೂ ಉಳಿದವುಗಳಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI)

ಹಸ್ತಾಂತರಿಸುವ ಸಾಲದ ಮೊತ್ತದ ಶೇ.1.30ರಷ್ಟು ಸ್ಥಿರಾಸ್ತಿಯನ್ನು ಸಾಲದ ಭದ್ರತೆಗೆ ಅಡಮಾನ ಮಾಡಲು.

**ನಿರ್ಣಯ: ಆಯುಕ್ತರ ದಿನಾಂಕ: 26.02.2018ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯ ತೀರ್ಮಾನಿಸಿತು.**

***20]. ವಿಷಯದ ಸಂಖ್ಯೆ: ತೆಆಸ್ಥಾಸ/ 305 /2017-18***

ಪ್ರಧಾನ ಅಭಿಯಂತರರ ದಿನಾಂಕ: 17-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಶ್ಚಿಮ ವಲಯದಲ್ಲಿ ಯೋಜನೆ-ಕೇಂದ್ರ ಶಾಖೆಯಿಂದ ವಾರ್ಡ್ ಸಂಖ್ಯೆ: 140ರಲ್ಲಿ ಕೈಗೋಳುವ ಕಾಮಗಾರಿಯಾದ Construction of 2nd floor lift room staircase and providing lift for EVMS ware house building at chamrajpet for BBMP community hall Bangalore ಗೆ ಅಂದಾಜು ಪಟ್ಟಿಯನ್ನು ರೂ.185.00 ಲಕ್ಷಗಳಿಗೆ ತಯಾರಿಸಿದ್ದು ಮತ್ತು ಮುಖ್ಯ ಅಭಿಯಂತರರು (ಯೋಜನೆ-ಕೇಂದ್ರ) ರವರು ಕಂಡಿಕೆ 8 ರಿಂದ 12 ರವರೆಗೆ ಸಲ್ಲಿಸಿರುವ ವರದಿಯಲ್ಲಿ ಚುಣಾವಣಾ ನಿಧಿಯಿಂದ ಭರಿಸಲು ಹಾಗೂ ಚುಣಾವಣೆ ನಿಧಿ ಬಿಡುಗಡೆಯಾಗುವ ಹಿನ್ನಲೆಯಲ್ಲಿ ಸದರಿ ಅಂದಾಜು ಪಟ್ಟಿಯ ಮೊತ್ತವನ್ನು ಪಾಲಿಕೆಯ ಅನುದಾನದಿಂದ ಭರಿಸಿ ತದ ನಂತರ ಮರು ಹೊಂದಾಣಿಕೆಗೆ ಹಾಗೂ ಮುಂಗಡ ಹಣವನ್ನು ಬಿಡುಗಡೆ ಮಾಡಲು ಮೆ॥ ನಿರ್ಮಿತಿ ಕೇಂದ್ರ ಬೆಂಗಳೂರು ಗರಾಮಾಮತರ ಜಿಲ್ಲೆ ರವರಿಂದ ತುರ್ತಾಗಿ ನಿರ್ವಹಿಸಬೇಕಾಗಿರುವುದು ಎಂದು ವರದಿಸಿದ್ದು, ಈ ವಿಚಾರದಲ್ಲಿ ಮಾನ್ಯ ಆಯುಕ್ತರು ಕಂಡಿಕೆ 14ರಲ್ಲಿ ಪ್ರಸ್ತಾವನೆಗೆ ಅನುಮೋದನೆ ನೀಡಿರುತ್ತಾರೆ. ಮುಖ್ಯ ಆರ್ಥಿಕಾಧಿಕಾರಿರವರು ಕಂಡಿಕೆ (22) ರಲ್ಲಿ ಸದರಿ ಕಾಮಗಾರಿಗೆ ಲೆಕ್ಕಶೀರ್ಷಿಕೆ 0541 ರಡಿಯಲ್ಲಿ ಅನುದಾನವು ಅಭ್ಯವಿಲ್ಲವೆಂದು ವರದಿ ಸಲ್ಲಿಸಿರುತ್ತಾರೆ. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರು ಕಂಡಿಕೆ (24) ರಲ್ಲಿ ನೀಡಿರುವ ಸೂಚನೆಗೆ ಮುಖ್ಯ ಲೆಕ್ಕಾಧಿಕಾರಿಯವರು ಕಂಡಿಕೆ (25)ರ ಸದರಿ ಪ್ರಸ್ತಾವನೆಯು ತುರ್ತಾಗಿರುವುದರಿಂದ ಪ್ರಸಕ್ತ ಸಾಲಿನ 217-18ರಲ್ಲಿ ರೂ.50.00 ಲಕ್ಷಗಳ ಪರಿಷ್ಕೃತ ಆಯವ್ಯಯದಲ್ಲಿ ಅಥವಾ 2017-18ನೇ ಸಾಲಿನ ಲೆಕ್ಕಶೀರ್ಷಿಕೆಗಳಲ್ಲಿ ಅಳವಡಿಸಿಕೊಳ್ಳಲು ನಿಬಂಧನೆ ಮೇರೆಗೆ ರೂ.50.00 ಲಕ್ಷಗಳ ಮೊತ್ತಕ್ಕೆ ಮತ್ತು ಬಾಕಿ ಅನುದಾನವನ್ನು ಮುಂದಿನ ಸಾಲಿನಲ್ಲಿ ಅಳವಡಿಸುವುದು ಎಂದು ನೀಡಿರುವ ವಿವರಣೆಗೆ ಮಾನ್ಯ ಆಯುಕ್ತರು ರೂ.50.00 ಲಕ್ಷಗಳಿಗೆ ಮೀಸಲಿರಿಸಿ ಜಾಬ್‌ಕೋಡ್ ಸಂಖ್ಯೆ ನೀಡಲು ಕಂಡಿಕೆ (29) ರಲ್ಲಿ ಅನುಮೋದನೆ ನೀಡಿರುತ್ತಾರೆ ಮುಖ್ಯ ಲೆಕ್ಕಾಧಿಕಾರಿ ರವರು ಕಂಡಿಕೆ (32) ಸದರಿ ಪ್ರಸ್ತಾಪಿತ ಕಾಮಗಾರಿಗೆ ಜಾಬ್‌ಕೋಡ್ ಸಂಖ್ಯೆ: 140-18-000063 ರಲ್ಲಿ ಲೆಕ್ಕಶೀರ್ಷಿಕೆ ಪಿ-0541ರ ಅಡಿಯಲ್ಲಿ ರೂ.50.00 ಲಕ್ಷಗಳಿಗೆ ದಿ: 14.02.2018 ರಂದು ನೀಡಿರುತ್ತಾರೆ.

ಮುಖ್ಯ ಅಭಿಯಂತರರು (ಯೋಜನೆ-ಕೇಂದ್ರ) ರವರು ಕಂಡಿಕೆ (54) ರಲ್ಲಿ ತನ್ನ ಅಧೀನದಲ್ಲಿರುವ ಕಾ.ಪಾ.ಅ (ಎಂ.ಪಿ.ಇ.ಡಿ-ಕೇಂದ್ರ) ರವರಿಗೆ ಸೂಚನೆ ನೀಡಿದ್ದು ಸದರಿ ಕಾಮಗಾರಿಗೆ ಮೆ॥ ನಿರ್ಮಿತಿ ಕೇಂದ್ರ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ರವರಿಗೆ ಕಾರ್ಯಾದೇಶ ಸಂಖ್ಯೆ: 24/17-18, ದಿ:20.02.2018 ರಂದು ನೀಡಲಾಗಿರುತ್ತದೆ. ಈ ಕಾರ್ಯಕ್ಕೆ ಉಳಿದ ಮೊತ್ತವಾದ ರೂ.135.00 ಲಕ್ಷಗಳಿಗೆ ಲೆಕ್ಕಶೀರ್ಷಿಕೆ ಪಿ-0541ರ ಅಡಿಯಲ್ಲಿ 2018-19ನೇ ಸಾಲಿನ ಆಯವ್ಯಯದಲ್ಲಿ ಭರಿಸಬೇಕಾಗಿರುತ್ತದೆಂದು ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರ ಆದೇಶಿಸಿದಂತೆ ವಾರ್ಡ್ ಸಂಖ್ಯೆ:140 ರಲ್ಲಿ ಪ್ರಸ್ತಾಪಿತ 04 ಕಾಮಗಾರಿ ಉಳಿದ ಮೊತ್ತವಾದ ರೂ.135.00 ಲಕ್ಷಗಳಿಗೆ

ಲೆಕ್ಕಶೀರ್ಷಿಕೆ ಪಿ–0541ರ ಅಡಿಯಲ್ಲಿ 2018–19ನೇ ಸಾಲಿನ ಆಯವ್ಯಯದಲ್ಲಿ ಭರಿಸಬೇಕಾಗಿದ್ದು ಮತ್ತು ಮರು ಹೊಂದಾಣಿಕೆ ಸಮಿತಿಯ ಮುಂದೆ ಅನುಮೋದನೆ ಕೋರಿ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ: ಆರ್ಥಿಕ ವರ್ಷವು ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿದೆ.**

## *21]. ವಿಷಯದ ಸಂಖ್ಯೆ: ತೆಆಸ್ಥಾಸ/ 306 /2017–18*

ಆಯುಕ್ತರ ದಿನಾಂಕ: 20–03–2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ ಸಿದ್ದಾರೂಢ ಮಿಷನ್ (ರಿ), ಚಿಕ್ಕೆಲ್ಲೂರು ರಸ್ತೆ, ರಾಮೊಹಳ್ಳಿ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ, ಬೆಂಗಳೂರು–560074, ರವರು ಜಾತ್ಯಾತೀತ ಸಿದ್ಧಾಂತದ ಹಿನ್ನೆಲೆಯಲ್ಲಿ ಆಧ್ಯಾತ್ಮಿಕ ಸಾಂಸ್ಕೃತಿಕ ಶೈಕ್ಷಣಿಕ ಹಾಗೂ ಸಾಮಾಜಿಕ ಸೇವಾ ಚಟುವಟಿಕೆಗಳಿಗೆ 2017–18ನೇ ಸಾಲಿನ ಆಯವ್ಯಯ, ಲೆಕ್ಕ ಶೀರ್ಷಿಕೆ, ಕೌನ್ಸಿಲ್–1ರ ಪಿಕೋಡ್ 048, ಅನುಬಂಧ–03ರಲ್ಲಿ, ಕ್ರಮ ಸಂಖ್ಯೆ 24ರಲ್ಲಿ ಮೊತ್ತ ರೂ.01.00 (ಒಂದು) ಲಕ್ಷಗಳ ಅನುದಾನ ನೀಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಶ್ರೀ ಸಿದ್ದಾರೂಢ ಮಿಷನ್ (ರಿ), ಸಂಸ್ಥೆಯವರಿಗೆ 2017–18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್–1ರ ಪಿಕೋಡ್ 048, ಅನುಬಂಧ–03ರಲ್ಲಿ, ಕ್ರಮ ಸಂಖ್ಯೆ 24ರಲ್ಲಿ ಮೊತ್ತ ರೂ.01.00 (ಒಂದು) ಲಕ್ಷಗಳನ್ನು ಸದರಿ ಸಂಸ್ಥೆಗೆ ಮೀಸಲಿರಿಸಲಾಗಿರುತ್ತದೆ.

ಆದ್ದರಿಂದ, ಶ್ರೀ ಸಿದ್ದಾರೂಢ ಮಿಷನ್ (ರಿ), ಸಂಸ್ಥೆಯವರಿಗೆ ಮೀಸಲಿಟ್ಟಿರುವ ಮೊತ್ತ ರೂ.01.00 (ಒಂದು) ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ರೂ.1.00 (ರೂ. ಒಂದು ಲಕ್ಷ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *22]. ವಿಷಯದ ಸಂಖ್ಯೆ: ತೆಆಸ್ಥಾಸ/ 307 /2017–18*

ಆಯುಕ್ತರ ದಿನಾಂಕ: 20–03–2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪೂರ್ಣ ಸುಧಾ ಕ್ಯಾನ್ಸರ್ ಫೌಂಡೇಷನ್ (ರಿ), ನಂ.39, ನಾಗಶ್ರೀ ಕೃಷ್ಣ ನಿಲಯ, ಎಸ್1 ಅಪಾರ್ಟ್‌ಮೆಂಟ್, 30ನೇ ಕ್ರಾಸ್, 7ನೇ ಬ್ಲಾಕ್ ಜಯನಗರ, ಬೆಂಗಳೂರು–560001, ರವರು Mom-Express is a project towards early dection of breast Cancer ಕಾರ್ಯಕ್ರಮಕ್ಕೆ 2017–18ನೇ ಸಾಲಿನ ಆಯವ್ಯಯ, ಲೆಕ್ಕ ಶೀರ್ಷಿಕೆ, ಕೌನ್ಸಿಲ್–1ರ ಪಿಕೋಡ್ 048, ಅನುಬಂಧ–03ರಲ್ಲಿ, ಕ್ರಮ ಸಂಖ್ಯೆ 23ರಲ್ಲಿ ಮೊತ್ತ ರೂ.02.00 (ಎರಡು) ಲಕ್ಷಗಳ ಅನುದಾನ ನೀಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಪೂರ್ಣ ಸುಧಾ ಕ್ಯಾನ್ಸರ್ ಫೌಂಡೇಷನ್ (ರಿ), ಸಂಸ್ಥೆಯವರಿಗೆ 2017–18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್–1ರ ಪಿಕೋಡ್ 048, ಅನುಬಂಧ–03ರಲ್ಲಿ, ಕ್ರಮ ಸಂಖ್ಯೆ 23ರಲ್ಲಿ ಮೊತ್ತ ರೂ.02.00 (ಎರಡು) ಲಕ್ಷಗಳನ್ನು ಸದರಿ ಸಂಸ್ಥೆಗೆ ಮೀಸಲಿರಿಸಲಾಗಿರುತ್ತದೆ.

ಆದ್ದರಿಂದ, ಪೂರ್ಣ ಸುಧಾ ಕ್ಯಾನ್ಸರ್ ಫೌಂಡೇಷನ್ (ರಿ), ಸಂಸ್ಥೆಯವರಿಗೆ ಮೀಸಲಿಟ್ಟಿರುವ ಮೊತ್ತ ರೂ.02.00 (ಎರಡು) ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ರೂ.2.00 (ರೂ. ಎರಡು ಲಕ್ಷ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

***23]. ವಿಷಯದ ಸಂಖ್ಯೆ: ತೆಆಸ್ಥಾಸ/ 308 /2017-18***

ಆಯುಕ್ತರ ದಿನಾಂಕ: 20-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕು.ಸ್ಫೂರ್ತಿ ರೆಡ್ಡಿ, ಕ್ರೀಡಾಪಟು ಬಿನ್ ಮಲ್ಲಿಕಾರ್ಜುನ ರೆಡ್ಡಿರವರು, ಬಿಷಪ್ ಕಾಟನ್ ವುಮೆನ್ಸ್ ಕ್ರಿಶ್ಚಿಯನ್ ಪಿ.ಯು ಕಾಲೇಜ್, ನಂ19, 3ನೇ ಅಡ್ಡರಸ್ತೆ, ಸಿಎಸೈ ಕಾಂಪೌಂಡ್, ಮಿಷನ್ ರಸ್ತೆ, ಬೆಂಗಳೂರು-560027, ಇವರು ಡಿಸೆಂಬರ್ 27 ರಿಂದ 29 ರವರೆಗೆ ನಡೆದ ಏಷಿಯನ್ ಇಂಡಿಪೆಂಡೆಂಟ್ ಇಂಟರ್ ನ್ಯಾಷನಲ್ ಥ್ರೋಬಾಲ್ ಕ್ಲಬ್ ಚಾಂಪಿಯನ್ ಷಿಪ್ ಕ್ರೀಡೆಯಲ್ಲಿ ಭಾಗವಹಿಸಿದ್ದು ಅದರ ವೆಚ್ಚದ ಮೊತ್ತ ರೂ.65,500.00 (ಅರವತ್ತೈದು ಸಾವಿರ ಐದು ನೂರು)ಗಳನ್ನು 2017-18ನೇ ಸಾಲಿನ ಆಯವ್ಯಯ, ಲೆಕ್ಕ ಶೀರ್ಷಿಕೆ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-03ರಲ್ಲಿ ಅನುದಾನ ನೀಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಕು.ಸ್ಫೂರ್ತಿ ರೆಡ್ಡಿ, ಕ್ರೀಡಾಪಟುರವರು 2017-18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-03ರಲ್ಲಿ, ಕೋರಿರುವ ಮೇರೆಗೆ ಸದರಿಯವರು ಕೋರಿರುವ ಮೊತ್ತ ರೂ. ರೂ.65,500.00 (ಅರವತ್ತೈದು ಸಾವಿರ ಐದು ನೂರು)ಗಳನ್ನು ಮಂಜೂರು ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಕು॥. ಸ್ಫೂರ್ತಿ ರೆಡ್ಡಿ, ಕ್ರೀಡಾಪಟು ರವರಿಗೆ ರೂ.65,500.00 (ರೂ. ಅರವತ್ತೈದು ಸಾವಿರದ ಐದು ನೂರು ಮಾತ್ರ) ಗಳ ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

***24]. ವಿಷಯದ ಸಂಖ್ಯೆ: ತೆಆಸ್ಥಾಸ/ 310 /2017-18***

ಪ್ರಧಾನ ಅಭಿಯಂತರರ ದಿನಾಂಕ: 17-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಪೂರ್ವ ವಲಯಕ್ಕೆ ಸೇರಿರುವ ವಾರ್ಡ್ ಸಂಖ್ಯೆ: 24 ಕ್ಕೆ ಲೆಕ್ಕ ಶೀರ್ಷಿಕೆ ಪಿ-3366 ರಲ್ಲಿ ಅನುವುವಾಗಿದ್ದು ಪ್ರಸ್ತಾಪಿತ ಕಾಮಗಾರಿಗೆ ಮುಖ್ಯ ಅಭಿಯಂತರರು (ಪೂರ್ವ) ರವರು ಕಂಡಿಕೆ (06) ರಲ್ಲಿ ತಲಾ ರೂ.1500.00 ಲಕ್ಷಗಳಿಗೆ ಅನುವು ಮಾಡಲು ಕೋರಿರುತ್ತಾರೆ. ಈ ವಿಚರದಲ್ಲಿ ಮುಖ್ಯ ಲೆಕ್ಕಾಧಿಕಾರಿರವರು ಕಂಡಿಕೆ (09) ರಲ್ಲಿ ಪ್ರಸ್ತುತ 2017-18ನೇ ಸಾಲಿನ ಆಯುವ್ಯಯದ ಅನುದಾನದಲ್ಲಿ ಒಟ್ಟಾರೆ ಉಳಿತಾಯವಾಗುವ ಅನುದಾನದಲ್ಲಿ ದಿ: 31-03-2018 ಅಂತ್ಯಕ್ಕೆ ಸಂಭವನಿಯ ಪೈಕಿ ರೂ.100.00 ಲಕ್ಷಗಳು ಎಂದು ಪರಿಗಣಿಸಿ ಮರು ಹೊಂದಾಣಿಕೆ ಅಥವ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳುವ ನಿಬಂಧನೆಗಳಪಟ್ಟು ಕಾಮಗಾರಿಗೆ ಸಮಿತಿಯ ಘಟನ್ನೋತರ ಅನುಮೊದನೆ ನಿರೀಕ್ಷಿಸಿ

ಪಿ–3366 ಅಡಿ ರೂ.100.00 ಲಕ್ಷಗಳ ಅನುದಾನ ಅಳವಡಿಸಿಕೊಂಡು ಕಾಮಗಾರಿಗೆ ವರದಿ ಮಂಡಿಸಿದ್ದು, ಕಂಡಿಕೆ (15) ರಲ್ಲಿ ಮಾನ್ಯ ಆಯುಕ್ತರು ಅನುಮೋದನೆ ನೀಡಿದ್ದು, ತದನಂತರ ಮುಖ್ಯ ಲೆಕ್ಕಾಧಿಕಾರಿರವರು ಐ.ಎಫ್.ಎಂ.ಎಸ್ ದಾಖಲಿಸಿ 16773 ಅನ್ನು ನಮೂದಿಸಲಾಗಿರುತ್ತದೆ. ಮುಖ್ಯ ಆರ್ಥಿಕ ಅಧಿಕಾರಿ ರವರು ಕಂಡಿಕೆ (24) ರಲ್ಲಿ ಸದರಿ ಜಾಬ್ ಕೋಡ್ ಸಂ: 024–18–000055, ದಿ:05–02–2018 ರಂದು ನೀಡಿರುತ್ತಾರೆ ಮತ್ತು ಕಾಮಗಾರಿಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ | ಕಾಮಗಾರಿ ವಿವರ | ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ | ಜಾಬ್ ಸಂಖ್ಯೆ |
|---|---|---|---|
| 1 | Construction of Multi specialty hospital building in ward No.24 in HBR Layout (Estimated Cost Rs.1500.00 Lakhs) | 100.00 | 024–18–000055 |

ಈ ಹಿನ್ನಲೆಯಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರ ಆದೇಶಿಸಿದಂತೆ ವಾರ್ಡ್ ಸಂಖ್ಯೆ: 024 ರಲ್ಲಿ ಪ್ರಸ್ತಾಪಿತ ಕಾಮಗಾರಿಗೆ ಈಗಾಗಲೇ ಜಾಬ್ ಕೋಡ್ ಗಳನ್ನು ಪಿ–3366 ರಲ್ಲಿ ನೀಡಿದ್ದು, ಈಗ ಘಟನೋತ್ತರ ಅನುಮೋದನೆಗಾಗಿ ಸಮಿತಿಯ ಮುಂದೆ ಅನುಮೋದನೆ ಕೋರಿ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ: ಪ್ರಧಾನ ಅಭಿಯಂತರರ ದಿನಾಂಕ: 17.03.2018ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***25]. ವಿಷಯದ ಸಂಖ್ಯೆ: ತೆಆಸ್ಥಾಸ/ 311 /2017–18***

ಆಯುಕ್ತರ ದಿನಾಂಕ: 06–03–2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಗರ ಯೋಜನೆ ಇಲಾಖೆ ಯಲ್ಲಿ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ: ಹೆ.ನಿ.ನ.ಯೋ/ಜೆ.ಡಿ.(ಉ)/ಡಿಎಂ3/ಪಿಆರ್/320/2015–16 ದಿನಾಂಕ: 04–09–2015ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕಟ್ಟಡಗಳಿಗೆ ಪರವಾನಿಗೆ ನೀಡುವಾಗ ವಿಧಿಸುವ ನೆಲಬಾಡಿಗೆ ಶುಲ್ಕವನ್ನು ಸಂಬಂಧಿಸಿದ ಸ್ವತ್ತಿನ ಚಾಲ್ತಿ ಮಾರ್ಗಸೂಚಿದರಗಳಿಗೆ ಅನುಗುಣವಾಗಿ ಪಾವತಿಸಿಕೊಳ್ಳಲಾಗುತ್ತಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಡಿಮೆ ವಿಸ್ತೀರ್ಣದ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಕೈಗೊಳ್ಳುವಾಗ ನಿರ್ಮಾಣ ಸಾಮಗ್ರಿಗಳನ್ನು ಸಾರ್ವಜನಿಕ ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಶೇಖರಣೆಸಿಟ್ಟುಕೊಳ್ಳುವುದರಿಂದ ಪಾಲಿಕೆಯಿಂದ ನಿರ್ಮಿಸಲಾದ ರಸ್ತೆಗಳು, ಚರಂಡಿಗಳು ಹಾಗೂ ಮೋರಿಗಳಿಗೆ ಹಾನಿಯಾಗುವ ಪ್ರಮಾಣ ಜಾಸ್ತಿ ಇರುತ್ತದೆ. ಈ ಕಾರಣಗಳಿಂದಾಗಿ ಪಾಲಿಕೆಯಿಂದ ಸದರಿ ರಸ್ತೆಗಳು, ಚರಂಡಿಗಳು ಹಾಗೂ ಮೋರಿಗಳನ್ನು ಪುನರ್ ನಿರ್ಮಾಣ ಕಾಮಗಾರಿಗಳಿಗೆ ವ್ಯಯಿಸುತ್ತಿರುವ ವೆಚ್ಚಗಳೂ ಸಹ ಗಣನೀಯವಾಗಿ ಹೆಚ್ಚಾಗಿರುತ್ತದೆ. ಆದ ಕಾರಣ ಹಾಲಿ ಪಾವತಿಸಿಕೊಳ್ಳುತ್ತಿರುವ ನೆಲಬಾಡಿಗೆ ಶುಲ್ಕದ ದರಗಳನ್ನು ಹೆಚ್ಚಿಸುವುದು ಅವಶ್ಯಕವೆಂದು ತಿಳಿದು ಬಂದಿರುತ್ತದೆ.

ಈ ಮೇಲ್ಕಂಡ ಹಿನ್ನಲೆಯಲ್ಲಿ, 2018-19ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯ ಸಭೆಯಲ್ಲಿ ಚರ್ಚಿಸಿದಂತೆ, ಹಾಲಿ ಕಟ್ಟಡಗಳಿಗೆ ಪರವಾನಿಗೆ ನೀಡುವಾಗ ವಿಧಿಸುವ ನೆಲಬಾಡಿಗೆ ಶುಲ್ಕವನ್ನು ಸ್ವತ್ತಿಗೆ ಚಾಲ್ತಿಯಲ್ಲಿರುವ ಮಾರ್ಗಸೂಚಿದರದೊಂದಿಗೆ ಹೆಚ್ಚುವರಿ ಶೇ.25%ಗಳನ್ನು ಪರಿಷ್ಕರಿಸಿ ನಿಗಧಿಪಡಿಸುವ ಬಗ್ಗೆ ಉದ್ದೇಶಿತ ಪರಿಷ್ಕೃತ ದರಗಳು ಈ ಕೆಳಕಂಡಂತೆ ಪ್ರಸ್ತಾಪಿಸಲಾಗಿದೆ.

| ಕ್ರ. ಸಂ. | ಶುಲ್ಕಗಳ ವಿವರ | ಹಾಲಿ ನಿವೇಶನ / ಸ್ವತ್ತಿಗೆ ಚಾಲ್ತಿಯಲ್ಲಿರುವ ಮಾರ್ಗಸೂಚಿದರಗಳಂತೆ ಪಾವತಿಸಿಕೊಳ್ಳಬೇಕಾದ ಶುಲ್ಕಗಳ ದರ ಪ್ರತಿ ಚ.ಮೀ.ಗೆ (ಮಾರ್ಗಸೂಚಿದರದ ಶೇಕಡಾವಾರು ಪ್ರಮಾಣ) | | ಪ್ರಸ್ತಾಪಿತ ಹಾಲಿ ನಿವೇಶನ / ಸ್ವತ್ತಿಗೆ ಚಾಲ್ತಿಯಲ್ಲಿರುವ ಮಾರ್ಗಸೂಚಿದರಗಳಂತೆ ನಿವೇಶನದ ವಿಸ್ತೀರ್ಣ 1,000 ಚ.ಮೀ.ಗಳ ವರೆಗಿನ ನಿವೇಶನಗಳಲ್ಲಿ ನಿರ್ಮಿಸುವ ಕಟ್ಟಡಗಳಿಗೆ ಅನ್ವಯವಾಗುವಂತೆ ಪಾವತಿಸಿಕೊಳ್ಳಬೇಕಾದ ಶುಲ್ಕಗಳ ದರ ಪ್ರತಿ ಚ.ಮೀ.ಗೆ (ಮಾರ್ಗಸೂಚಿದರದ ಶೇಕಡಾವಾರು ಪ್ರಮಾಣ) | |
|---|---|---|---|---|---|
| | | ವಸತಿ | ವಾಣಿಜ್ಯ | ವಸತಿ | ವಸತಿಯೇತರ (ವಾಣಿಜ್ಯ, ಇತ್ಯಾಧಿ) |
| 01 | ನೆಲ ಬಾಡಿಗೆ ಶುಲ್ಕ | 0.09% | 0.22% | 0.12% | 0.28% |
| ವಿ.ಸೂ:- ನೆಲಬಾಡಿಗೆ ಶುಲ್ಕ ದರಗಳನ್ನು ಲೆಕ್ಕಾಚಾರ ಮಾಡುವಾಗ ನಿವೇಶನದ ಮಾರ್ಗಸೂಚಿ ಬೆಲೆಯು ರೂ.50,000/- ಗಳಿಗಿಂತ ಕಡಿಮೆ ಇದ್ದಲ್ಲಿ ನೆಲಬಾಡಿಗೆ ಶುಲ್ಕ ಲೆಕ್ಕಾಚಾರಕ್ಕಾಗಿ ಕನಿಷ್ಠ ರೂ.50,000/-ಗಳನ್ನು ನಿವೇಶನದ ಮಾರ್ಗಸೂಚಿ ದರವಾಗಿ ಪರಿಗಣಿಸತಕ್ಕದ್ದು. | | | | | |

ಮೇಲ್ಕಂಡ ಪ್ರಸ್ತಾವನೆಯನ್ನು ಪಾಲಿಕೆಯ ತೆರಿಗೆ ಮತ್ತು ಸ್ಥಾಯಿ ಸಮಿತಿಯ ಅನುಮೋದನೆ ಕೋರಿ ಸಮಿತಿಯ ಮುಂದೆ ಮಂಡಿಸಲು ಕೋರಿ ಟಿಪ್ಪಣಿಯನ್ನು ಮಂಡಿಸಲಾಗಿರುತ್ತದೆ ವಿವರಗಳು ಈ ಕೆಳಕಂಡಂತಿರುತ್ತದೆ.

**-ಮುಂದೂಡಿದೆ-**

***26]. ವಿಷಯದ ಸಂಖ್ಯೆ: ತೆಆಸ್ಥಾಸ/ 312 /2017-18***

ಪ್ರಧಾನ ಅಭಿಯಂತರರ ದಿನಾಂಕ: 19-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2016-17 ಮತ್ತು 2017-18ನೇ ಸಾಲುಗಳಲ್ಲಿ ನಗರೋತ್ಥಾನ ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಮತ್ತು ಸರೋವರ ಅಭಿವೃದ್ಧಿ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ರೂ.7300.00 ಕೋಟಿಗಳ ಸರ್ಕಾರದ ಅನುದಾನದಲ್ಲಿ ಬೃಹತ್ ಮಳೆ ನೀರುಗಾಲುವೆ ವಿಭಾಗಕ್ಕೆ ಒಟ್ಟು ರೂ.800.00 ಕೋಟಿ ಅನುದಾನದ ಕಾಮಗಾರಿಗಳ ಕ್ರಿಯಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ:ನಅಇ 199 ಎಸ್‌ಎಫ್‌ಸಿ 2016 (ಭಾಗ-1) ದಿನಾಂಕ: 21-06-2016 ರ ಅನೇಕ್ಸರ್-7 ರಂತೆ ಅನುದಾನ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಕಾಮಗಾರಿಗಳಿಗೆ ಹೆಚ್ಚುವರಿಯಾಗಿ ಟೆಂಡರ್ ಪ್ರೀಮಿಯಂ ಮೊತ್ತವಾದ ರೂ. 986.98 ಕೋಟಿಗಳಿಗೆ ಸದರಿ ಘನ ಸರ್ಕಾರವು ಅನುಮೋದನೆ ನೀಡಿರುತ್ತದೆ. ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಪಟ್ಟಿಮಾಡಲಾಗಿದೆ.

| Sl No | Name of Zones projects /RI/SWD/Lakes SWD | ANNEXURE NO | Package Name | Estimated Cost | Tender Amount Sanctioned by HPC | Tender Amount of DPR & PMC | Total Amount (6+7) | Excess (8-5) |
|---|---|---|---|---|---|---|---|---|
| 1 | SWD | Action Plan for development of Storm Water Drain during years 2016-17 & 2017-18 under Gok Budget grants 2016-17 Vide Govt Order No.UDD 199 SFC 2016 (Part 1)Bengaluru Dated: 21-06-2016 A Capital Investment (Capital Support to Special Infrastructures Projects of Bengaluru Serial No 7 SWD ANNEXURE 7 RS.800 C | Package-1 **Remodelling of Primary and secondary storm water drains culverts bridges and allied works (33 nos Identified under BBMP SWD ACTION PLAN WORKS 2016-17 which are spread out at various locations of Yelahanka Byatarayanapura, Hebbal and Sarvagnanagara Constituencies, in Hebbal Valley East and Yelahanka Zones** PKG-SWD-No. 0-1 Hebbal Valley | 12857.00 | 15849.07 | 199.96 | 16049.03 | 3192.03 |
| 2 | SWD | | Package-2 **Remodelling of Primary and Secondary storm water drains culverts bridges and allied works (33 Nos) identified under BBMP SWD ACTION PLAN WORKS 2016-17 which are spread out at Various locations of K.R.Puram Constituencies in Hebbal Valley Mahadevapura Zone** PKG-SWD No-2 HebbalVally | 4530.00 | 5746.83 | 80.50 | 5827.33 | 1297.33 |
| 3 | SWD | | Package-3 **Remodelling of primary and secondary storm water drains, Culverts bridges and allied works (86 nos) Identified under BBMP SWD ACTION PLAN WORKS 2016-17 which are spread out at various locations of Koramangala valley and Challaghatta Valley East South Mahadevapura and Bommanahalli Zones of BBMP are Bengaluru Package** No.03 Koramangala and ChallagattaVelley | 15500.00 | 19132.09 | 294.61 | 19426.70 | 3926.70 |
| 4 | SWD | Action Plan for Development of Storm Water Drains during Years 2016-17 & 2017-18 under GOK Budget Grants 2016-17 Vide Govt Order No UDD 199 SFC 2016 (Part Bengaluru Dated: 21.06.2016 A Capital Investment (Capital Support to Special Infrastructures Projects of Bengaluru Serial No.7 SWD ANNEXURE 7 RS 800 Crore | Package-4 **Remodelling of primary and secondary storm water drains, culverts bridges and allied works (138 nos) Malleshwara Mahalakshmi Layout Vijayanagar Chamarajpete, Padmanabha nagara, Basavanagudi BTM Layout and Dasarahalli Vrishabhavathi Valley Wes South and Darashalli Zones of BBMP area Bengaluru** PKG SWD-No 04 Vrishabhavathi Valley | 17695.30 | 21924.41 | 302.00 | 22226.41 | 4531.11 |
| 5 | SWD | | **Package-5 Remodelling of Primary and secondary storm water drains, culverts bridges and allied works (39 nos identified under BBMP SWD ACTION PLAN WORKS 2016-17 Which are spread out at various location of Rajarajeshwarinagara Constituency in Vrishabhavathi Valley Rajarajeshwari Nagara zone of BBMP Area Bengaluru PKG-SWD No.05 VrishabavathiValley .** | 9500.00 | 11637.70 | 181.00 | 11818.70 | 2318.70 |
| 6 | SWD | | Package-6 **Remodelling of primary and secondary storm water drains, culverts bridges and allied works (2 nos Identified under BBMP SWD ACTION PLAN WORKS 2016-17 which are spread out at various locations of Yeshwanthapura Constituency in Vrishabhavathi Valley Rajarajeshwari Nagara zone of BBMP Area Bengaluru** PKG-SWD-No-6 Vrishabavathi Valley | 7100.00 | 8682.70 | 105.00 | 8787.70 | 1687.70 |
| 7 | SWD | | **Maintenance works-19 Agencies** | 2640.00 | 2654.28 | | 2654.28 | 14.28 |
| 8 | SWD | | **Essential Emergency Works-30 Agencies** | 10178.35 | 11908.07 | | 11908.07 | 1729.72 |
| | | | **Total** | 80000 | 97535 | 1163 | 98698 | 18698 |

ಮೇಲೆ ಪಟ್ಟಿಯಲ್ಲಿ ವಿವರಿಸಿರುವ ಮಾಹಿತಿಗಳಂತೆ ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ.800.00 ಕೋಟಿಗೆ ಅನುಮೋದಿಸಿರುವ ಟೆಂಡರ್‌ಗಳ ಒಟ್ಟು ಮೊತ್ತ ಹಾಗೂ ಡಿ.ಪಿ.ಆರ್ ಮತ್ತು ಪಿಎಂಸಿ ಗಳ ಮೊತ್ತವು ಸೇರಿದಂತೆ ಕಾಮಗಾರಿಯ ಒಟ್ಟು ಮೊತ್ತ ರೂ.986.98 ಕೋಟಿಗಳಿದ್ದು ಇದನ್ನು ಅಂದಾಜು ಪಟ್ಟಿಗೆ ತುಲನೆ ಮಾಡಿದ್ದಲ್ಲಿ ರೂ. 186.98 ಕೋಟಿಗಳು ಮೊತ್ತವು ಹೆಚ್ಚುವರಿಯಾಗಿರುತ್ತದೆ. ಸರ್ಕಾರಿ ಆದೇಶ ಸಂಖ್ಯೆ ನಅಇ 199 ಎಸ್‌ಎಫ್‌ಸಿ 2016 (ಭಾಗ-1) ದಿನಾಂಕ: 21-06-2016ರ ಷರತ್ತಿನ ಸಂಖ್ಯೆ: 09ರಂತೆ ಈ ಆದೇಶದಲ್ಲಿ ಅನುಮೋದನೆ ನೀಡಿರುವ ಮೊತ್ತಕ್ಕಿಂತ ಕಾಮಗಾರಿಗಳ ಅನುಷ್ಠಾನ ಮೊತ್ತವು ಹೆಚ್ಚುವರಿಯಾದಲ್ಲಿ ಅನುದಾನವನ್ನು ಬಿಬಿಎಂಪಿಯು ತನ್ನ ಸ್ವಂತ ಅನುದಾನದಿಂದ

ಭರಿಸತಕ್ಕದ್ದು ಸರ್ಕಾರದಿಂದ ಹೆಚ್ಚುವರಿ ಅನುದಾನವನ್ನು ಬಿಬಿಎಂಪಿಯು ತನ್ನ ಸ್ವಂತ ಅನುದಾನದಿಂದ ಭರಿಸತಕ್ಕದ್ದು ಸರ್ಕಾರದಿಂದ ಹೆಚ್ಚುವರಿ ಅನುದಾನವನ್ನು ಒದಗಿಸಲಾಗುವುದಿಲ್ಲ ಎಂದು ಆದೇಶಿಸಿರುವುದರಿಂದ ಹೆಚ್ಚುವರಿ ಮೊತ್ತ ರೂ.186.98 ಕೋಟಿಗಳನ್ನು 2017–18 ನೇ ಸಾಲಿನ ಆಯವ್ಯಯದಲ್ಲಿ ಸಂಬಂಧಪಟ್ಟ ಲೆಕ್ಕಶೀರ್ಷಿಕೆ ಅಡಿಯಲ್ಲಿ ಹೆಚ್ಚುವರಿ ಮೊತ್ತದ ಅನುದಾನವನ್ನು ಮರುಹೊಂದಾಣಿಕೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯಂತೆ ಕ್ರಮವಹಿಸಬಹುದಾಗಿದೆ ಎಂದು ಅಭಿಪ್ರಾಯಿಸಿದ್ದು, ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ. ಮೇಲೆ ತಿಳಿಸಿರುವ ಕಾಮಾಗಾರಿಗಳ ಹೆಚ್ಚುವರಿ ಮೊತ್ತ ರೂ.186.98 ಕೋಟಿಗಳನ್ನು 2017–18–ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ಸಂಬಂಧಪಟ್ಟ ಲೆಕ್ಕಶೀರ್ಷಿಕೆ ಅಡಿಯಲ್ಲಿ ಅನುಮೋದನೆ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

**–ಮುಂದೂಡಿದೆ–**

***27]. ವಿಷಯದ ಸಂಖ್ಯೆ: ತೆಆಸ್ಥಾಸ/ 314 /2017–18***

ಆಯುಕ್ತರ ದಿನಾಂಕ: 24–01–2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರಿ ಸಾಬೂನು ಕಾರ್ಖಾನೆ ಜಂಕ್ಷನ್‌ನಿಂದ ಮಾಗಡಿ ರಸ್ತೆ ಡಿವಿಯೇಶನ್ ರಸ್ತೆ ಜಂಕ್ಷನ್‌ವರೆಗೆ ಡಾ॥ ರಾಜ್‌ಕುಮಾರ್ ರಸ್ತೆಯ ಸಿಗ್ನಲ್ ಮುಕ್ತ ಕಾರಿಡಾರ್ ನಿರ್ಮಾಣ ಮಾಡಲು ರೂ. 44.80 ಕೋಟಿ ಅಂದಾಜು ಪಟ್ಟಿಗೆ ಸರ್ಕಾರದ ಆದೇಶ ಸಂಖ್ಯೆ: No.UDD 356 MNY 2012/(1) Bangalore Dated:10-07-2012 ರಲ್ಲಿ ಅನುಮೋದನೆ ನೀಡಲಾಗಿದ್ದು, ಸದರಿ ಕಾಮಗಾರಿ ನಿರ್ಮಾಣದ ಗುತ್ತಿಗೆಯನ್ನು ಮೆ॥ಪಿ.ಜೆ.ಬಿ ಇಂಜಿನಿಯರ್ಸ್ ಪ್ರೈ. ಲೀ. ರವರಿಗೆ ದಿನಾಂಕ: 19–5–2014 ರಂದು ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಈ ಯೋಜನೆಗೆ ಸಂಬಂಧಿಸಿದಂತೆ ಕೆಳಸೇತುವೆ ಪಕ್ಕದಲ್ಲಿ ಅಂದರೆ ಡಾ॥ ರಾಜ್‌ಕುಮಾರ್ ರಸ್ತೆಯ ಪಶ್ಚಿಮ ಭಾಗದಲ್ಲಿ ವಾಹನಗಳ ಓಡಾಟಕ್ಕಾಗಿ ಹಾಲಿ ಇರುವ ರಸ್ತೆಯನ್ನು ವಿಸ್ತರಿಸಬೇಕಾಗಿದ್ದು, ಈ ಕಾಮಗಾರಿಗಾಗಿ ಪಾಲಿಕೆಯ ವಾರ್ಡ್ ಸಂಖ್ಯೆ:67 ರಲ್ಲಿ ಬರುವ ಖಾಸಗಿ ಸ್ವತ್ತು ಸೆಂಟ್ ಮೆರೀಸ್ ಇಮ್ಯಾಕ್ಯೂಲೇಟ್ ಸಂಸ್ಥೆಯವರ ಸ್ವತ್ತಿನ ಪೈಕಿ ಸುಮಾರು 1011.61 ಚ.ಮೀ. ಅವಶ್ಯಕತೆ ಇರುತ್ತದೆ. ಸದರಿ ಸ್ವತ್ತನ್ನು ಭೂಸ್ವಾಧೀನ ಕಾಯ್ದೆಯಂತೆ ವಶಪಡಿಸಿಕೊಳ್ಳಲು ಹೆಚ್ಚಿನ ಕಾಲಾವಧಿ ಬೇಕಾಗಿರುವುದರಿಂದ ಹಾಗೂ ಯೋಜನೆಯ ಪ್ರಗತಿಗೂ ಸಹ ತೊಡಕು ಉಂಟಾಗಿರುವುದರಿಂದ ಸದರಿ ಸ್ವತ್ತನ್ನು ಕೆ.ಎಂ.ಸಿ ಕಾಯ್ದೆ 1976 ರ ಕಲಂ 175 ರಂತೆ ನೇರ ಖರೀದಿಯ ಮುಖಾಂತರ ಖರೀದಿಸಲು ಸ್ವತ್ತಿನ ಮಾಲೀಕರ ನಡುವೆ ದರಸಂಧಾನವನ್ನು ನಡೆಸಿ ಸದರಿ ಭೂಮಿಯನ್ನು ಖರೀದಿಸಲು ಕ್ರಮ ಜರುಗಿಸಲಾಗಿರುತ್ತದೆ. ಅದರಂತೆ ಕೇಂದ್ರ ಕಛೇರಿಯ ದರ ಸಂಧಾನ ಸಮಿತಿ ಅಧ್ಯಕ್ಷರಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ದಿನಾಂಕ:27–8–2016 ರಂದು ಏರ್ಪಡಿಸಿದ ಸಭೆಯಲ್ಲಿ ಸೆಂಟ್ ಮೆರೀಸ್ ಇಮ್ಯಾಕ್ಯೂಲೇಟ್ ರವರೊಂದಿಗೆ ಸಂಧಾನ ನಡೆಸಿ ದರ ಸಂಧಾನ ಸಮಿತಿಯ ಸಭೆಯ ತೀರ್ಮಾನದಂತೆ  ಸದರಿ ಪ್ರದೇಶದ 2016ನೇ ಸಾಲಿನ ಮಾರ್ಗಸೂಚಿ ದರ ಬೆಲೆ ರೂ.96900/– ಪ್ರತಿ ಚ.ಮೀ. ಇದ್ದು ಶೇಕಡ 20% ಹೆಚ್ಚು ಅಂದರೆ ಪ್ರತಿ ಚ.ಮೀ.ಗೆ ರೂ.96900+19380=1,16,280/– ರಂತೆ 1011.61 ಚ. ಮೀ.ಗೆ ಬೆಲೆ ಒಟ್ಟು ಮೊತ್ತ ರೂ.11,76,30,011/– ಗಳನ್ನು ಪಾವತಿಸಲು ಸಮಾಲೋಚನಾ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಸದರಿ ಪ್ರಸ್ತಾವನೆಯು ಕಾರ್ಯಪಾಲಕ ಅಭಿಯಂತರರು

(ಯೋಜನೆ ಕೇಂದ್ರ-3) ಹಾಗೂ ಮುಖ್ಯ ಅಭಿಯಂತರರು (ಯೋಜನೆ ಕೇಂದ್ರ) ರವರ ಮುಖೇನ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

**ಸ್ವತ್ತಿನ ವಿವರ.**

| ಕ್ರ. ಸಂ. | ಸರ್ವೆ ನಂ. | ಖಾತೆದಾರರು/ ಅನುಭವದಾರರ ಹೆಸರು | ಸಿಗ್ನಲ್ ಮುಕ್ತ ಕಾರಿಡಾರ್ ನಿರ್ಮಾಣಕ್ಕಾಗಿ ಬೇಕಾಗಿರುವ ವಿಸ್ತೀರ್ಣ (ಚ.ಮೀ) | ಮಾರ್ಗಸೂಚಿ ದರ ಬೆಲೆ ರೂ. (ಪ್ರತಿ ಚ.ಮೀ.ಗೆ) | ದರ ಸಂಧಾನ ಸಮಿತಿಯು ಅನುಮೋದಿಸಿದ ಪರಿಹಾರದ ಮೊತ್ತ ರೂ. |
|---|---|---|---|---|---|
| 1 | **180** | ಸೆಂಟ್ ಮೆರೀಸ್ ಇಮ್ಯಾಕ್ಯೂಲೇಟ್ (ಸಂಸ್ಥೆ) | 1011.61 ಚ.ಮೀ | 96900/- | 1011.61X96900=9,80,25,009+20% ಹೆಚ್ಚಿನ ಪರಿಹಾರ ರೂ.11,76,30,011 |
| | | | | | ಒಟ್ಟು **21,56,55,020/-** |

ಈ ಹಿನ್ನಲೆಯಲ್ಲಿ ದಿನಾಂಕ: 27-8-2016 ರಲ್ಲಿನ ದರ ಸಂಧಾನ ಸಭೆಯ ತೀರ್ಮಾನದಂತೆ ಸೆಂಟ್ ಮೆರೀಸ್ ಇಮ್ಯಾಕ್ಯೂಲೇಟ್ ರವರ ಸ್ವತ್ತಿನ ಭಾಗವಾದ 1011.61 ಚ.ಮೀ. ವಿಸ್ತೀರ್ಣದಲ್ಲಿ ಭೂಸ್ವಾಧೀನ ಪಡಿಸಿಕೊಳ್ಳಲು ರೂ.21,56,55,020/-ಗಳ ಮೊತ್ತದ ಪಾವತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಡವಳಿ ದಿನಾಂಕ: 9-1-2017 ರಲ್ಲಿನ ವಿಷಯದ ಸಂಖ್ಯೆ:ತೆಆಸ್ಥಾಸ/116/2016-17 ರಲ್ಲಿ ಮರು ಹೊಂದಾಣಿಕೆ ಮಾಡಲು ತೀರ್ಮಾನಿಸಿರುವಂತೆ ಹಾಗೂ ಸದರಿ ಜಮೀನನ್ನು ಕೆ.ಎಂ.ಸಿ ಕಾಯ್ದೆ 1976 ರ ಕಲಂ 175 ರ ರೀತ್ಯ ಕೈಗೊಂಡ ಸಭೆಯ ತೀರ್ಮಾನದಂತೆ ಭೂಪರಿಹಾರದ ಮೊತ್ತವನ್ನು ಪಾವತಿಸುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಾಮಾನ್ಯ ಸಭೆಯ ಮುಂದೆ ಮಂಡಿಸಿರುವ **ದಿನಾಂಕ: 24-01-2018ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 14.03.2018ರ ಸಭೆಯ ನಿರ್ಣಯ.**

**-ಮುಂದೂಡಿದೆ-**

## ***28]. ವಿಷಯದ ಸಂಖ್ಯೆ: ತೆಆಸ್ಥಾಸ/ 320 /2017-18***

ಆಯುಕ್ತರ ದಿನಾಂಕ: 22-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕರ್ನಾಟಕ ರಾಜ್ಯ ಕುಂಚಿಟಿಗರ ಒಕ್ಕಲಿಗರ ಸಂಘ (ರಿ), ಅಮ್ಮಾಜಿ ಆರ್ಕೇಡ್, 3ನೇ ಮಹಡಿ, ಎಲೈಟ್ ಹೋಟೆಲ್ ಹಿಂಭಾ, ಬಾಗಲಗುಂಟೆ ಸರ್ಕಲ್, ಹೆಸರಘಟ್ಟ ಮುಖ್ಯ ರಸ್ತೆ, ಬೆಂಗಳೂರು-560073, ರವರು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ವಧು-ವರರ ಅನ್ವೇಷಣೆ, ಬಡ ಮಕ್ಕಳಿಗೆ ವಿದ್ಯಾರ್ಥಿ ವೇತನ, ಬಡ ವಿದ್ಯಾರ್ಥಿಗಳಿಗೆ ಉಚಿತ ಹಾಸ್ಟೇಲ್ ನಿರ್ಮಿಸಿ ಹಾಗೂ ಇನ್ನಿತರೆ ಸಾಮಾಜಿಕ ಕಾರ್ಯಗಳನ್ನು 2017-18ನೇ ಸಾಲಿನ ಆಯವ್ಯಯ, ಲೆಕ್ಕ ಶೀರ್ಷಿಕೆ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-03ರಲ್ಲಿ, ಮೊತ್ತ ರೂ.05.00 (ಐದು) ಲಕ್ಷಗಳ ಅನುದಾನ ನೀಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಕರ್ನಾಟಕ ರಾಜ್ಯ ಕುಂಚಿಟಿಗರ ಒಕ್ಕಲಿಗರ ಸಂಘ (ರಿ), ಸಂಸ್ಥೆಯವರಿಗೆ 2017-18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-03ರಲ್ಲಿ, ಕ್ರಮ ಸಂಖ್ಯೆ 62ರಲ್ಲಿ ಮೊತ್ತ ರೂ.05.00 (ಐದು) ಲಕ್ಷಗಳನ್ನು ಸದರಿ ಸಂಸ್ಥೆಗೆ ಮೀಸಲಿರಿಸಲಾಗಿರುತ್ತದೆ.

ಮಾನ್ಯ ಆಯುಕ್ತರ ಆದೇಶ ಸಂಖ್ಯೆ. ಮುಲೆಅ/ಪಿಆರ್/254/2017-18, ದಿನಾಂಕ: 27-12-2017ರ ಪ್ರಕಾರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯಾಗಿರುವ ಸಂಘ ಸಂಸ್ಥೆಗಳಿಗೆ ಪಿ ಕೋಡ್ 0048ರ ಅಡಿಯಲ್ಲಿ ಸದರಿ ಸಂಸ್ಥೆಯವರಿಗೆ ಮೀಸಲಿಟ್ಟಿರುವ ಮೊತ್ತ ರೂ.05.00 (ಐದು)

ಲಕ್ಷಗಳ ಮೊತ್ತ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ರೂ.1.00 (ರೂ. ಒಂದು ಲಕ್ಷ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

***29]. ವಿಷಯದ ಸಂಖ್ಯೆ: ತೆಆಸ್ಥಾಸ/ 321 /2017-18***

ಆಯುಕ್ತರ ದಿನಾಂಕ: 22-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ (ರಿ), ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು-560011, ರವರು ಬಡ ರೋಗಿಗಳಿಗೆ ಮತ್ತು ಆಸ್ಪತ್ರೆಯ ಉಪಯೋಗಕ್ಕೆ 2017-18ನೇ ಸಾಲಿನ ಆಯವ್ಯಯ, ಪಿಕೋಡ್ 2358ರ ಅಡಿಯಲ್ಲಿ ಪುಟದ ಸಂಖ್ಯೆ 35ರಲ್ಲಿ, ಮೊತ್ತ ರೂ.50.00 (ಐವತ್ತು) ಲಕ್ಷಗಳ ಅನುದಾನ ನೀಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ (ರಿ), ಯವರಿಗೆ 2017-18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಪಿಕೋಡ್ 2358ರ ಅಡಿಯಲ್ಲಿ ಪುಟದ ಸಂಖ್ಯೆ 35ರಲ್ಲಿ ಮೊತ್ತ ರೂ.50.00 (ಐವತ್ತು) ಲಕ್ಷಗಳನ್ನು ಸದರಿ ಸಂಸ್ಥೆಗೆ ಮೀಸಲಿರಿಸಲಾಗಿರುತ್ತದೆ.

ಮಾನ್ಯ ಆಯುಕ್ತರ ಆದೇಶ ಸಂಖ್ಯೆ. ಮುಲೆಅ/ಪಿಆರ್/254/2017-18, ದಿನಾಂಕ: 27-12-2017ರ ಪ್ರಕಾರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯಾಗಿರುವ ಸಂಘ ಸಂಸ್ಥೆಗಳಿಗೆ ಪಿ ಕೋಡ್ 2358ರ ಅಡಿಯಲ್ಲಿ ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ (ರಿ) ರವರಿಗೆ ಮೀಸಲಿಟ್ಟಿರುವ ಮೊತ್ತ ರೂ.50.00 (ಐವತ್ತು) ಲಕ್ಷಗಳ ಮೊತ್ತ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ರೂ.50.00 (ರೂ. ಐವತ್ತು ಲಕ್ಷ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

***30]. ವಿಷಯದ ಸಂಖ್ಯೆ: ತೆಆಸ್ಥಾಸ/ 322 /2017-18***

ಆಯುಕ್ತರ ದಿನಾಂಕ: 09-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ನಂ: 24 ರಲ್ಲಿ ಹೆಚ್.ಬಿ.ಆರ್.ಲೇಔಟ್ ನಗರ ಪಾಲಿಕೆಗೆ ಸೇರಿದ ಬಸವಲಿಂಗಪ್ಪ ಭವನದಲ್ಲಿ ಮಹಿಳಾ ಕೌಶಲ್ಯ ಅಭಿವೃದ್ಧಿ ಚಟುವಟಿಕೆ ನಡೆಸಲು ಅನುಮತಿ ಕೋರಿ ಸರ್ವಜ್ಞ ಹೆಲ್ತ್‌ಕೇರ್ ಇನ್ಸ್ಟಿಟ್ಯೂಟ್ ರವರು ಸಲ್ಲಿಸಿರುವ ಮನವಿಯ ಬಗ್ಗೆ ಪಾಲಿಕೆಯ ಆಸ್ತಿ ವಿಭಾಗದಿಂದ ಅಭಿಪ್ರಾಯ ಕೋರಿ ಕಡತವನ್ನು ಅಪರ ಆಯುಕ್ತರು (ಪೂರ್ವ) ರವರು ಕೋರಿದ್ದು, ಅದರಂತೆ ಸ್ಥಳ ತನಿಖೆ ಮಾಡಿ ವಿವರವಾದ ವರದಿಯನ್ನು ನೀಡುವಂತೆ ಆಸ್ತಿ ವಿಭಾಗದ ಭೂಮಾಪಕರಿಗೆ ಸೂಚಿಸಲಾಗಿತ್ತು. ಸ್ಥಳ ಪರಿಶೀಲನೆ ಮಾಡಿದ ಭೂಮಾಪಕರು ವರದಿ ನೀಡಿದ್ದು, ವರದಿಯಲ್ಲಿ ತಿಳಿಸಿರುವಂತೆ ಈ ಸಂಬಂಧ ಪ್ರಸ್ತಾಪಿತ ಆಸ್ತಿಯ ಬಗ್ಗೆ ಆಸ್ತಿ ಶಾಖೆಯ ದಾಖಲಾತಿಗಳು ದಾಖಲಾಗಿರುವುದು ಕಂಡು ಬರುವುದಿಲ್ಲ. ಆದುದರಿಂದ, ಪ್ರಸ್ತಾಪಿತ ಪಾಲಿಕೆಯ ಕಟ್ಟಡ ವಿಸ್ತೀರ್ಣ ಹಾಗೂ ಹಸ್ತಾಂತರಗೊಳಿಸಿ ಗೊಂಡಿರುವ ಬಗ್ಗೆ ದೃಢೀಕೃತ ನಕ್ಷೆ ಹಾಗೂ ಹಸ್ತಾಂತರದ ದೃಢೀಕೃತ

ದಾಖಲಾತಿಗಳು/ಪಂಚಾಯಿತಿ/ನಗರಸಭೆ ದಾಖಲಾತಿಗಳನ್ನು ಹಾಗೂ ಪ್ರಸ್ತಾಪಿತ ಸ್ವತ್ತಿಗೆ ಅಳತೆ ವಿಸ್ತೀರ್ಣ ಚಕ್ಕುಬಂದಿ ಹಾಗೂ ಪಿಐಡಿ ನಂಬರನ್ನು ಕೊಟ್ಟು ದೃಢೀಕರಿಸಿ ಕಳುಹಿಸಿದಲ್ಲಿ ಪ್ರಸ್ತಾಪಿತ ಪಾಲಿಕೆಯ ಆಸ್ತಿಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸುವ ಬಗ್ಗೆ ಕ್ರಮಕೈಗೊಳ್ಳಬಹುದಾಗಿದೆ ಎಂದು ನಮೂದಿಸಿ ವರದಿ ಸಲ್ಲಿಸಿರುತ್ತಾರೆ.

ಜಂಟಿ ಆಯುಕ್ತರು (ಪೂರ್ವ) ರವರು ಸದರಿ ಸಂಸ್ಥೆಯು ಇದೊಂದು ಚಾರಿಟಬಲ್ ಟ್ರಸ್ಟ್ ಆಗಿದ್ದು, ಬಡವರಿಗೆ ಉಚಿತವಾಗಿ ಮತ್ತು ರಿಯಾಯಿತಿಯಲ್ಲಿ ಸೇವೆ ಸಲ್ಲಿಸುತ್ತಿದ್ದು, 3 ವರ್ಷಗಳ ಗುತ್ತಿಗೆಯನ್ನು ನೀಡಬಹುದೆಂಬ ಅಭಿಪ್ರಾಯದೊಂದಿಗೆ ಕಡತವನ್ನು ಮರು ಮಂಡಿಸಿರುತ್ತಾರೆ.

ಹೆಚ್.ಬಿ.ಆರ್ ಲೇಔಟ್ ಉಪ ವಿಭಾಗ ವ್ಯಾಪ್ತಿಯ ವಾರ್ಡ್ ನಂಬರ್–24 ರಲ್ಲಿ ಬಿ.ಬಿ.ಎಂ.ಪಿ ಗೆ ಸೇರಿದ ಸ್ವತ್ತಿನಲ್ಲಿ ಬಸವಲಿಂಗಪ್ಪ ಭವನ ಕಟ್ಟಡ ಇರುತ್ತದೆ. ಸರ್ವಜ್ಞನಗರ ಹೆಲ್ತ್‌ಕೇರ್ ಇನ್ಸ್‌ಟ್ಯೂಟ್ ರವರ ಮಹಿಳಾ ಕೌಶಲ್ಯ ಅಭಿವೃದ್ಧಿ ಚಟುವಟಿಕೆ ನಡೆಸಲು ಮಾನ್ಯ ವಿಶೇಷ ಆಯುಕ್ತರು (ಯೋಜನಾ) ರವರಿಗೆ ದಿನಾಂಕ:06–03–2017 ರಂದು ಮನವಿ ಸಲ್ಲಿಸಿರುತ್ತಾರೆ.

ಸರ್ವಜ್ಞನಗರ ಹೆಲ್ತ್ ಕೇರ್ ಇನ್ಸ್‌ಟ್ಯೂಟ್ ರವರ ನೊಂದಾಯಿತ Non-Profit Organisation ಆಗಿದ್ದು, ಸಾರ್ವಜನಿಕ ಕ್ಷೇತ್ರದಲ್ಲಿ ಸುಮಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು, ಸದರಿ ಸಂಸ್ಥೆಯಲ್ಲಿ Charitable Hospital ಮತ್ತು ಡಯಾಲಿಸಸ್ ಕೇಂದ್ರವನ್ನು ನಡೆಸಿಕೊಂಡು ಬಂದಿರುತ್ತಾರೆ.ಸದರಿ ಸಂಸ್ಥೆಯು Rajiv Gandhi Charitable Trust for Women ಇವರೊಂದಿಗೆ ಮಹಿಳಾ ಅಭ್ಯರ್ಥಿಗಳಿಗೆ ಕೌಶಲ್ಯ ಅಭಿವೃದ್ಧಿ ನೀಡಿ ಸ್ವತಂತ್ರವಾಗಿ ಜೀವಿಸಲು ಅನುವು ಮಾಡಿಕೊಡಲು ಯೋಜನೆಯೊಂದನ್ನು ರೂಪಿಸಿರುತ್ತಾರೆ.

ಮುಖ್ಯ ಅಭಿಯಂತರರು (ಪೂರ್ವ) ರವರು ಪ್ರಸ್ಥಾಪಿತ ಸ್ವತ್ತಿನಲ್ಲಿ ಬಸವಲಿಂಗಪ್ಪ ಭವನದಲ್ಲಿ ನೆಲಮಹಡಿಯಲ್ಲಿರುವ 150 ಚ.ಮೀ ಖಾಲಿ ಜಾಗವನ್ನು ಸರ್ವಜ್ಞನಗರ ಹೆಲ್ತ್ ಕೇರ್ ಇನ್ಸ್‌ಟ್ಯೂಟ್ ರವರಿಗೆ 3 ವರ್ಷಗಳ ಅವಧಿಗೆ ಉಪಯೋಗಿಸಲು ಮಾನ್ಯ ವಿಶೇಷ ಆಯುಕ್ತರು (ಆಸ್ತಿಗಳು) ರವರಿಗೆ ಆದೇಶಕ್ಕಾಗಿ ಮಂಡಿಸಿರುತ್ತಾರೆ.

ಪಾಲಿಕೆಯ ಆಸ್ತಿಯನ್ನು ಗುತ್ತಿಗೆ/ಕ್ರಯಕ್ಕೆ ನೀಡಬೇಕಾದಲ್ಲಿ ಸರ್ಕಾರದ ಆದೇಶಗಳು, ಸುತ್ತೋಲೆಗಳು ಹಾಗೂ ಪಾಲಿಕೆಯಲ್ಲಿ ಅಳವಡಿಸಿಕೊಂಡಿರುವ ನಿಯಮಗಳು ಹಾಗೂ ಈ ಕೆಳಕಂಡ ಕಾಯ್ದೆ ಅನ್ವಯ ಕ್ರಮವಹಿಸಬೇಕಾಗಿರುತ್ತದೆ.

1. ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ಕಲಂ 176 ಹಾಗೂ 176ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ, 3 ವರ್ಷಗಳವರೆಗೂ ಗುತ್ತಿಗೆ ನೀಡುವ ಅಧಿಕಾರವು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, 5 ವರ್ಷದವರೆಗೂ ಗುತ್ತಿಗೆ ನೀಡುವ ಅಧಿಕಾರವು ಮಹಾನಗರ ಪಾಲಿಕೆಯ ಸಭೆಗೆ ಇರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಘನ ಸರ್ಕಾರಕ್ಕೆ ಅಧಿಕಾರವಿರುತ್ತದೆ.
2. **ಘನ ಸರ್ಕಾರವು ಆದೇಶ ಸಂಖ್ಯೆ: ನಅಇ 129 ಟಿ.ಎಂ.ಡಿ 2002 ದಿನಾಂಕ:02–06–2003 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ /ಕ್ರಯ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂದು ಆದೇಶಿಸಿರುತ್ತದೆ.**

ಪಾಲಿಕೆಯ ಕೆ.ಎಂ.ಸಿ.ಕಾಯ್ದೆ 1976 ರ ನಿಯಮ 176 (6) ರಂತೆ Not with standing anything contained in this Act —

No movable property exceeding such sum in value as may be prescribed shall be sold otherwise than by public auction;
No property whether movable or immovable of whatever value shall be transferred free of cost or for an upset price;
no lease of any immovable property exceeding five years shall be granted;
no immovable property shall be disposed of by sale or by other transfer;
Except with the previous sanction of the Government. ಎಂದಿರುತ್ತದೆ.

ಈ ಹಿನ್ನೆಲೆಯಲ್ಲಿ ಬಸವಲಿಂಗಪ್ಪ ಭವನದಲ್ಲಿ ಮಹಿಳಾ ಕೌಶಲ್ಯ ಅಭಿವೃದ್ಧಿ ಚಟುವಟಿಕೆ ನಡೆಸಲು ಸರ್ವಜ್ಞನಗರ ಹೆಲ್ತ್ ಕೇರ್ ಇನ್ಸ್‌ಟ್ಯೂಟ್ ರವರಿಗೆ 3 ವರ್ಷಗಳ ಅವಧಿಗೆ ಗುತ್ತಿಗೆಯನ್ನು ನೀಡಲು ಸೂಕ್ತ ತೀರ್ಮಾನಕ್ಕಾಗಿನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ **ಆಯುಕ್ತರ ದಿನಾಂಕ: 09-03-2018ರ ಮಾನ್ಯ ಟಿಪ್ಪಣಿಯ ಕುರಿತು ಚರ್ಚಿಸಿ ಸರ್ವಜ್ಞ ಹೆಲ್ತ್‌ಕೇರ್ ಇನ್ಸಿಟ್ಯೂಟ್ ರವರಿಗೆ ಮೂರು (3) ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 26.03.2018ರ ಸಭೆಯ ನಿರ್ಣಯ.**

**ನಿರ್ಣಯ: ಆಯುಕ್ತರ ದಿನಾಂಕ: 09.03.2018ರ ಟಿಪ್ಪಣಿಯನ್ನು ಒಪ್ಪುತ್ತಾ, ವಾರ್ಷಿಕ ರೂ.500/- (ರೂ. ಐದು ನೂರು ಮಾತ್ರ) ಗಳ ಗುತ್ತಿಗೆಯನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

***31]. ವಿಷಯದ ಸಂಖ್ಯೆ: ತೆಆಸ್ಥಾಸ/ 01 /2018-19***

ಪ್ರಧಾನ ಅಭಿಯಂತರರ ದಿನಾಂಕ: 23-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2017-18ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ ಪಿ-0055 ರ ಅಡಿಯಲ್ಲಿ ಒಟ್ಟು ಮೊತ್ತ ರೂ.200.00 ಲಕ್ಷಗಳನ್ನು ಅನುವು ಮಾಡಿದ್ದು, ಈ ಅನುದಾನದಲ್ಲಿ 08 ವಲಯಗಳಲ್ಲಿ ತೆರವುಗೊಳಿಸುವ ಕಾರ್ಯಗಳಿಗೆ ಎಲ್ಲಾ ವಾರ್ಡ್‌ಗಳಲ್ಲಿ ಕ್ರಮವನ್ನು ಕೈಗೊಂಡಿದ್ದು ಈ ಪೈಕಿ ಚಿಕ್ಕಪೇಟೆ ವಿಭಾಗಕ್ಕೆ ಸೇರಿದಂತೆ ವಾರ್ಡ್ ಸಂಖ್ಯೆ:153 ರಲ್ಲಿ ನಿವೇಶನದ ಸಂಖ್ಯೆ: 01, ಬಿ.ಹೆಚ್.ಇ.ಎಲ್ ಬಡಾವಣೆ, ಬೈರಸಂದ್ರ, ಬೆಂಗಳೂರು ರಲ್ಲಿ ವ್ಯತಿರಿಕ್ತವಾಗಿ ಕಟ್ಟಿರುವ ಭಾಗಗಳನ್ನು ತೆರವುಗೊಳಿಸಲು ರೂ.8.80 ಲಕ್ಷಗಳಿಗೆ ಜಾಬ್ ಕೋಡ್ ನೀಡಲು ಜಂಟಿ ಆಯುಕ್ತರು (ದಕ್ಷಿಣ) ರವರು ಕಂಡಿಕೆ (29) ರಲ್ಲಿ ವರದಿ ಸಲ್ಲಿಸಿರುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿ ರವರು ಕಂಡಿಕೆ (33) ರಲ್ಲಿ ಲೆಕ್ಕ ಶೀರ್ಷಿಕೆ ಪಿ-0055 ರಲ್ಲಿ ಪ್ರಸ್ತಾಪಿಸಿರುವ ಅನುದಾನ **ಲಭ್ಯವಿರುವುದಿಲ್ಲ** ಹಾಗೂ ಜಾಬ್ ಕೋಡ್ ನೀಡಲು ಸಮಿತಿಯ ಮುಂದೆ ಅನುಮೋದನೆಗೆ ಸಲ್ಲಿಸಬೇಕಾಗಿದೆ ಎಂದು ವರದಿ ಸಲ್ಲಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರ ಆದೇಶದಂತೆ, ವಾರ್ಡ್ ಸಂಖ್ಯೆ:153 ರಲ್ಲಿ ನಿವೇಶನದ ಸಂಖ್ಯೆ: 01, ಬಿ.ಹೆಚ್.ಇ.ಎಲ್ ಬಡಾವಣೆ, ಬೈರಸಂದ್ರ, ಬೆಂಗಳೂರು ರಲ್ಲಿ ವ್ಯತಿರಿಕ್ತವಾಗಿ ಕಟ್ಟಿರುವ ಭಾಗಗಳನ್ನು ತೆರವುಗೊಳಿಸಲು ರೂ.8.80 ಲಕ್ಷಗಳಿಗೆ ಕೊರತೆ ಅನುದಾನವನ್ನು **ಮರು ಹೊಂದಾಣಿಕೆಯ ಅನುಮೋದನೆ** ನೀಡಲು ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಿದೆ.

**ನಿರ್ಣಯ: ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಘನ ನ್ಯಾಯಾಲಯದಲ್ಲಿ ಪ್ರಕರಣವು ಬಾಕಿ / ಆದೇಶ ಇರುವ ಬಗ್ಗೆ ಪರಿಶೀಲಿಸಿ, ಸೂಕ್ತ ಸ್ಪಷ್ಟಿಕರಣದೊಂದಿಗೆ ಸಮಿತಿಯ ಮುಂದೆ ಮರುಮಂಡಿಸಲು ಕಡತವನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *32]. ವಿಷಯದ ಸಂಖ್ಯೆ: ತೆಆಸ್ಥಾಸ/ 06 /2018-19*

ಆಯುಕ್ತರ ದಿನಾಂಕ: 19-12-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ಪ್ರದೇಶಗಳಲ್ಲಿ ನಿರ್ಮಿಸಿದ್ದಂತಹ ವಸತಿ ಗೃಹಗಳಲ್ಲಿ ವಾಸಿಸುತ್ತಿದ್ದ ನಿವಾಸಿಗಳಿಗೆ ಆಯಾ ವಸತಿ ಗೃಹಗಳನ್ನು ಕ್ರಯಕ್ಕೆ ಮಾರಾಟ ಮಾಡಲು ದಿನಾಂಕ: 06-05-1976ರ ಸಭೆಯ ನಡವಳಿಯಲ್ಲಿ ಅಂದಿನ ಮಾನ್ಯ ಆಡಳಿತಾಧಿಕಾರಿರವರು ತೆಗೆದುಕೊಂಡ ನಿರ್ಣಯವನ್ನು ಸರ್ಕಾರವು ಅಂಗೀಕರಿಸಿ, ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಯುಡಿ/251/ಎಂಎನ್‌ಜಿ/77, ದಿನಾಂಕ: 18-05-1978ರ ಆದೇಶದಲ್ಲಿ ನಗರ ಪಾಲಿಕೆಯ ವಸತಿ ಗೃಹಗಳಲ್ಲಿ ವಾಸಿಸುತ್ತಿದ್ದ ನಿವಾಸಿಗಳಿಗೆ ವಸತಿ ಗೃಹಗಳನ್ನು ಕ್ರಯಕ್ಕೆ ಮಾರಾಟ ಮಾಡಲು ಅನುಮೋದನೆ ನೀಡಿರುತ್ತದೆ.

ಸರ್ಕಾರದ ಆದೇಶದನ್ವಯ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿ (ಪುಲಿಕೇಶಿನಗರ) ಉಪ ವಿಭಾಗದ ವ್ಯಾಪ್ತಿಯಲ್ಲಿ ಬರುವ ಹಾಲಿ ವಾರ್ಡ್-61 ರಲ್ಲಿನ ವಿಲಿಯಮ್ಸ್ ಟೌನ್ ಪ್ರದೇಶದಲ್ಲಿನ ಪಾಲಿಕೆಯ ವತಿಯಿಂದ ನಿರ್ಮಿಸಿದ್ದಂತಹ ವಸತಿ ಗೃಹಗಳಿಗೆ ನಿಗಧಿತ ಶುಲ್ಕವನ್ನು ಪಾವತಿಸಿಕೊಂಡು ಆಯಾ ಹಂಚಿಕೆದಾರರಿಗೆ ಕ್ರಯಪತ್ರವನ್ನು ನೊಂದಾಯಿಸಿಕೊಡಲಾಗಿರುತ್ತದೆ.

ವಾರ್ಡ್ ಸಂಖ್ಯೆ:61, ಎಸ್.ಕೆ.ಗಾರ್ಡನ್, ನಂ:195, ಇಲ್ಲಿಯ ಪಾಲಿಕೆಯ ವಸತಿ ಗೃಹವನ್ನು ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಯುಡಿ 251 ಎಂಎನ್‌ಜಿ 77 ದಿನಾಂಕ:18-05-1978ರ ಆದೇಶವನ್ನು ನಮೂದಿಸಿ ದಿನಾಂಕ:05-03-1998 ರಂದು ಅಂತಿಮ ಹಿಂಬರಹವನ್ನು ಶ್ರೀಮತಿ.ಮಂಗಳಮ್ಮ W/o ಅನಂತರಾಜ್ ರವರ ಹೆಸರಿಗೆ ಮೂಲ ಹಂಚಿಕೆ ಪತ್ರವನ್ನು ಹಾಜರುಪಡಿಸಿ 90 ದಿವಸದೊಳಗಾಗಿ ರೂ.8145/- ಗಳನ್ನು ಪಾವತಿಸಿ ಕ್ರಯಪತ್ರ ಮಾಡಿಕೊಳ್ಳಲು ಸೂಚಿಸಲಾಗಿದ್ದು, ಈವರೆವಿಗೂ ಸದರಿ ಮೊತ್ತವನ್ನು ಪಾವತಿಸಿ ಕ್ರಯಪತ್ರ ಮಾಡಿಸಿಕೊಂಡಿರುವುದಿಲ್ಲ.

ಈ ಹಿಂದೆ ಇದೇ ರೀತಿ ಮತ್ತೊಂದು ಪ್ರಕರಣದಲ್ಲಿ ನಿಗಧಿತ ಅವಧಿಯಲ್ಲಿ ಕ್ರಯದ ಮೊಬಲಗನ್ನು ಪಾವತಿಸದ ಸ್ವತ್ತಿಗೆ ಕೆ.ಎಂ.ಸಿ ಕಾಯ್ದೆ 1976ರ ಸೆಕ್ಷನ್ 176 ರಂತೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಕ್ರಮವಹಿಸಬಹುದೆಂದು ಕಾನೂನು ಕೋಶವು ಅಭಿಪ್ರಾಯ ನೀಡಿರುವುದಾಗಿ ಅದೇ ರೀತಿ ಈ ಪ್ರಕರಣದಲ್ಲಿಯೂ ಸಹಾ ಮೂಲ ಹಂಚಿಕೆದಾರರ ಮಗನಾದ ಶ್ರೀ. ಸುಸೈರಾಜ್ ರವರ ಹೆಸರಿಗೆ ವಸತಿ ಗೃಹ ಸಂಖ್ಯೆ:195, 10ನೇ ಕ್ರಾಸ್, ವಿಲಿಯಮ್ಸ್ ಟೌನ್, ವಾರ್ಡ್-61ರ ಸ್ವತ್ತಿಗೆ ಕಾಲ ವಿಳಂಬ ಮನ್ನಾ ಮಾಡಿ ಪ್ರಸ್ತುತ ಸರ್ಕಾರವು ನಿಗಧಿಪಡಿಸುವ ದರದಂತೆ ಕ್ರಯದ ಮೊತ್ತವನ್ನು ಪಾವತಿಸಿಕೊಂಡು ಸ್ಥಾಯಿ ಸಮಿತಿಗಳು ಹಾಗೂ ಪಾಲಿಕೆ ಸಭೆ ಮುಂದೆ ಟಿಪ್ಪಣಿ ಮಂಡಿಸಬಹುದಾಗಿದೆಯೆಂದು ಅಭಿಪ್ರಾಯಿಸಿರುತ್ತಾರೆ.

ಪಾಲಿಕೆಯ ಆಸ್ತಿಯನ್ನು ಗುತ್ತಿಗೆ/ಕ್ರಯಕ್ಕೆ ನೀಡಬೇಕಾದಲ್ಲಿ ಸರ್ಕಾರದ ಆದೇಶಗಳು, ಸುತ್ತೋಲೆಗಳು ಹಾಗೂ ಪಾಲಿಕೆಯಲ್ಲಿ ಅಳವಡಿಸಿಕೊಂಡಿರುವ ನಿಯಮಗಳು ಈ ಕೆಳಕಂಡ ಕಾಯ್ದೆ ಅನ್ವಯ ಕ್ರಮವಹಿಸಬೇಕಾಗಿರುತ್ತದೆ.

1. ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ಕಲಂ 176 ಹಾಗೂ 176ರ (6) ಹಾಗೂ (ಬಿ) 2 ಪ್ರಕಾರ 1ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ, 3 ವರ್ಷಗಳವರೆಗೂ ಗುತ್ತಿಗೆ ನೀಡುವ ಅಧಿಕಾರವು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, 5 ವರ್ಷದವರೆಗೂ ಗುತ್ತಿಗೆ ನೀಡುವ ಅಧಿಕಾರವು ಮಹಾನಗರ ಪಾಲಿಕೆಯ ಸಭೆಗೆ ಇರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಘನ ಸರ್ಕಾರಕ್ಕೆ ಅಧಿಕಾರವಿರುತ್ತದೆ.

2. **ಘನ ಸರ್ಕಾರವು ಆದೇಶ ಸಂಖ್ಯೆ: ನಅಇ 129 ಟಿ.ಎಂ.ಡಿ 2002 ದಿನಾಂಕ:02-06-2003 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ /ಕ್ರಯ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂದು ಆದೇಶಿಸಿರುತ್ತದೆ.**

ಪಾಲಿಕೆಯ ಕೆ.ಎಂ.ಸಿ.ಕಾಯ್ದೆ 1976 ರ ನಿಯಮ 176 (6) ರಂತೆ Not with standing anything contained in this Act —

No movable property exceeding such sum in value as may be prescribed shall be sold otherwise than by public auction;
No property whether movable or immovable of whatever value shall be transferred free of cost or for an upset price;
no lease of any immovable property exceeding five years shall be granted;
no immovable property shall be disposed of by sale or by other transfer;
Except with the previous sanction of the Government. ಎಂದಿರುತ್ತದೆ.

ಮುಂದುವರೆದು, ಶ್ರೀ. ಸುಸೈರಾಜ್ ರವರಿಗೆ ಸದರಿ ವಸತಿ ಗೃಹವನ್ನು ಕ್ರಯಕ್ಕೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ **ದಿನಾಂಕ: 19.12.2017ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 19-12-2017ರ ಸಭೆಯ ನಿರ್ಣಯ.**

**ನಿರ್ಣಯ: ಶ್ರೀ. ಸುಸೈರಾಜ್ ರವರಿಗೆ ವಸತಿ ಗೃಹವನ್ನು ಕ್ರಯಕ್ಕೆ ನೀಡುವ ಬಗ್ಗೆ ಘನ ಸರ್ಕಾರದ ಆದೇಶ ಪಡೆದು ಅದರಂತೆ ಸೂಕ್ತ ಕ್ರಮವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.**

### ***33]. ವಿಷಯದ ಸಂಖ್ಯೆ: ತೆಆಸ್ಥಾಸ/ 07 /2018-19***

ಆಯುಕ್ತರ ದಿನಾಂಕ: 09-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ನಂ.142, ಸುಂಕೇನಹಳ್ಳಿ ವ್ಯಾಪ್ತಿಯಲ್ಲಿನ ಕೆ.ಆರ್.ರಸ್ತೆ ನ್ಯಾಷನಲ್ ಕಾಲೇಜು ಆಟದ ಮೈದಾನಕ್ಕೆ ಹೊಂದಿಕೊಂಡಂತೆ ಇರುವ 142 x 47 ಅಡಿ ಜಾಗದ ಪೈಕಿ ಖಾಲಿ ಜಾಗವನ್ನು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಛೇರಿ ನಿರ್ಮಾಣಕ್ಕೆ ಮಂಜೂರು ಮಾಡಲು ಶ್ರೀ ಮಾಯಣ್ಣ, ಅಧ್ಯಕ್ಷರು, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ರವರು ಮನವಿ ಸಲ್ಲಿಸಿರುತ್ತಾರೆ. ಸದರಿ ಮನವಿಯ ಬಗ್ಗೆ ಸೂಕ್ತ ಕ್ರಮವಹಿಸಲು, ಸನ್ಮಾನ್ಯ ಹೆಚ್.ಡಿ.ದೇವೇಗೌಡರಾದ ಮಾಜಿ ಪ್ರಧಾನ ಮಂತ್ರಿಗಳು, ಮಾನ್ಯ ಶ್ರೀಯುತ ಪಿ.ಸಿ.ಮೋಹನ್ ಸಂಸದರು, ಮಾನ್ಯ ಶ್ರೀಯುತ ರಾಮಲಿಂಗಾ ರೆಡ್ಡಿ, ಗೃಹ ಸಚಿವರು ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರು, ಮಾನ್ಯ ಶ್ರೀಯುತ ಆರ್.ವಿ.ದೇವರಾಜ್ ಶಾಸಕರು, ಮಾನ್ಯ ಶ್ರೀಯುತ ವಿ.ಸೋಮಣ್ಣ ಮಾಜಿ ಸಚಿವರು ವಿಧಾನ ಪರಿಷತ್ ಸದಸ್ಯರು, ಮಾನ್ಯ ಶ್ರೀಯುತ ಅನಂತಕುಮಾರ್ ಕೇಂದ್ರ ಸಚಿವರು, ಮಾನ್ಯ ಶ್ರೀಯುತರು ಕೆ.ಜೆ.ಜಾರ್ಜ್ ಬೆಂಗಳೂರು ಅಭಿವೃದ್ಧಿ ಹಾಗೂ ನಗರಯೋಜನೆ ಮತ್ತು ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರು, ಮತ್ತು ಪೂಜ್ಯ ಮಹಾಪೌರರು ಸಹ ಪತ್ರದಲ್ಲಿ ಸೂಚಿಸಿರುತ್ತಾರೆ.

ಮುಂದುವರೆದು, ಸದರಿ ಪ್ರಸ್ತಾವನೆಯ ಬಗ್ಗೆ ಪಾಲಿಕೆಯ ಸಂಬಂಧಪಟ್ಟ ವಿವಿಧ ಇಲಾಖೆಗಳಾದ ಇಂಜಿನೀಯರಿಂಗ್ ವಿಭಾಗ, ತೋಟಗಾರಿಕೆ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ ಮತ್ತು ಕಲ್ಯಾಣ ಇಲಾಖೆಯ ಅಭಿಪ್ರಾಯವನ್ನು ಪಡೆಯಲಾಗಿದ್ದು, ಪ್ರಸ್ತಾಪಿತ ಜಾಗದ ಅವಶ್ಯಕತೆಯಿರುವುದಿಲ್ಲ ಎಂದು ಕಡತದಲ್ಲಿನ ಕಂಡಿಕೆ(18) ರಿಂದ ಕಂಡಿಕೆ(26)ರವರೆಗೆ ವರದಿಸಿರುವುದು ವ್ಯಕ್ತವಾಗುತ್ತದೆ.

ಪ್ರಸ್ತಾಪಿತ ಜಾಗವನ್ನು ನಗರಮಾಪನ ದಾಖಲೆ ಹಾಗೂ ಆಸ್ತಿ ಶಾಖೆಯ ದಾಖಲೆಯಲ್ಲಿರುವಂತೆ ಪರಿಶೀಲಿಸಲಾಗಿ, ಜಾಗವು ಸ್ಥಳೀಯ ಕ್ಷೇತ್ರ ಸಂಖ್ಯೆ. (ಎಲ್.ಎ)46, ಶಂಕರಪುರ ವ್ಯಾಪ್ತಿಯಲ್ಲಿನ ಸಿ.ಟಿ.ಎಸ್. ನಂ: 17 (ಪಾರ್ಟ್) ನಲ್ಲಿ ಒಳಗೊಂಡಿರುವ ಜಾಗವಾಗಿದ್ದು, ಆಸ್ತಿಶಾಖೆಯ ಆಸ್ತಿವಹಿ ಸಂಖ್ಯೆ: 30, ಪುಟ ಸಂಖ್ಯೆ: 35 ರಲ್ಲಿರುವಂತೆ ವಿಸ್ತೀರ್ಣ 8251.80 ಚ.ಮೀ. ಎಂದು ದಾಖಲಾಗಿರುತ್ತದೆ. ಅದರಂತೆ, ಆಸ್ತಿವಹಿಯಲ್ಲಿ ದಾಖಲಿರುವ ನಕ್ಷೆಯಂತೆ ನಕ್ಷೆ ತಯಾರಿಸಿದೆ. ಪ್ರತಿಯನ್ನು ಲಗತ್ತಿಸಿದೆ.

ನಕ್ಷೆಯಲ್ಲಿ ಗುರುತಿಸಿರುವಂತೆ 142 x 47 ಅಡಿ ಜಾಗವು ವಾರ್ಡ್ ನಂ:142, ಸುಂಕೇನಹಳ್ಳಿ ವ್ಯಾಪ್ತಿಯಲ್ಲಿನ ಕೆ.ಆರ್.ರಸ್ತೆ, ನ್ಯಾಷನಲ್ ಕಾಲೇಜು ಆಟದ ಮೈದಾನಕ್ಕೆ ಹೊಂದಿಕೊಂಡಂತೆ ಇರುವ ಉದ್ಯಾನವನದ ಪೈಕಿ ಅಭಿವೃದ್ದಿಪಡಿಸದ ಉಳಿಕೆ ಖಾಲಿ ಜಾಗವನ್ನು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಛೇರಿ ನಿರ್ಮಾಣಕ್ಕೆ ಮಂಜೂರು ಮಾಡಲು ಕೋರಿರುತ್ತಾರೆ. ಹಾಲಿ ಇರುವ ಈ ಜಾಗದಲ್ಲಿ ಕೆ.ಪಿ.ಟಿ.ಸಿ.ಎಲ್ ನ ಪ್ರಸರಣ ಘಟಕದ ಜಾಗ, ಮೆಟ್ರೋ ಸ್ಟೇಷನ್ ನಿರ್ಮಾಣಕ್ಕೆ ಬಳಸಿಕೊಂಡಿರುವ ಜಾಗ ಮತ್ತು ಬಿಬಿಎಂಪಿ ನರ್ಸರಿ ಬಳಕೆಯ ಜಾಗವನ್ನು ಹೊರತುಪಡಿಸಿ, ಅಭಿವೃದ್ದಿಪಡಿಸದಿರುವ ಖಾಲಿ ಜಾಗದಲ್ಲಿ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಛೇರಿ ನಿರ್ಮಾಣಕ್ಕೆ ಜಾಗವನ್ನು ಐದು ವರ್ಷಗಳಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡುವಂತೆ ಕೋರಿರುತ್ತಾರೆ.

ಆದರೆ, ಪಾಲಿಕೆಯ ಆಸ್ತಿಯನ್ನು ಗುತ್ತಿಗೆ/ಕ್ರಯಕ್ಕೆ ನೀಡಬೇಕಾದಲ್ಲಿ ಸರ್ಕಾರದ ಆದೇಶಗಳು, ಸುತ್ತೋಲೆಗಳು ಹಾಗೂ ಪಾಲಿಕೆಯಲ್ಲಿ ಅಳವಡಿಸಿಕೊಂಡಿರುವ ನಿಯಮಗಳು ಈ ಕೆಳಕಂಡ ಕಾಯ್ದೆ ಅನ್ವಯ ಕ್ರಮವಹಿಸಬೇಕಾಗಿರುತ್ತದೆ.

1. ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ಕಲಂ 176 ಹಾಗೂ 176ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ, 3 ವರ್ಷಗಳವರೆಗೂ ಗುತ್ತಿಗೆ ನೀಡುವ ಅಧಿಕಾರವು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, 5 ವರ್ಷದವರೆಗೂ ಗುತ್ತಿಗೆ ನೀಡುವ ಅಧಿಕಾರವು ಮಹಾನಗರ ಪಾಲಿಕೆಯ ಸಭೆಗೆ ಇರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಘನ ಸರ್ಕಾರಕ್ಕೆ ಅಧಿಕಾರವಿರುತ್ತದೆ.
2. **ಘನ ಸರ್ಕಾರವು ಆದೇಶ ಸಂಖ್ಯೆ: ನಅಇ 129 ಟಿ.ಎಂ.ಡಿ 2002 ದಿನಾಂಕ:02-06-2003 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ /ಕ್ರಯ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂದು ಆದೇಶಿಸಿರುತ್ತದೆ.**

ಪಾಲಿಕೆಯ ಕೆ.ಎಂ.ಸಿ.ಕಾಯ್ದೆ 1976 ರ ನಿಯಮ 176 (6) ರಂತೆ Not with standing anything contained in this Act —

No movable property exceeding such sum in value as may be prescribed shall be sold otherwise than by public auction;

No property whether movable or immovable of whatever value shall be transferred free of cost or for an upset price;

no lease of any immovable property exceeding five years shall be granted;

no immovable property shall be disposed of by sale or by other transfer;
Except with the previous sanction of the Government. ಎಂದಿರುತ್ತದೆ.

ಆದ್ದರಿಂದ, ನಗರ ಪಾಲಿಕೆ ವಾರ್ಡ್ ನಂ:142, ಸುಂಕೇನಹಳ್ಳಿ ವ್ಯಾಪ್ತಿಯಲ್ಲಿನ ಕೆ.ಆರ್.ರಸ್ತೆ ನ್ಯಾಷನಲ್ ಕಾಲೇಜು ಆಟದ ಮೈದಾನಕ್ಕೆ ಹೊಂದಿಕೊಂಡಂತೆ ಇರುವ 142 x 47=6674 ಚದರಡಿಗಳ ಅಳತೆಯ ಜಾಗದ ಪೈಕಿ ಖಾಲಿ ಜಾಗವನ್ನು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಛೇರಿ ನಿರ್ಮಾಣಕ್ಕೆ 5-ವರ್ಷಗಳ ಅವಧಿಗೆ ಗುತ್ತಿಗೆಗೆ ಮಂಜೂರು ಮಾಡಲು ಕೋರಿರುವಂತೆ ಗುತ್ತಿಗೆಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ **ದಿನಾಂಕ: 09.03.2018ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಛೇರಿ ನಿರ್ಮಾಣಕ್ಕೆ ಗುತ್ತಿಗೆ ನೀಡಲು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 25.06.2018ರ ಸಭೆಯ ನಿರ್ಣಯ.**

**ನಿರ್ಣಯ: ದಿನಾಂಕ: 25.06.2018ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಸಮಿತಿಯು ಒಪ್ಪಿದೆ.**

## ***34]. ವಿಷಯದ ಸಂಖ್ಯೆ: ತೆಆಸ್ಥಾಸ/ 08 /2018-19***

ಆಯುಕ್ತರ ದಿನಾಂಕ: 24-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದ ಶಾಂತಿನಗರ ವಾರ್ಡ್ ಸಂಖ್ಯೆ.117 ರಲ್ಲಿನ ಪಿ.ಕೆ.ಕಾಲೋನಿಯಲ್ಲಿ ಹಲವಾರು ವರ್ಷಗಳಿಂದ ವಾಸಿಸುತ್ತಿರುವ ಬಡ ಜನರಿಗೆ ಶುದ್ಧ ಕ್ರಯಪತ್ರಗಳನ್ನು ನೀಡಲು ಕರ್ನಾಟಕ ಪ್ರದೇಶ ಕಾಂಗ್ರೇಸ್ ಕಮಿಟಿ ಜನರಲ್ ಸೆಕ್ರೆಟರಿ ಆದ ಶ್ರೀ.ಎಂ.ಕೆ.ಮುನಿಕೃಷ್ಣ ರವರು ಅರ್ಜಿ ಮೂಲಕ ಕೋರಿರುತ್ತಾರೆ.

ಅದರಂತೆ, ಕಾರ್ಯಪಾಲಕ ಅಭಿಯಂತರರು (ಶಾಂತಿನಗರ) ಉಪ ವಿಭಾಗಕ್ಕೆ ಒಳಪಡುವ ಪೌರ ಕಾರ್ಮಿಕರ ಕಾಲೋನಿಗೆ ಸಂಬಂಧಿಸಿರುವ 113 ನಿವಾಸಿಗಳ ಮನೆಯ ವಿವಿಧ ವಿಸ್ತೀರ್ಣದ ನಕ್ಷೆಗಳನ್ನು ತಯಾರಿಸಿ ನೀಡಿರುತ್ತಾರೆ.

ಪೌರ ಕಾರ್ಮಿಕರಿಗೆ ಹಕ್ಕುಪತ್ರ, ಕ್ರಯಪತ್ರ ನೀಡುವುದಕ್ಕೆ ನಕ್ಷೆಯನ್ನು ಸಲ್ಲಿಸಿರುತ್ತಾರೆ ಮತ್ತು ಬಿಬಿಎಂಪಿ ಪೂರ್ವ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ವೆಯರ್ ರವರು ನಕ್ಷೆಯನ್ನು ತಯಾರಿಸಿರುತ್ತಾರೆ ಹಾಗೂ ವಾರ್ಡ್ ಸಂಖ್ಯೆ:117 ವ್ಯಾಪ್ತಿಗೆ ಒಳಪಡುವ ಪಿ.ಕೆ.ಕಾಲೋನಿಯಲ್ಲಿನ ವಸತಿಯ ಸಂಖ್ಯೆಯಂತೆ ನೀಡಲು ನಕ್ಷೆಯನ್ನು ಫಲಾನುಭವಿಗಳ ಪಟ್ಟಿಯನ್ನು ಮತ್ತು MOSQUE AND BURIAL GROUND ಬಡಾವಣೆಯ ನಕ್ಷೆಯನ್ನು ನೀಡಿರುತ್ತಾರೆ.

ಮುಂದುವರೆದಂತೆ, ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬಿಬಿಎಂಪಿ ರವರಾದ ಶ್ರೀ.ಎನ್.ನರಸಿಂಹಮೂರ್ತಿ ರವರು ಮಾನ್ಯ ಆಯುಕ್ತರು ಬಿಬಿಎಂಪಿ ರವರಿಗೆ ಪತ್ರವನ್ನು ನೀಡಿ ಈಗಾಗಲೇ ಪಿ.ಕೆ.ಕಾಲೋನಿಯಲ್ಲಿ 65 ಫಲಾನುಭವಿಗಳಿಗೆ ನಿವೇಶನವನ್ನು ನೀಡಿದ್ದು, ಉಳಿಕೆ 113 ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ವಿತರಿಸುವ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿರುತ್ತಾರೆ ಹಾಗೂ ಉಲ್ಲೇಖಿತ ಪತ್ರದಂತೆ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಬಗ್ಗೆ ವಿವರಣೆಯನ್ನು ಸಹಾ ಕೋರಿರುತ್ತಾರೆ.

ತದನಂತರ, ಕರ್ನಾಟಕ ಗೃಹ ಮಂಡಳಿ ರವರ ಕಛೇರಿಯಿಂದ ಮಾನ್ಯ ಆಯುಕ್ತರು ಬಿಬಿಎಂಪಿ ರವರಿಗೆ ಪತ್ರವನ್ನು ನೀಡಿ ವಸತಿ ಯೋಜನೆಗಳಿಗೆ ಸಂಬಂಧಿಸಿದ ವಿವರವಾದ ಯೋಜನಾ ವರದಿಯನ್ನು

ಸಿದ್ಧಪಡಿಸಿ ಸಮಿತಿಯ ಶಿಫಾರಸ್ಸಿನೊಂದಿಗೆ ಸಕಾರದ ಅನುಮೋದನೆ ಪಡೆಯಲು ಸಮನ್ವಯ ಸಂಸ್ಥೆಗೆ ಯೋಜನೆಗಳ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆಂದು ಪತ್ರದಲ್ಲಿ ತಿಳಿಸಿರುವುದರಿಂದ ಶಾಂತಿನಗರ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ:117 ರಲ್ಲಿ ಬರುವ ಪಿ.ಕೆ.ಕಾಲೋನಿಯಲ್ಲಿರುವ 113 ಫಲಾನುಭವಿಗಳಿಗೆ ಶುದ್ಧ ಕ್ರಯಪತ್ರ/ಹಕ್ಕುಪತ್ರಗಳ ನೀಡುವ ಪಟ್ಟಿಯನ್ನು ಸಹಾಯಕ ಕಂದಾಯ ಅಧಿಕಾರಿ (ಶಾಂತಿನಗರ) ಕಛೇರಿ ರವರು ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ಈ ಎಲ್ಲಾ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ, ಉಳಿದ 113 ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ಮತ್ತು ಶುದ್ಧ ಕ್ರಯಪತ್ರಗಳನ್ನು ನೀಡಲು ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ **ದಿನಾಂಕ: 24.03.2018ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 25.06.2018ರ ಸಭೆಯ ನಿರ್ಣಯ.**

**ನಿರ್ಣಯ: 113 ಫಲನುಭವಿಗಳಿಗೆ ಹಕ್ಕುಪತ್ರ / ಶುದ್ಧ ಕ್ರಯ ಪತ್ರಗಳನ್ನು ವಿತರಿಸಲು ಅಗತ್ಯ ಕ್ರಮಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

## ***35]. ವಿಷಯದ ಸಂಖ್ಯೆ: ತೆಆಸ್ಥಾಸ/ 09 /2018-19***

ಆಯುಕ್ತರ ದಿನಾಂಕ: 09-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ನಂ:170, ಜಯನಗರ ಪೂರ್ವ 9ನೇ ಮುಖ್ಯರಸ್ತೆ, ಬಿ.ಟಿ.ಎಂ.ಬಡಾವಣೆಯಲ್ಲಿರುವ ಆಟದ ಮೈದಾನದ ಅಂಚಿನ ಜಾಗದಲ್ಲಿ ಹಾಲಿ ಇರುವ 10x10 ಅಡಿಗಳ ನಂದಿನಿ ಹಾಲಿನ ಕೇಂದ್ರದ ನವೀಕರಣ ಮಾಡಲು ಶ್ರೀಮತಿ.ಡಿ.ಆರ್. ಶಿಲ್ಪಶ್ರೀ ಎಂಬುವವರು ಕೋರಿರುತ್ತಾರೆ.

ಅರ್ಜಿದಾರರು ಕೋರಿರುವ ನಂದಿನಿ ಹಾಲಿನ ಕೇಂದ್ರವು ವಾರ್ಡ್-170, ಜಯನಗರ ಪೂರ್ವ 9ನೇ ಮುಖ್ಯರಸ್ತೆ, ಬಿ.ಟಿ.ಎಂ.ಬಡಾವಣೆಯಲ್ಲಿರುವ ಬಿಬಿಎಂಪಿ ಆಟದ ಮೈದಾನದ ಅಂಚಿನ ಜಾಗದಲ್ಲಿದ್ದು, ಹಾಲಿ ನಂದಿನಿ ಹಾಲಿನ ಕೇಂದ್ರಕ್ಕೆ ದಿನಾಂಕ:12-01-2012 ರಿಂದ 3ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿರುತ್ತದೆ. ಗುತ್ತಿಗೆ ಅವಧಿಯು 11-01-2015ಕ್ಕೆ ಮುಕ್ತಾಯಗೊಂಡಿದ್ದು ನವೀಕರಿಸಲು ಕೋರಿರುತ್ತಾರೆ. ಸಹಾಯಕ ಕಂದಾಯ ಅಧಿಕಾರಿ (ಜಯನಗರ), ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಜಯನಗರ) ರವರು ನಕ್ಷೆಯನ್ನು ದೃಢೀಕರಿಸಿ ನಂದಿನಿ ಹಾಲಿನ ಕೇಂದ್ರಕ್ಕೆ ನವೀಕರಣ ಮಾಡಲು ಪರಿಗಣಿಸುವಂತೆ ನಿಯಮಾನುಸಾರ ಪರಿಶೀಲಿಸಿ ಅಭಿಪ್ರಾಯ ನೀಡಿರುತ್ತಾರೆ.

ಪಾಲಿಕೆಯ ಯಾವುದೇ ಸ್ವತ್ತನ್ನು ಖಾಸಗಿಯವರಿಗೆ ನೀಡುವಾಗ ಈ ಕೆಳಕಂಡ ಕಾಯ್ದೆ ಮತ್ತು ನಿಯಮವನ್ನು ಪಾಲಿಸಬೇಕಾಗಿರುತ್ತದೆ.

1. ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ಕಲಂ 176 ಹಾಗೂ 176ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ, 3 ವರ್ಷಗಳವರೆಗೂ ಗುತ್ತಿಗೆ ನೀಡುವ ಅಧಿಕಾರವು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, 5 ವರ್ಷದವರೆಗೂ ಗುತ್ತಿಗೆ ನೀಡುವ ಅಧಿಕಾರವು ಮಹಾನಗರ ಪಾಲಿಕೆಯ ಸಭೆಗೆ ಇರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಘನ ಸರ್ಕಾರಕ್ಕೆ ಅಧಿಕಾರವಿರುತ್ತದೆ.
2. **ಘನ ಸರ್ಕಾರವು ಆದೇಶ ಸಂಖ್ಯೆ: ನಅಇ 129 ಟಿ.ಎಂ.ಡಿ 2002 ದಿನಾಂಕ:02-06-2003 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ /ಕ್ರಯ ಆಧಾರದ**

**ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂದು ಆದೇಶಿಸಿರುತ್ತದೆ.**

ಪಾಲಿಕೆಯ ಕೆ.ಎಂ.ಸಿ.ಕಾಯ್ದೆ 1976 ರ ನಿಯಮ 176 (6) ರಂತೆ Not with standing anything contained in this Act —

No movable property exceeding such sum in value as may be prescribed shall be sold otherwise than by public auction;
No property whether movable or immovable of whatever value shall be transferred free of cost or for an upset price;
no lease of any immovable property exceeding five years shall be granted;
no immovable property shall be disposed of by sale or by other transfer;

Except with the previous sanction of the Government. ಎಂದಿದ್ದು, ಈ ಬಗ್ಗೆ ಸೂಕ್ತ ಕ್ರಮಕ್ಕೆ ಸಲ್ಲಿಸಿದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ: 16-03-2016ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರಡಿ ಒಂದಕ್ಕೆ ವಸತಿಯೇತರ ರೂ.6,965/- ಗಳಿದ್ದು, ಪ್ರಸ್ತಾಪಿತ ಆಸ್ತಿಯ ಅಳತೆ 10*10=100 ಚದರಡಿಗಳಾಗಿದ್ದು, ಮಾರುಕಟ್ಟೆ ಮೌಲ್ಯ ರೂ.6965x100=6,95,500/-ಗಳು ಶೇಕಡ 10% ರಷ್ಟು ವಾರ್ಷಿಕ ಗುತ್ತಿಗೆ ರೂ.69,650/- ಮಾಸಿಕ ಗುತ್ತಿಗೆ ಹಣ ರೂ.5805/- ಗಳಾಗುತ್ತದೆ. ಇದರಂತೆ ಕಂದಾಯವನ್ನು ನಿಗಧಿಪಡಿಸಲು ತಮ್ಮ ಆದೇಶಕ್ಕಾಗಿ ಮಂಡಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಶ್ರೀಮತಿ.ಡಿ.ಆರ್.ಶಿಲ್ಪಶ್ರೀ ರವರಿಗೆ ನಂದಿನಿ ಹಾಲಿನ ಕೇಂದ್ರವನ್ನು ಗುತ್ತಿಗೆ ಅವಧಿಯನ್ನು ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ **ದಿನಾಂಕ: 09.03.2018ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 25.06.2018ರ ಸಭೆಯ ನಿರ್ಣಯ.**

**ನಿರ್ಣಯ: ಆಯುಕ್ತರ ದಿನಾಂಕ: 09.03.2018ರ ಟಿಪ್ಪಣಿಯನ್ನು ಒಪ್ಪುತ್ತಾ, ಮಾಸಿಕ ದರ ರೂ.5805/- (ರೂ. ಐದು ಸಾವಿರದ ಎಂಟು ನೂರ ಐದು ಮಾತ್ರ)ಗಳ ಗುತ್ತಿಗೆಯನ್ನು ನಿಗಧಿಪಡಿಸಿ, 5 ವರ್ಷಗಳ ಅವಧಿಗೆ ಗುತ್ತಿಗೆಯನ್ನು ನೀಡುವುದೆಂದು ಸಮಿತಿಯು ತೀರ್ಮಾನಿಸಿತು.**

***36]. ವಿಷಯದ ಸಂಖ್ಯೆ: ತೆಆಸ್ಥಾಸ/ 10 /2018-19***

ಆಯುಕ್ತರ ದಿನಾಂಕ: 04-07-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ. ಕೆ.ಎನ್. ಪುಟ್ಟೆಗೌಡ, ವಕೀಲರು ರವರ ಮನವಿ ಪತ್ರದ ದಿನಾಂಕ: 16.01.2018ರ ಪತ್ರದಲ್ಲಿ, ಕರ್ನಾಟಕ ಹೈಕೋರ್ಟ್‌ನಲ್ಲಿ ಕರ್ನಾಟಕ ಸರ್ಕಾರದ ಹೆಚ್ಚುವರಿ ಅಡ್ವೋಕೇಟ್ ಜನರಲ್ ರವರಿಗೆ, ಕೇಂದ್ರ ಸರ್ಕರದ ಹೆಚ್ಚುವರಿ ಸಾಲಿಸಿಟರ್ ಜನರಲ್ ರವರಿಗೆ ಪ್ರತಿ ಪ್ರಕರಣಗಳಲ್ಲಿ ದಿನಕ್ಕೆ ರೂ.10,000/- ಸಂಬಾವನೆಯನ್ನು ನೀಡುತ್ತಿದ್ದು, ಕರ್ನಾಟಕ ಸಕಾರದ ಹೆಚ್ಚುವರಿ ಅಡ್ವೋಕೇಟ್ ಜನರಲ್ ರವರಿಗೆ ಮಾಸಿಕ ರೂ.75000/-

ಗಳ ರೀಟೈನ್ಯರ್ ಪಾಲಿಕೆಯ ವಕೀಲರಾಗಿ ಕಾರ್ಯನಿರ್ವಹಿಸುತ್ತಿರುವ ಇವರನ್ನು ಹಿರಿಯ ವಕೀಲರೆಂದು ಪರಗಣಿಸಲು ಹಾಗೂ ಎಲ್ಲಾ ಪ್ರಕರಣಗಳಲ್ಲಿ ದಿನಕ್ಕೆ ರೂ.10,000/– ಸಂಭಾವನೆಯನ್ನು ನೀಡುತ್ತಿದ್ದು, ಕರ್ನಾಟಕ ಸರ್ಕಾರದ ಹೆಚ್ಚುವರಿ ಅಡ್ವೋಕೇಟ್ ಜನರಲ್ ರವರಿಗೆ ಮಾಸಿಕ ರೂ.75000/–ಗಳ ರೀಟೈನ್ಯರೆ(ಸಂಭಾವನೆ)ಯನ್ನು ಸಹ ನೀಡುತ್ತಿದ್ದು, ಸದರಿ ಸರ್ಕಾರಿ ಆದೇಸವನ್ನಿ ಈ ಪತ್ರದೊಂದಿಗೆ ಲಗತ್ತಿಸುತ್ತಾ, ನನಗೂ ಸಹ ಅವರುಗಳಷ್ಟೇ ಅನುಭವವಿದ್ದು, ಅಂದಿನ ಬೆಂಗಳೂರು ಸಿಟಿ ಕಾರ್ಪೋರೇಷನ್, ಬೆಂಗಳೂರು ಮಹಾನಗರ ಪಾಲಿಕೆ ಈಗಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಕಳೆದ 31 ವರ್ಷಗಳಿಂದಲೂ ನ್ಯಾಯಾಲಯಗಳಲ್ಲಿ ನಿರಂತರವಾಗಿ ಪ್ರತಿನಿಧಿಸುತ್ತಾ ಬಂದಿದ್ದು, ನಗರ ಪಾಲಿಕೆ ಪ್ರಕರಣಗಳಲ್ಲಿ ಹೆಚ್ಚುವರಿ ಅನುಭವವನ್ನು ಹೊಂದಿದ್ದು, ಮಹಾನಗರ ಪಾಲಿಕೆ ಪ್ರಕರಣಗಳಲ್ಲಿ ನಾನು ಪ್ರತಿನಿಧಿಸುವ ಅನೇಕ ಪ್ರಕರಣಗಳಲ್ಲಿ ಮಹಾನಗರ ಪಾಲಿಕೆ ವಿರುದ್ಧವಾಗಿ ಖಾಸಗಿ ವ್ಯಕ್ತಿಗಳು ಹಿರಿಯ ವಕೀಲರನ್ನು ನೇಮಿಸಿಕೊಂಡು ಹಿರಿಯ ವಕೀಲರಿಗೆ ದಿನಕ್ಕೆ ರೂ. 50,000/–ಕ್ಕೂ ಹೆಚ್ಚು ಶುಲ್ಕವನ್ನು ನೀಡುತ್ತಾರೆ. ಆದರೆ ನಗರ ಪಾಲಿಕೆ ಪ್ರತಿನಿಧಿಸುವ ನಗರ ಪ್ರಕರಣ ತೀರ್ಮಾನವಾದ ನಂತರ ಕೇವಲ ರೂ. 8000/– ಶುಲ್ಕವನ್ನು ನೀಡುತ್ತಿದ್ದೀರಿ, ಆದರೆ ಸದರಿ ಶುಲ್ಕ ಅತೀ ಕಡಿಮೆಯಾಗಿದ್ದು ಹೆಚ್ಚುವರಿ ಅಡ್ವೋಕೇಟ್ ಜನರಲ್‌ಗೆ ಕೇಂದ್ರ ಸರ್ಕಾರದ ಹೆಚ್ಚುವರಿ ಸಾಲಿಸಿಟರ್ ಜನರಲ್ ರವರಿಗೆ ದಿನಕ್ಕೆ ಪ್ರತಿ ಪ್ರಕರಣಗಳಲ್ಲಿ ರೂ. 10,000/– ಶುಲ್ಕವನ್ನು ನೀಡುತ್ತಿದ್ದು, ಕಳೆದ 31 ವರ್ಷಗಳಿಂದ ನನಗೆ ಪಾಲಿಕೆಯಲ್ಲಿ ಪ್ರತಿನಿಧಿಸುತ್ತಿರುವ ಏಕೈಕ ವಕೀಲನಾದ ನನಗೆ ನಗರ ಪಾಲಿಕೆಯ ಹಿರಿಯ ವಕೀಲನೆಂದು ಪರಿಗಣಿಸಿ ನಾನು ಪ್ರತಿನಿಧಿಸುವ ಎಲ್ಲಾ ಪ್ರಕರಣಗಳಲ್ಲಿ ನ್ಯಾಯಾಲಯಗಳ ಮುಂದೆ ನಾನು ಪ್ರತಿನಿಧಿಸುವ ಇಲಾಖೆಗೆ ಆದೇಶಿಸಬೇಕೆಂದು ಕೋರಿರುತ್ತಾರೆ.

ಸದರಿ ವಕೀಲರ ಕೋರಿಕೆಯ ಬಗ್ಗೆ ಹಿರಿಯ ವಕೀಲರೆಂದು ಪರಿಗಣಿಸಲು ಹಾಗೂ ಎಲ್ಲಾ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಕ್ಕೆ ರೂ.10,000/–ಗಳಂತೆ ಶುಲ್ಕವನ್ನು ನಿಗಧಿಪಡಿಸಲು ಕೋರಿರುವ ಬಗ್ಗೆ ಪರಿಶೀಲಿಸಿ ಅಭಿಪ್ರಾಯವನ್ನು ನೀಡುವಂತೆ ಕಾನೂನು ಕೋಶದ ಮುಖ್ಯಸ್ಥರವನ್ನು ಕೋರಲಾಗಿದ್ದ ಮೇರೆಗೆ ಕಾನೂನು ಕೋಶದ ಮುಖ್ಯಸ್ಥರವರು ಸದರಿ ವಕೀಲರ ಮನವಿಯ ಬಗ್ಗೆ ಸಂಬಂಧಪಟ್ಟ ಸ್ಥಾಯಿ ಸಮಿತಿ ಅನುಮೋದನೆ ಪಡೆದ ನಂತರ ಸ್ಥಾಯಿ ಸಮಿತಿಯ ನಿರ್ಣಯದಂತೆ ಕ್ರಮವಹಿಸಬಹುದೆಂದು ಅಭಿಪ್ರಾಯಿಸಿರುತ್ತಾರೆ.

ಮುಂದುವರೆದು Principal Secretary to Government ರವರು ದಿನಾಂಕ: 27–03–2017ರ ನಡವಳಿಯಲ್ಲಿ The Karnataka Law Officers (Appointment and Conditions of Service) Rules, 1977-Amendment to Schedules, I,II(Part-I, II&III), III (Part-A & Part-B) & VII and Government order No. LAW 45 LAD 2016, BENGALURU, Dated: 27th March 2017

The Government of Karnataka hereby makes the following further Amendments to the Karnataka Law Officers (Appointment and Conditions of Service) Rules, 1988, namely:-

1. Title- These Rules may be called, The Karnataka Law Officer (Appointment and Conditions of Service) (Amendment) Rules, 2017.
2. These Rules shall come into effect from the 1st April 2017.
3. Amendment to Schedule-I, Schedule-II (Part-I, II & III), Schedule-III (Part-A & Part-B) & Schedule-VII-in the Karnataka Law Officer (Appointment and Conditions of Service) Rules, 1977-the existing Schedule-I, II (Part-I, II & III), Schedule-III (Part-A & Part-B) & VII-Shall be replaced by the respective schedules appended to this Order in Annexure-I to IV.

This Order is issued with the concurrence of the Finance Department vide their Note No. FD 513 Exp-10/2016 dated 11-01-2017.

Salary etc. of Advocate General and Additional Advocate General.

1. The Advocate General of Karnataka shall be paid a retainer fee of one Lakh rupees per Mensem.

1(a) The Additional Advocate General shall be paid a retainer fee of seventy-five thousand rupees per Mensem.

2. The Advocate General shall be paid a fee of twenty thousand rupees per case per day for his appearance in the State High Court or the High Court of any other State, or the Central Administrative Tribunal or the State Administrative Tribunals or any other Court within the State or outside the State.

Provided that in connected cases fee shall be payable at the rate of rupees fifteen thousand per day for the first case and at the rate of one thousand five hundred per case for the remaining cases, so, however, that the total fees payable for the remaining cases shall not exceed Fifty thousand rupees.

**2(a).The Additional Advocate General shall be paid a fee of ten thousand rupees per case per day for his appearance in the State High Court or the High Court of any other State, or the Central Administrative Tribunal or the State Administrative Tribunals or any other Court within the State or outside the State.**

**Provided that in connected cases fee shall be payable at the rate of rupees ten thousand per day for the first case and at the rate of one thousand per case for the remaining cases, so, however, that the total fees payable for the remaining cases shall not exceed Thirty thousand rupees.**

3.The Advocate General shall be paid a fee of Thirty thousand rupees per day for his appearance before a Commission of Inquiry constituted under the Commission of Inquiry Act, 1952 (Central Act LX of 1952) or before an Arbitrator appointed under any law for the time being in force.

3(a) The Additional Advocate General shall be paid a fee of Thirty thousand rupees per day for his appearance before a Commission of Inquiry constituted under the Commission of Inquiry Act, 1952 (Central Act LX of 1952) or before an Arbitrator appointed under any law for the time being in force.

4. The Advocate General shall be paid a fee of rupees Seventy Five thousand per case per day for his appearance before the Supreme Court. Provided that in connected cases fee shall be payable at the rate of rupees fifty thousand per day for the first case and at the rate of ten thousand rupees per case for the remaining cases, so, however, that the total fees payable for the remaining cases shall not exceed two lakhs."

4(a) The Advocate General shall be paid a fee of rupees twenty Five thousand per case per day for his appearance before the Supreme Court. Provided that in connected cases fee shall be payable at the rate of rupees twenty five thousand per day for the first case and at the rate of three thousand rupees per case for the remaining cases, so, however, that the total fees payable for the remaining cases shall not exceed rupees one lakhs.

ಈ ಸಂಬಂಧ ಕಾನೂನು ಕೋಶದ ಮುಖ್ಯಸ್ಥರವರ ಅಭಿಪ್ರಾಯದಂತೆ ಹಾಗೂ ನಡವಳಿಯ ಕ್ರಮ ಸಂಖ್ಯೆ: 2(ಎ) ರಂತೆ ಸದರಿ ವಕೀಲರು ಕೋರಿರುವ ಬಗ್ಗೆ ಸಂಬಂಧಪಟ್ಟ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಮದೆ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 04.07.2018ರ ಟಿಪ್ಪಣಿಯನ್ನು ಒಪ್ಪುತ್ತಾ, ಶ್ರೀ.ಕೆ.ಎನ್.ಪುಟ್ಟೆಗೌಡ, ಹಿರಿಯ ಹಾಗೂ ಅನುಭವಿ ವಕೀಲರು ಆದ ಇವರು 31 ವರ್ಷಗಳಿಂದಲೂ ಪಾಲಿಕೆ ಪರವಾಗಿ ನ್ಯಾಯಾಲಯಗಳಲ್ಲಿ ಪ್ರತಿನಿಧಿಸುತ್ತಾ ಬಂದಿದ್ದು, ಅನೇಕ ಪ್ರಕರಣಗಳಲ್ಲಿ ಪಾಲಿಕೆಯ ಪರವಾಗಿ ಯಶಸ್ವಿ ನಿರ್ಣಯಗಳನ್ನು ಪಡೆದುಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಇವರ ಸೇವಾ ಹಿರಿತನವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ನಡವಳಿಯ ಕ್ರಮ ಸಂಖ್ಯೆ: 2(ಎ)ರ ಅನ್ವಯ ಆಯುಕ್ತರು ಸೂಕ್ತ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

## ***37]. ವಿಷಯದ ಸಂಖ್ಯೆ: ತೆಆಸ್ಥಾಸ/ 11 /2018–19***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 12–07–2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್–97ರಲ್ಲಿ 2017–18ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ ಪಿ–0472 (Maintenance and improvements to community Halls at with the approval of T&F committee) ಅನುದಾನದಡಿ ಪ್ರಸ್ತಾಪಿತ ಕಾಮಗಾರಿಗೆ ಜಾಬ್ ಕೋಡ್ ನೀಡಲು ಪ್ರಸ್ತಾವನೆ ಸಲ್ಲಿಸಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ.

| Sl. No | P-code | Name of work | Est cost (In Lakhs) |
|---|---|---|---|
| 1 | P-0472 | Construction of Community hall ground floor and first floor at Ramakrishna Seva Nagar in ward No.97 | 100.00 |

ಮೇಲ್ಕಾಣಿಸಿದ ಕಾಮಗರಿಗೆ ಪಾಲಿಕೆ ಸದಸ್ಯರು ಶ್ರೀಮತಿ. ಕುಮಾರಿ ಪಳನಿಕಾಂತ್ ರವರು ಹಾಗೂ ಮುಖ್ಯ ಅಭಿಯಂತರರು (ಪಶ್ಚಿಮ) ರವರು ಕಾಮಗಾರಿಯ ಕ್ರಿಯಾ ಯೋಜನೆಯ ಅನುಮೋದನೆಗೆ ಶಿಫಾರಸ್ಸು ಮಾಡಿರುತ್ತಾರೆ.

ಅನುದಾನ ಲಭ್ಯತೆಯ ಬಗ್ಗೆ ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳು ವರದಿ ಮಾಡಿರುವಂತೆ, 2017–18 ನೇ ಸಾಲಿನ ಪಾಲಿಕೆ ಆಯವ್ಯಯ ಲೆಕ್ಕಶೀರ್ಷಿಕೆ ಪಿ–472 ಲಭ್ಯವಿರುವ ರೂ.100.00 ಲಕ್ಷಗಳ ಅನುದಾನದಲ್ಲಿ ವಾರ್ಡ್ ಸಂಖ್ಯೆ: 97ರ ಕಾಮಗಾರಿಯ ಮೊತ್ತ ರೂ.100.00 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯಂತೆ ಕ್ರಮವಹಿಸಬಹುದಾಗಿದೆಂದು ಅಭಿಪ್ರಾಯಿಸಿದ್ದು, ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮಾನ್ಯ ಆಯುಕ್ತರರವರ ಆದೇಶದಂತೆ ವಾರ್ಡ್ 97ರ ಮೊತ್ತ ಮೇಲ್ಕಾಣಿಸಿದ ಕಾಮಗಾರಿಗಳ ಒಟ್ಟು ಮೊತ್ತವಾದ ರೂ.100.00 ಲಕ್ಷಗಳಿಗೆ ಕ್ರಿಯಾ ಯೋಜನೆಗೆ ಅನುಮೋದನೆ ಮತ್ತು ಜಾಬ್ ಕೋಡ್ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆರ್ಥಿಕ ವರ್ಷವು ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿದೆ.**

## ***38]. ವಿಷಯದ ಸಂಖ್ಯೆ: ತೆಆಸ್ಥಾಸ/ 12 /2018-19***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 12-07-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆಯ 2018-19ರ ಆಯವ್ಯಯದ ಬಗ್ಗೆ ನಡೆದ ಪಾಲಿಕೆ ಕೌನ್ಸಿಲ್ ಸಭೆಯ ಚರ್ಚೆಯಲ್ಲಿ ನಮ್ಮ ದೇಶದ ಇತರ ನಗರಗಳಲ್ಲಿ ಓ.ಎಫ್.ಸಿ ಅಳವಡಿಕೆ ಶುಲ್ಕಗಳು ಪಾಲಿಕೆಯು ನಿಗದಿಪಡಿಸಿರುವ ಶುಲ್ಕಗಳಿಗಿಂತ ಹೆಚ್ಚಾಗಿರುವ ಬಗ್ಗೆ ಚರ್ಚಿಸಲಾಗಿದ್ದು, ಓ.ಎಫ್.ಸಿ ಅಳವಡಿಕೆ ಮತ್ತು ಟವರ್ ಅಳವಡಿಕೆಗೆ ಪಾಲಿಕೆಯಲ್ಲಿ ನಿಗಧಿಗೊಳಿಸಿರುವ ಶುಲ್ಕದ ದರವನ್ನು ಪರಾಮರ್ಶಿಸಿ ಪುನರ್ ನಿಗದಿಗೊಳಿಸುವ ಕುರಿತು ಪರಿಶೀಲಿಸುವಂತೆ ತಿಳಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಅಂತರ್ಜಾಲದಲ್ಲಿ ಶೋಧಿಸಲಾಗಿ ಹಲವಾರು ನಗರಗಳ ಓ.ಎಫ್.ಸಿ ಅಳವಡಿಕೆ ಶುಲ್ಕ/ನೆಲಬಾಡಿಗೆ ವಿವರಗಳು ಲಭ್ಯವಿರುತ್ತದೆ. ಸದರಿ ಲಭ್ಯ ವಿವರಗಳ ಪ್ರಕಾರ ದೇಶದ ಹಲವಾರು ನಗರಗಳು ಕೇಂದ್ರ ಸರ್ಕಾರದ ದೂರ ಸಂಪರ್ಕ ಇಲಾಖೆಯ ಆದೇಶದನ್ವಯ ಶುಲ್ಕ ವಸೂಲಾತಿ ಮಾಡುತ್ತಿರುವುದು ಕಂಡುಬಂದಿದೆ. ದೇಶದ ಇತರ ನಗರಗಳಲ್ಲಿ ಓ.ಎಫ್.ಸಿ ಅಳವಡಿಕೆ ಶುಲ್ಕ ಮತ್ತು ನೆಲಬಾಡಿಗೆ ಬಗ್ಗೆ ಅಂತರ್ಜಾಲದಿಂದ ಸಂಗ್ರಹಿಸಿರುವ ವಿವರಗಳು ಈ ಕೆಳಗಿನಂತಿವೆ.

| ಕ್ರ.ಸಂ | ನಗರ | ಅಳವಡಿಕೆ ಶುಲ್ಕ ರೂ.ಪ್ರತಿ ಮೀ | ನೆಲಬಾಡಿಗೆ ರೂ.ಪ್ರತಿ ಮೀ |
|---|---|---|---|
| 1 | ಮದುರೈ, ಸೇಲಂ, ಕೊಯಮತ್ತೂರು, ತಿರುಚಿನಾಪಳ್ಳಿ, ಮತ್ತು ತಿರುನಲ್ವೇಲಿ | ಇಲ್ಲ | 6.3 |
| 2 | ಚೆನ್ನೈ ಕಾರ್ಪೋರೇಷನ್ | ಇಲ್ಲ | 9.4 |
| 3 | ಚಂಡೀಗಡ | ಇಲ್ಲ | 10 |
| 4 | ಹರಿಯಾಣ | 30-100ರೂ (20 ವರ್ಷಗಳಿಗೆ) | |
| 5 | ಮುಂಬೈ (ರೂ.60 ಲಕ್ಷ ಪ್ರತಿ ಕಿ.ಮೀ ಪ್ರಮಾಣಕ ವೆಚ್ಚದಂತೆ Normative cost) | ರೂ. 1.8 ಲಕ್ಷ ಅಳವಡಿಕೆ ಶುಲ್ಕ ಮತ್ತು ರೂ. 3 ಲಕ್ಷದ ಕ್ಯಾಶ್‌ಲೆಸ್ ಇಕ್ವಿಟಿ ಶೇರ್‌ಗಳು-ಮಹಾರಾಷ್ಟ್ರ ಸರ್ಕಾರಕ್ಕೆ ರೂ.1.8 ಲಕ್ಷ ಅಳವಡಿಕೆ ಶುಲ್ಕ ಮುಂಬೈ ಕಾರ್ಪೋರೇಷನ್‌ಗೆ ರೂ.7500 ಪ್ರತಿ ಮೀಟರ್‌ರಸ್ತೆ ಪುನರ್ ನಿರ್ಮಾಣ ಶುಲ್ಕ ಮತ್ತು 2 ಎಂ.ಬಿ.ಪಿ.ಎಸ್ ಬ್ರಾಡ್‌ಬ್ಯಾಂಡ್ ಸಂಪರ್ಕ ಉಚಿತವಾಗಿ ಸರ್ಕಾರ ಸೂಚಿಸುವ ಸರ್ಕಾರಿ ಸಂಸ್ಥೆಗಳಿಗೆ. | |
| 6 | ಹೈದರಾಬಾದ್ | ರೂ.200 ಪ್ರತಿ ಮೀಟರ್ | |
| 7 | ದೆಹಲಿ | ರೂ.103.65 ಪ್ರತಿ ಮೀಟರ್ ನಿಂದ ಅರೂ339.59 ಪ್ರತಿ ಮೀಟರ್ | |
| 8 | ಕೋಲ್ಕತ್ತ | ರೂ.165 ಪ್ರತಿ ಮೀಟರ್ ಪರಿಶೀಲನಾ ಶುಲ್ಕ ಮತ್ತು ರೂ.192 ಪ್ರತಿ ಮೀಟರ್ ಮೇಲ್ವಿಚಾರಣಾ ಶುಲ್ಕ | |

ಪ್ರಸ್ತುತ ಪಾಲಿಕೆಯಲ್ಲಿಟೆಲಿಕಾಂ ಮತ್ತು ನಾನ್–ಟೆಲಿಕಾಂ ಸಂಸ್ಥೆಗಳಿಗೆ ಹೆಚ್.ಡಿ.ಡಿ ಮಾದರಿಯಲ್ಲಿ ಓ.ಎಫ್.ಸಿ ಡಕ್ಟ್ ಅಳವಡಿಕೆಗೆ ಒಂದು ಸಲಕ್ಕೆ ಮೊದಲ ಮೂರು ಡಕ್ಟ್‌ಗಳಿಗೆ ರೂ.600/– ಪ್ರತಿ ಮೀಟರ್ ಮತ್ತುಇಂಟರ್ನೆಟ್ ಸೇವಾ ಸಂಸ್ಥೆಗಳಿಗೆ ರೂ.200/– ಪ್ರತಿ ಮೀಟರ್ ಶುಲ್ಕ ವಸೂಲಿ ಮಾಡಲಾಗುತ್ತಿದೆ. ಟೆಂಡರ್ ಶ್ಯೂರ್ ರಸ್ತೆಗಳಲ್ಲಿ ಎಲ್ಲಾ ಸಂಸ್ಥೆಗಳಿಗೆ ರೂ.1500/– ಪ್ರತಿ ಮೀಟರ್ ಶುಲ್ಕ ವಸೂಲಿ ಮಾಡಲಾಗುತ್ತಿದೆ. ಆದರೆ ಪಾಲಿಕೆ ವ್ಯಾಪ್ತಿಯಲ್ಲಿ ಸದರಿ ಶುಲ್ಕ ಅಳವಡಿಕೆ ಶುಲ್ಕವಾಗಿರುತ್ತದೆ ಮತ್ತು ನೆಲಬಾಡಿಗೆಯನ್ನು ವಸೂಲಿ ಮಾಡಲಾಗುತ್ತಿಲ್ಲ.

ಕರ್ನಾಟಕ ಸರ್ಕಾರದ Karnataka Municipal Corporation (Regulation of Cable laying) Rules, 2015ರ ಕರಡು ಪ್ರಸ್ತಾವನೆ ಈಗಾಗಲೇ ಹೊರಡಿಸಲಾಗಿದ್ದು, ಇದರಂತೆ ಪ್ರತಿ ಮೀಟರಿಗೆ ರೂ.80/– ಮತ್ತು ಪ್ರತಿ ಗುಂಡಿಗೆ ರೂ.750 ಶುಲ್ಕ ನಿಗದಿಪಡಿಸಲಾಗಿದೆ. ಅಲ್ಲದೇ ಪ್ರತಿ ವರ್ಷಕ್ಕೆ ಪ್ರತಿ ಕಿ.ಮೀ.ಗೆ ರೂ.800 ರಂತೆ ವಾರ್ಷಿಕ ನೆಲಬಾಡಿಗೆ ನಿಗದಿಪಡಿಸಲಾಗಿದೆ. ಸದರಿ ಮೊತ್ತಕ್ಕಿಂತ ಪಾಲಿಕೆಯಲ್ಲಿ ಪ್ರಸ್ತುತ ಪಡೆಯುತ್ತಿರುವ ಶುಲ್ಕ ಹೆಚ್ಚಾಗಿರುವುದು ಸ್ವಯಂ ವೇದ್ಯವಾಗಿದೆ. ಅಲ್ಲದೇ ದೇಶದ ಇತರ ನಗರಗಳಿಗೆ ಹೋಲಿಸಿದಾಗ ಸಹ ಮೊತ್ತ ಪಾಲಿಕೆಯಲ್ಲಿ ಪ್ರಸ್ತುತ ಪಡೆಯುತ್ತಿರುವ ಶುಲ್ಕ ಹೆಚ್ಚಾಗಿರುತ್ತದೆ.

ಈ ಹಿನ್ನಲೆಯಲ್ಲಿ ಶುಲ್ಕವನ್ನು ಅಪಾರವಾಗಿ ಹೆಚ್ಚುವರಿ ಮಾಡುವುದ ಪ್ರಸ್ತುತ ಸಂದರ್ಭದಲ್ಲಿ ಸೂಕ್ತವೆನಿಸದಿದ್ದರೂ ಪಾಲಿಕೆಯಲ್ಲಿ ಟಿಲಿಕಾಂ ಮತ್ತು ನಾನ್–ಟೆಲಿಕಾಂ ಸಂಸ್ಥೆಗಳಿಗೆ ಹೆಚ್ಚು ಶುಲ್ಕ ವಿಧಿಸಲಾಗುತ್ತಿದ್ದು, ಇಂಟರ್ನೆಟ್ ಸೇವಾ ಸಂಸ್ಥೆಗಳಿಗೆ ಕಡಿಮೆ ಶುಲ್ಕ ವಿಧಿಸಲಾಗುತ್ತಿದೆ. ಸದರಿ ತಾರತಮ್ಯವನ್ನು ಕಡಿಮೆ ಮಾಡಿ ಇಂಟರ್ನೆಟ್ ಸೇವಾ ಸಂಸ್ಥೆಗಳಿಗೆ ವಿಧಿಸುವ ಶುಲ್ಕವನ್ನು ರೂ.200 ರಿಂದ 600ಕ್ಕೆ ಏರಿಸುವ ಅವಕಾಶವಿದ್ದು ಈ ಬಗ್ಗೆ ಕ್ರಮಕೈಗೊಳ್ಳಬಹುದಾಗಿರುತ್ತದೆ.

ಮುಂದುವರೆದು ಟೆಲಿಕಾಂ ಟವರ್‌ಗಳ ಸ್ಥಾಪನೆ ಬಗ್ಗೆ ಸಹ ಪರಿಶೀಲಿಸಲಾಯಿತು. ಓ.ಎಫ್.ಸಿ ಜಾಲದ ಅವಿಭಾಜ್ಯ ಅಂಗವಾಗಿರುವ ಮೊಬೈಲ್ ಟವರ್/ಟೆಲಿಕಮ್ಯುನಿಕೇಷನ್ ಟವರ್‌ಗಳ ಸ್ಥಾಪನೆಯು ಕೆ.ಎಂ.ಸಿ ಕಾಯ್ದೆಯ ಪರಿವ್ಯಾಪ್ತಿಗೆ ಒಳಪಡುತ್ತಿದ್ದು, ಇಂತಹ ಟವರ್‌ಗಳ ಸ್ಥಾಪನೆಗೆ ಪಾಲಿಕೆಯ ಅನುಮತಿ ಅತ್ಯಗತ್ಯವಾಗಿರುತ್ತದೆ. ಆದರೂ ಸಹಿತ ಪಾಲಿಕೆಯ ಯಾವುದೇ ಅನುಮತಿ ಪಡೆಯದೇ ಬೆಂಗಳೂರು ನಗರಾದ್ಯಾಂತ ಟೆಲಿಕಮ್ಯುನಿಕೇಷನ್ ಟವರ್‌ಗಳನ್ನು ಹಲವಾರು ಸಂಸ್ಥೆಗಳು ಅಳವಡಿಸಿದ್ದು ಈ ಬಗ್ಗೆ ಸಾರ್ವಜನಿಕರಿಂದ ಮತ್ತು ಜನಪ್ರತಿನಿಧಿಗಳಿಂದ ಅಸಂಖ್ಯ ದೂರುಗಳು ಸ್ವೀಕಾರಗೊಂಡಿವೆ. ಕರ್ನಾಟಕ ಸರ್ಕಾರವು ಟೆಲಿಕಮ್ಯುನಿಕೇಷನ್ ಟವರ್‌ಗಳ ಸ್ಥಾಪನೆಯ ಬಗ್ಗೆ ನಿಯಮಾವಳಿಗಳನ್ನು ರೂಪಿಸುತ್ತಿದ್ದು ಕರಡು ನಿಯಮಾವಳಿ Karnataka Installation of New Tele communication Infrastructure Tower Regulations 2015ಯನ್ನು ಈಗಾಗಲೇ ರಾಜ್ಯಪತ್ರದಲ್ಲಿ ಪರಕಟಿಸಲಾಗಿದೆ. ಸದರಿ ಕರಡು ನಿಯಮಾವಳಿಗಳು ಟೆಲಿಕಮ್ಯುನಿಕೇಷನ್ ಟವರ್‌ಗಳನ್ನು ಸ್ಥಾಪಿಸಬೇಕಿರುವ ಸ್ಥಳಗಳ ಆಯ್ಕೆಯ ಬಗ್ಗೆ ನಿಯಮಗಳು ಮತ್ತು ನಿಗದಿತ ಶುಲ್ಕವನ್ನು ಹೊಂದಿರುತ್ತವೆ ಮತ್ತು ನಿಕಟ ಭವಿಷ್ಯದಲ್ಲಿ ಸದರಿ ನಿಯಮಾವಳಿಗಳು ಜಾರಿಗೆ ಬರುವ ನಿರೀಕ್ಷೆಯಿದೆ.

ಇವುಗಳ ಹಿನ್ನೆಲೆಯಲ್ಲಿ ದಿನಾಂಕ: 10–07–2017 ರಂದು ಓ.ಎಫ್.ಸಿ ಸಂಸ್ಥೆಯವರೊಂದಿಗೆ ನಡೆದ ಸಭೆಯಲ್ಲಿ ಸಭಾಧ್ಯಕ್ಷರಾದ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮಾನ್ಯ ಅಧ್ಯಕ್ಷರು ಹದಿನೈದು ದಿನಗಳೊಳಗಾಗಿ ಬೆಂಗಳೂರು ನಗರಾದ್ಯಂತ ಸ್ಥಾಪಿಸಿರುವ ಟೆಲಿಕಮ್ಯೂನಿಕೇಷನ್ ಟವರ್‌ಗಳ ವಿವರಗಳನ್ನು ಸ್ವಯಂಘೋಷಣೆ ಮೂಲಕ ಸಲ್ಲಿಸಲು ಓ.ಎಫ್.ಸಿ ಮತ್ತು ಟವರ್ ನಿರ್ಮಾಣ ಸಂಸ್ಥೆಗಳಿಗೆ ಸೂಚಿಸಿರುತ್ತಾರೆ. ಅಲ್ಲದೇ ಸ್ವಯಂಘೋಷಣೆ ಮಾಡಿಕೊಂಡ ಸಂಸ್ಥೆಗಳ ಟವರ್‌ಗಳು ಟೆಲಿಕಮ್ಯುನಿಕೇಷನ್ ಟವರ್‌ಗಳ ಸ್ಥಾಪನೆಯ ಬಗ್ಗೆ ಕರಡು ನಿಯಮಾವಳಿಯಲ್ಲಿ ಸೂಚಿಸಿರುವಂತೆ ಸ್ಥಾಪಿಸಲಾಗಿದ್ದಲ್ಲಿ ಕರಡು ನಿಯಮಾವಳಿಯಲ್ಲಿ ಸೂಚಿಸಿರುವ ರೂ.50,000/– ಪ್ರತಿಟವರ್ ಶುಲ್ಕ ಪಡೆದು ಕ್ರಮಬದ್ಧಗೊಳಿಸಲು ಸಹ ಸೂಚಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸ್ವಯಂಘೋಷಣೆ ಮಾಡಿಕೊಂಡ ಸಂಸ್ಥೆಗಳ ಟವರ್‌ಗಳು ಟೆಲಿಕಮ್ಯುನಿಕೇಷನ್ ಟವರ್‌ಗಳ ಸ್ಥಾಪನೆಯ ಬಗ್ಗೆ ಕರಡು ನಿಯಮಾವಳಿಯಲ್ಲಿ ಸೂಚಿಸಿರುವಂತೆ ಸ್ಥಾಪಿಸಲಾಗಿದ್ದಲ್ಲಿ ಕರಡು ನಿಯಮಾವಳಿಯಲ್ಲಿ ಸೂಚಿಸಿರುವ ರೂ.50,000/- ಪ್ರತಿಟವರ್ ಶುಲ್ಕ ಪಡೆದು ಕ್ರಮಬದ್ಧಗೊಳಿಸಲು ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಟಿಪ್ಪಣಿ ಮಂಡಿಸಲಾಗಿದ್ದು ದಿನಾಂಕ: 07-08-2017 ರಂದು ವಿಷಯ ಸಂಖ್ಯೆತೆಆಸ್ಥಾಸ/60/2017-18 ರಂತೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ದಿನಾಂಕ: 30-08-2017 ರಂದು ವಿಷಯ ಸಂಖ್ಯೆ 02(166)/2017-18 ರಂತೆ ಪಾಲಿಕೆ ಸಭೆಗಳು ಸದರಿ ಶುಲ್ಕವನ್ನು ಅನುಮೋದಿಸಿವೆ.

ಪಾಲಿಕೆಯ ವ್ಯಾಪ್ತಿಯಲ್ಲಿ ಈಗಾಗಲೇ ಸ್ವಯಂ ಘೋಷಣೆ ಮಾಡಿಕೊಂಡಿರುವ ಟವರ್‌ಗಳ ಸಂಖ್ಯೆ ಈ ಕೆಳಗಿನಂತಿದೆ.

| ಕ್ರ.ಸಂ | ಸಂಸ್ಥೆ | ಸ್ವಯಂಘೋಷಣೆ ಮಾಡಿಕೊಂಡಿರುವ ಟವರ್‌ಗಳ ಸಂಖ್ಯೆ |
|---|---|---|
| 1 | ಅಮೇರಿಕನ್ ಟವರ್ ಕಂಪನಿ (ಎ.ಟಿ.ಸಿ) | 1920 |
| 2 | ಇಂಡಸ್ ಟವರ್ಸ್ | 2904 |
| 3 | ಟವರ್ ವಿಷನ್ | 448 |
| 4 | ರಿಲಯನ್ಸ್ ಜಿಯೋ ಇನ್ಫೋಕಾಮ್ ಲಿಮಿಟೆಡ್ | 873 |
| 5 | ರಿಲಯನ್ಸ್ ಇನ್ಫ್ರಾ | 621 |
| | ಒಟ್ಟು | 6766 |

ಪ್ರಸ್ತುತ ಪಾಲಿಕೆಯಲ್ಲಿ ಟವರ್‌ಗಳ ಅನುಮತಿ ಪ್ರಕ್ರಿಯೆಯನ್ನು ಜಿ.ಐ.ಎಸ್ ಆಧಾರಿತ ಅಂತರ್ಜಾಲ ವ್ಯವಸ್ಥೆಯ ಮೂಲಕ ಪಾರದರ್ಶಕವಾಗಿ ಮಾಡಲು ಅವಕಾಶ ಕಲ್ಪಿಸಲಾಗಿದ್ದು ಸದರಿ ವ್ಯವಸ್ಥೆಯನ್ನು ಶೀಘ್ರದಲ್ಲೇ ಜಾರಿಗೆ ತರಲಾಗುವುದು. ಒಂದುಟವರ್ ಸ್ಥಾಪನೆಗೆ ಅನುಮತಿ ನೀಡುವ ಪೂರ್ವದಲ್ಲಿ ಕರಡು Karnataka Installation of New Telecommunication Infrastructure Tower Regulations 2015ನಲ್ಲಿ ವಿಧಿಸಲಾಗಿರುವಂತೆ ಮಾಲೀಕತ್ವ ದಾಖಲೆ, ಸ್ಯಾಂಕ್ಷನ್‌ಡ್ ಪ್ಲಾನ್, ಒಕ್ಯುಪನ್ಸಿ ಸರ್ಟಿಫಿಕೇಟ್. ಲೀಸ್‌ಡೀಡ್, ಫೈರ್ ಎನ್.ಓ.ಸಿ ಇಂಡೆಮ್ನಿಟಿ ಬಾಂಡ್, ಫಾರೆಸ್ಟ್ ಎನ್.ಓ.ಸಿ ಮುಂತಾದ ಹಲವು ದಾಖಲೆಗಳನ್ನು ಅಪ್‌ಲೋಡ್ ಮಾಡಬೇಕಿರುತ್ತದೆ. ಅಲ್ಲದೇ ಸದರಿ ಟವರ್ ಜಲಮೂಲಗಳಾದ ಕೆರೆ, ನಾಲೆಗಳಲ್ಲಿ ಸ್ಥಾಪನೆಯಾಗಿರದ ಬಗ್ಗೆ, ಸರೋವರಗಳಿಂದ ಕನಿಷ್ಟ 6 ಮೀ ದೂರದಲ್ಲಿರುವ ಬಗ್ಗೆ, ರೈಲ್ವೆ ಸ್ವತ್ತುಗಳಿಂದ ಕನಿಷ್ಠ 30 ಮೀ ದೂರದಲ್ಲಿರುವ ಬಗ್ಗೆ, ರಿಸರ್ವ್ ಫಾರೆಸ್ಟ್‌ನಲ್ಲಿ ಇರದ ಬಗ್ಗೆ, ಶಾಲೆ, ಕಾಲೇಜು, ಧಾರ್ಮಿಕ ಕೇಂದ್ರಗಳು ಮತ್ತು ರಕ್ಷಿತ ಸ್ಮಾರಕಗಳಿಂದ ಕನಿಷ್ಟ 100 ಮೀ ದೂರದಲ್ಲಿರುವ ಬಗ್ಗೆ ಅಲ್ಲದೇ ಟವರ್‌ಗಳಲ್ಲಿ ಸುರಕ್ಷತೆಗಾಗಿ ಸಲಕರಣೆಗಳು ಅಳವಡಿಸಲ್ಪಟ್ಟಿರುವ ಬಗ್ಗೆ ಮತ್ತು ಸೆಟ್-ಬ್ಯಾಕ್‌ಗಳನ್ನು ಬಿಟ್ಟಿರುವ ಬಗ್ಗೆ ಪರಿಶೀಲಿಸಿ ವರದಿ ಪಡೆದ ನಂತರವಷ್ಟೇ ನೀಡಬೇಕಿರುತ್ತದೆ. ಈ ಹಿನ್ನಲೆಯಲ್ಲಿ ವಿವರವಾದ ವ್ಯವಸ್ಥೆಯನ್ನು ಹೊಂದಿರುವ ಅಂತರ್ಜಾಲ ವ್ಯವಸ್ಥೆಯನ್ನು ಸಿದ್ದಪಡಿಸಲಾಗಿದ್ದು ಸದ್ಯದಲ್ಲೇ ಜಾರಿಗೆ ತರಲಾಗುವುದು.

ಪಾಲಿಕೆ ಸಭೆಯಲ್ಲಿ ಸೂಚಿಸಲಾದಂತೆ ಇತರ ನಗರಗಳಲ್ಲಿ ಟೆಲಿಕಾಂ ಟವರ್ ಅಳವಡಿಕೆ/ನೋಂದಣಿ ಶುಲ್ಕಗಳು ಮತ್ತು ವಾರ್ಷಿಕ ನವೀಕರಣ ಶುಲ್ಕ ಈ ಕೆಳಗಿನಂತಿವೆ.

| ಕ್ರ. ಸಂ | ನಗರ | ಅಳವಡಿಕೆ ಶುಲ್ಕ/ನೋಂದಣಿ ಶುಲ್ಕ ರೂ.ಪ್ರತಿಟವರ್ | ವಾರ್ಷಿಕ ನವೀಕರಣ ಶುಲ್ಕ ರೂ.ಪ್ರತಿಟವರ್ |
|---|---|---|---|
| 1 | ಆಂಧ್ರಪ್ರದೇಶ (ಕಾರ್ಪೋರೇಶನ್‌ಗಳಲ್ಲಿ) | 1,00,000/– | |
| 2 | ಬಿಹಾರ(ಕಾರ್ಪೋರೇಶನ್‌ಗಳಲ್ಲಿ) | 50,000/– | 15,000/– |
| 3 | ಹರ್ಯಾಣ | 2,50,000/– | |
| 4 | ಗೋವಾ | 25,000/– | |
| 5 | ಶಿಮ್ಲಾ, ಹಿಮಾಚಲ್ ಪ್ರದೇಶ | 20,000/– | 10,000/– |
| 6 | ಕೇರಳ | 50,000/– | |
| 7 | ಮಧ್ಯಪ್ರದೇಶ (ಕಾರ್ಪೋರೇಷನ್‌ಗಳಲ್ಲಿ) | 1,00,000/– | 20,000/– |
| 8 | ಮುಂಬೈ | ಅಭಿವೃದ್ಧಿ ಶುಲ್ಕ–ಟವರ್ ಸ್ಥಾಪಿಸುವ ಸ್ವತ್ತಿನ ದರದ 1% ಮತ್ತು 50,000/– ಆಡಳಿತಾತ್ಮಕ ಶುಲ್ಕ | |
| 9 | ಪಂಜಾಬ್ | 50,000/– ಮೊದಲ ಬಳಕೆದಾರರಿಗೆ ಮತ್ತು ರೂ.25,000/– ಪ್ರತಿ ಹೆಚ್ಚುವರಿ ಬಳಕೆದಾರರಿಗೆ | |
| 10 | ಕೋಲ್ಕತ್ತ | ಅಧೀಕೃತ ಟವರ್‌ಗಳಿಗೆ ರೂ.2,00,000/– ಅನಧೀಕೃತ ಟವರ್ ಸಕ್ರಮಕ್ಕೆ ರೂ.3,00,000/– | |

ಈ ಹಿನ್ನಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಓ.ಎಫ್.ಸಿ ಅಳವಡಿಕೆ ಸಂದರ್ಭದಲ್ಲಿ ಮತ್ತುಟವರ್ ಸ್ಥಾಪನೆ ಕುರಿತಂತೆ ಕೆ.ಎಂ.ಸಿ ಕಾಯ್ದೆಯಅನ್ವಯ

1. ಪಾಲಿಕೆಯಲ್ಲಿ ಟೆಲಿಕಾಂ ಮತ್ತು ನಾನ್ ಟೆಲಿಕಾಂ ಸಂಸ್ಥೆಗಳಿಗೆ ಹೆಚ್.ಡಿ.ಡಿ ಮಾದರಿಯಲ್ಲಿ ಓ.ಎಫ್.ಸಿ ಡಕ್ಟ್ ಅಳವಡಿಕೆಗೆಒಂದು ಸಲಕ್ಕೆ ಮೊದಲ ಮೂರು ಡಕ್ಟ್‌ಗಳಿಗೆ ರೂ.600 ಶುಲ್ಕ ವಿಧಿಸಲಾಗುತ್ತಿದ್ದು ಇಂಟರ್ನೆಟ್ ಸೇವಾ ಸಂಸ್ಥೆಗಳಿಗೆ ರೂ.200 ಶುಲ್ಕ ವಿಧಿಸಲಾಗುತ್ತಿದೆ. ಎಲ್ಲ ಸಂಸ್ಥೆಗಳೂ ಸಾಮ್ಯ ಮಾದರಿಯ ಓ.ಎಫ್.ಸಿ ಅಳವಡಿಸುವ ಹಿನ್ನಲೆಯಲ್ಲಿ ಸದರಿ ತಾರತಮ್ಯವನ್ನು ನಿವಾರಿಸುವ ನಿಟ್ಟಿನಲ್ಲಿ ಇಂಟರ್ನೆಟ್ ಸೇವಾ ಸಂಸ್ಥೆಗಳಿಗೆ ವಿಧಿಸುವ ಶುಲ್ಕವನ್ನು ರೂ.200 ರಿಂದ ರೂ.600 ಕ್ಕೆ ಏರಿಸಲು, ಹೆಚ್ಚುವರಿ ಡಕ್ಟ್‌ಗಳಿಗೆ ಸಮಾನುಪಾತದಲ್ಲಿ ಶುಲ್ಕ ವಿಧಿಸಲು, ಅಲ್ಲದೇ ಸದರಿ ಮೊತ್ತದ 25% ಮೊತ್ತವನ್ನು ಭದ್ರತಾ ಠೇವಣಿಯಾಗಿ ಪಡೆದುಕೊಳ್ಳಲು ಮತ್ತು ಈವರೆಗೆ ಪಾಲಿಕೆಯು ಸದರಿ ಇಂಟರ್ನೆಟ್ ಸೇವಾ ಸಂಸ್ಥೆಗಳೊಡನೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ರದ್ದುಪಡಿಸಿ ನೂತನ ದರಗಳೊಡನೆ ಹೊಸ ಒಡಂಬಡಿಕೆ ಮಾಡಿಕೊಳ್ಳಲು ಮತ್ತು
2. ಟವರ್ ಸ್ಥಾಪನೆ ಬಗ್ಗೆ ಸ್ವಯಂಘೋಷಣೆ ಮಾಡಿಕೊಂಡ ಸಂಸ್ಥೆಗಳ ಟವರ್‌ಗಳು ಟೆಲಿಕಮ್ಯೂನಿಕೇಷನ್ ಟವರ್‌ಗಳ ಸ್ಥಾಪನೆಯ ಬಗ್ಗೆ ಕರಡು ನಿಯಮಾವಳಿಯಲ್ಲಿ ಸೂಚಿಸಿದಂತೆ

ಸ್ಥಾಪಿಸಲಾಗಿದ್ದಲ್ಲಿ ಕರಡು ನಿಯಮಾವಳಿಯಲ್ಲಿ ಸೂಚಿಸಿರುವ ರೂ.2,50,000/- ಪ್ರತಿಟವರ್ ನೋಂದಣಿ ಶುಲ್ಕ ಮತ್ತು ವಾರ್ಷಿಕ ನವೀಕರಣ ಶುಲ್ಕ ರೂ.20,000/- ಪ್ರತಿಟವರ್ ಪಡೆದು ಕ್ರಮಬದ್ಧಗೊಳಿಸಲು

ಅನುಮೋದನೆಯನ್ನು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 12.07.2018ರ ಟಿಪ್ಪಣಿಯನ್ನು ಈ ಕೆಳಕಂಡ ಮಾರ್ಪಾಡುಗಳೊಂದಿಗೆ ಒಪ್ಪಲು ಸಮಿತಿಯು ತೀರ್ಮಾನಿಸಿತು.**

1. **ಹೆಚ್.ಡಿ.ಡಿ ಮಾದರಿಯಲ್ಲಿ ಓ.ಎಫ್.ಸಿ ಡಕ್ಟ್ ಅಳವಡಿಕೆಗೆ ಒಂದು ಸಲಕ್ಕೆ ಮೊದಲ ಮೂರು ಡಕ್ಟ್‌ಗಳಿಗೆ ವಿಧಿಸಲಾಗುತ್ತಿದ್ದ ರೂ.600/- ಶುಲ್ಕಗಳಿಗೆ ಬದಲಾಗಿ ರೂ.750/-ಕ್ಕೆ ಹೆಚ್ಚಿಸಿದೆ.**
2. **ಪ್ರತಿಟವರ್ ನೊಂದಣಿ ಶುಲ್ಕ ಮತ್ತು ವಾರ್ಷಿಕ ನವೀಕರಣ ಶುಲ್ಕ ರೂ.20,000/- ಗಳಿಗೆ ಬದಲಾಗಿ 50,000/-ಕ್ಕೆ ಹೆಚ್ಚಿಸಿದೆ.**

***39]. ವಿಷಯದ ಸಂಖ್ಯೆ: ತೆಆಸ್ಥಾಸ/ 13 /2018-19***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26-07-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೊಮ್ಮನಹಳ್ಳಿ ವಲಯದಲ್ಲಿ ವಾರ್ಡ್-184ರಲ್ಲಿ ಕೈಗೊಳ್ಳಬೇಕಾಗಿರುವ 5 ಕೆಲಸಗಳಿಗೆ ಒಟ್ಟು ಮೊತ್ತ ರೂ.200.00 ಲಕ್ಷಗಳ ಮೊತ್ತಕ್ಕೆ ಅನುದಾನ ಹಂಚಿಕೆಯನ್ನು ಲೆಕ್ಕಶೀರ್ಷಿಕೆ ಪಿ-3253ರ ಅಡಿಯಲ್ಲಿ ಈ ಕೆಳಕಂಡ ಕೆಲಸಗಳನ್ನು ನಿರ್ವಹಿಸಲು ಕೋರಿರುತ್ತಾರೆ.

| Sl. No | Name of work | Est cost (In Lakhs) |
|---|---|---|
| 1 | Drilling of 165 mm dia new Borewell and providing Electriction and distrubution of pipe line in ward No.184 Uttarahalli | 50.00 |
| 2 | Providing drinking water through water tankers in ward No. 184 Uttarahalli | 25.00 |
| 3 | pot holes filling (110 Villages Kaveri water works) in ward No.184 Uttarahalli | 50.00 |
| 4 | Improvements of roads at surrounding areas of arehalli in ward No.184 Uttarahalli | 50.00 |
| 5 | providing 250 watts sodium vapour fittings and Automatic Switches control wires along with connected Accessories to important Area / Junction in ward No.184 uttarahalli | 25.00 |

ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರು ಕಂಡಿಕೆ (04) ರಲ್ಲಿ ಸದರಿ ಕಾಮಗಾರಿಯನ್ನು ಲೆಕ್ಕಶಿರ್ಷಿಕೆ ಪಿ-3253ರ ಅಡಿಯಲ್ಲಿ ಅನುವು ಮಾಡಲು ಕೋರಿದ್ದು ಹಾಗೂ ಪೂಜ್ಯ ಮಹಾಪೌರರು ರವರ ಟಿಪ್ಪಣಿ ಸಂಖ್ಯೆ: 51, 17-18, ದಿ:14-02-2018ರಲ್ಲಿ ವಾರ್ಡ್ 47ರ ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿಟ್ಟಿರುವ ಮೊತ್ತದಲ್ಲಿ ವಾರ್ಡ್ 184ಗೆ ಒಟ್ಟು ಮೊತ್ತ ರೂ.200.00 ಲಕ್ಷಗಳನ್ನು ಹಂಚಿಕೆ ಮಾಡಲು ಕೋರಿರುತ್ತಾರೆ. ಮುಖ್ಯ ಆರ್ಥಿಕ ಅಧಿಕರಿ ರವರು ಕಂಡಿಕೆ (07) ರಲ್ಲಿ ಸಮಿತಿಯ ಮುಂದೆ ಮಂಡಿಸಲು ವರದಿ ಸಲ್ಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರ ಆದೇಶದಂತೆ, ವಾರ್ಡ್ 47ರ ಅಭಿವೃದ್ಧಿ ಕಾಮಗಾರಿಗಳಿಗೆ ಮಿಸಲಿಟ್ಟಿರುವ ಮೊತ್ತದಲ್ಲಿ

ವಾರ್ಡ್ 184ಗೆ ಒಟ್ಟು ಮೊತ್ತ ರೂ.200.00 ಲಕ್ಷಗಳನ್ನು ಹಂಚಿಕೆ ಮಾಡಲು ಅನುಮೋದನೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆರ್ಥಿಕ ವರ್ಷವು ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿದೆ.**

***ಹೆಚ್ಚುವರಿ ವಿಷಯಗಳು:-***

***40]. ವಿಷಯದ ಸಂಖ್ಯೆ: ತೆಆಸ್ಥಾಸ/ 14 /2018-19***

ಆಯುಕ್ತರ ದಿನಾಂಕ: 26-07-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕರ್ನಾಟಕ ಸರ್ಕಾರವು ಬೆಂಗಳೂರು ನಗರದ ನಾಗರೀಕರಿಗೆ ಕೈಗೆಟಕುವ ದರದಲ್ಲಿ ಊಟ ಮತ್ತು ಉಪಹಾರ ನೀಡುವ ಯೋಜನೆಯನ್ನು ಕೈಗೆತ್ತಿಕೊಂಡಿದ್ದು, ಸದರಿ ಯೋಜನೆಯ ಅನುಷ್ಠಾನವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜವಾಬ್ದಾರಿಗೆ ನೀಡಿರುತ್ತದೆ.

ಈ ನಿಟ್ಟಿನಲ್ಲಿ ಬೆಂಗಳೂರು ನಗರದಲ್ಲಿ ಲಭ್ಯವಿರುವ ಸರ್ಕಾರಿ ಜಾಗದಲ್ಲಿ ಪ್ರತಿ ವಾರ್ಡ್‌ಗೆ ಒಂದರಂತೆ 198 ಇಂದಿರಾ ಕ್ಯಾಂಟೀನ್ ಕಟ್ಟಡ ನಿರ್ಮಿಸಲು ಹಾಗೂ ಪ್ರತಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಂದು ಇಂದಿರಾ ಕ್ಯಾಂಟೀನ್ ಅಡಿಗೆ ಮನೆ ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ಈಗಾಗಲೇ 174 ಇಂದಿರಾ ಕ್ಯಾಂಟೀನ್‌ಗಳು ಹಾಗೂ 21 ಅಡುಗೆ ಕೇಂದ್ರ ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ದಿನಾಂಕ:16.08.2017 ರಿಂದ ಕಾರ್ಯಾರಂಭ ಮಾಡಲಾಗಿರುತ್ತದೆ.

ಇಂದಿರಾ ಕ್ಯಾಂಟೀನ್ ಯೋಜನೆಯನ್ನು ದಿನಾಂಕ:07.06.2017 ರ ಸಚಿವ ಸಂಪುಟದ ತೀರ್ಮಾನದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವತ್ತು ಮತ್ತು ಕರ್ನಾಟಕ ಸರ್ಕಾರದ ಇತರೆ ಇಲಾಖೆಗಳ ಸ್ವತ್ತುಗಳಲ್ಲಿ ಇಂದಿರಾ ಕ್ಯಾಂಟೀನ್ ನಿರ್ಮಿಸುವುದೆಂದು ಮತ್ತು ಸದರಿ ಸ್ವತ್ತುನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಿರ್ವಹಣೆ ಮಾಡಬೇಕೆಂದು ಸೂಚಿಸಿರುತ್ತದೆ.

ಸದರಿ ಇಂದಿರಾ ಕ್ಯಾಂಟೀನ್ ಕಟ್ಟಡ ನಿರ್ಮಾಣವನ್ನು Pre-Cast ತಂತ್ರಜ್ಞಾನದಿಂದ ನಿರ್ಮಿಸಲಾಗಿದ್ದು, ಮೆ||ಕೆ.ಇ.ಎಫ್ ಸಂಸ್ಥೆಯವರು Pre-Cast ಕಟ್ಟಡವನ್ನು ನಿರ್ಮಿಸಿಕೊಟ್ಟಿರುತ್ತಾರೆ. ಸದರಿ ಅಂದಾಜು ಪಟ್ಟಿಯಲ್ಲಿ ಕಟ್ಟಡ ನಿರ್ಮಾಣ ಮಾತ್ರ ಸೀಮಿತಗೊಂಡಿರುತ್ತದೆ.

ಇಂದಿರಾ ಕ್ಯಾಂಟೀನ್ ಕಟ್ಟಡ ನಿರ್ಮಿಸಿದ ನಂತರ ಬೆಂಗಳೂರು ನಗರದ ಮಾನ್ಯ ಪೋಲೀಸ್ ಆಯುಕ್ತರು, ದಿನಾಂಕ:05.09.2017 ರಂದು ಪತ್ರವನ್ನು ಬರೆದು ಎಲ್ಲಾ ಇಂದಿರಾ ಕ್ಯಾಂಟೀನ್ ಮತ್ತು ಅಡುಗೆ ಕೋಣೆಗಳಿಗೆ ಹೆಚ್ಚಿನ ಭದ್ರತೆಯನ್ನು ಒದಗಿಸಲು ಹಾಗೂ ಎಲ್ಲಾ ಇಂದಿರಾ ಕ್ಯಾಂಟೀನ್ ಕಟ್ಟಡಗಳಿಗೆ ಕಾಂಪೌಂಡ್/ಗ್ರೀಲ್‌ಗಳನ್ನು ತಪ್ಪದೆ ಒದಗಿಸಬೇಕೆಂದು ಭದ್ರತಾ ದೃಷ್ಠಿಯಿಂದ (Security Reasons) ಸಲಹೆಯನ್ನು ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಸದರಿ ಭದ್ರತಾ ಕಾಮಗಾರಿಗಳನ್ನು ತುರ್ತಾಗಿ ಕೈಗೆತ್ತಿಕೊಳ್ಳಬೇಕಾಗದ ಹಿನ್ನಲೆಯಲ್ಲಿ ಎಲ್ಲಾ ವಲಯದ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರುಗಳಿಗೆ ಸೂಚನೆಯನ್ನು ನೀಡಿ ತಮ್ಮ ತಮ್ಮ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಸ್ಥಳಕ್ಕೆ ಅನುಗುಣವಾಗಿ ಇಂದಿರಾ ಕ್ಯಾಂಟೀನ್ ಕಟ್ಟಡದ ಭದ್ರತೆ ಮತ್ತು ಇತರೆ ಸೌಲಭ್ಯಗಳನ್ನು ಕೂಡಲೇ ಒದಗಿಸಬೇಕೆಂದು ಮತ್ತು ಸದರಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವ ಹಿನ್ನಲೆಯಲ್ಲಿ ಸದರಿ ಕಾಮಗಾರಿಯನ್ನು ಸರ್ಕಾರದಿಂದ ಕೆ.ಟಿ.ಪಿ.ಪಿ ಕಾಯ್ದೆ ಸೆಕ್ಷನ್ 4(ಜಿ) ಅನ್ವಯ ವಿನಾಯಿತಿ ಪಡೆದಿರುವ ಸರ್ಕಾರಿ ಸಂಸ್ಥೆಯಾದ ಮೆ||ಕೆ.ಆರ್.ಐ.ಡಿ.ಎಲ್ ವತಿಯಿಂದ

ಎಲ್ಲಾ ಸೌಲಭ್ಯ (Augmentation/Ambience Work) ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸೂಚಿಸಲಾಗಿರುತ್ತದೆ.

ಸದರಿ ಸೂಚನೆಯಂತೆ ವಲಯದ ಎಲ್ಲಾ ಮುಖ್ಯ ಅಭಿಯಂತರರುಗಳು ತಮ್ಮ ತಮ್ಮ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಇಂದಿರಾ ಕ್ಯಾಂಟೀನ್ ಕಟ್ಟಡದ ಸುತ್ತಮುತ್ತಲಿನ ಕಾಮಗಾರಿ ನಿರ್ವಹಿಸಲು ಅಂದಾಜು ಪಟ್ಟಿಗಳನ್ನು ಸಲ್ಲಿಸಿದ್ದು,ಸದರಿ ಇಂದಿರಾ ಕ್ಯಾಂಟೀನ್ ಕಟ್ಟಡದ ಸೌಲಭ್ಯ (Augmentation/Ambience Works) ಕಾಮಗಾರಿಗಳನ್ನು ಮೂರು ಹಂತದಲ್ಲಿ ಕೈಗೊಂಡಿದ್ದು, ಸದರಿ ವೆಚ್ಚವು ಒಟ್ಟು ರೂ.38.00 ಕೋಟಿಗಳಾಗಿದ್ದು, ಸದರಿ ಮೊತ್ತವನ್ನು ಕರ್ನಾಟಕ ಸರ್ಕಾರದಿಂದ ನಗರೋತ್ಥಾನ ಯೋಜನೆಯಡಿಯಲ್ಲಿ ನೀಡಲಾದ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳಿಗೆ ಟೆಂಡರ್ ಕರೆದ ಸಂಧರ್ಭದಲ್ಲಿ ಬಂದ **"ಕಡಿಮೆ ಟೆಂಡರ್ ಪ್ರೀಮಿಯಂ"** ನಿಂದ ಉಳಿತಾಯವಾದ ಮೊತ್ತದಲ್ಲಿ ಭರಿಸಿಕೊಳ್ಳಲು ಸರ್ಕಾರಕ್ಕೆ ದಿನಾಂಕ:10.01.2018 ಮತ್ತು 16.03.2018 ರಂದು ಪ್ರಸ್ತಾವನೆಯನ್ನು ಸಲ್ಲಿಸಲಾಯಿತು. ವಲಯದ ಮುಖ್ಯ ಅಭಿಯಂತರರುಗಳು ಸಲ್ಲಿಸಿರುವ ಇಂದಿರಾ ಕ್ಯಾಂಟೀನ್ ಕಟ್ಟಡದ ಸುತ್ತಮುತ್ತಲಿನ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ಅನುಬಂಧ–1 ರಲ್ಲಿ ಈ ಪತ್ರದೊಂದಿಗೆ ಲಗತ್ತಿಸಿದೆ.

ಆದರೆ, ಸದರಿ ಪ್ರಸ್ತಾವನೆಯನ್ನು ಘನ ಸರ್ಕಾರವು ಪರಿಶೀಲಿಸಿ, ಕರ್ನಾಟಕ ರಾಜ್ಯ ಸರ್ಕಾರದ ಸಚಿವ ಸಂಪುಟವು ಇಂದಿರಾ ಕ್ಯಾಂಟೀನ್ ಕಟ್ಟಡ ನಿರ್ಮಿಸಲು ಮಾತ್ರ ಅನುದಾನ ಒದಗಿಸಿದ್ದು, ಇಂದಿರಾ ಕ್ಯಾಂಟೀನ್ ಕಟ್ಟಡದ ಸುತ್ತಮುತ್ತಲಿನ ಸೌಲಭ್ಯ ಕಾಮಗಾರಿಗಳಿಗೆ ಅನುದಾನ ಒದಗಿಸುವ ಪ್ರಸ್ತಾವನೆಯು ಎಲ್ಲೇ ಮೀರಿದ್ದಾಗಿರುತ್ತದೆ ಎಂದು ಟಿಪ್ಪಣಿಯನ್ನು "The Proposal of BBMP is rejected as this is beyond the scope of the programmee approved by the Cabinet. Any additional work taken up may be paid by BBMP from its own funds." ಎಂದು ಅಭಿಪ್ರಾಯಿಸಿರುತ್ತಾರೆ.

ಸದರಿ ವಿಷಯವಾಗಿ ಸರ್ಕಾರದ ಮಟ್ಟದಲ್ಲಿ ಚರ್ಚಿಸಲಾಗಿ ಇಂದಿರಾ ಕ್ಯಾಂಟೀನ್ ನಿರ್ಮಾಣದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಲವಾರು ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಇದರಿಂದ ಬಿಬಿಎಂಪಿಯ ಆಸ್ತಿ ಮೌಲ್ಯವು ಹೆಚ್ಚಾಗಿರುತ್ತದೆ ಎಂದು ಅಭಿಪ್ರಾಯಿಸಿರುತ್ತಾರೆ.

ಸದರಿ ಇಂದಿರಾ ಕ್ಯಾಂಟೀನ್ ಕಟ್ಟಡಗಳ ಭದ್ರತೆ ಮತ್ತು ಸೌಲಭ್ಯ ಒದಗಿಸುವ ಕಾಮಗಾರಿಯನ್ನು ಕೈಗೊಳ್ಳಲಾದ ಪ್ರಯುಕ್ತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವತ್ತಿನ ಮೌಲ್ಯವು (Asset Value) ಸುಮಾರು ರೂ.690.00 ಕೋಟಿ ಮೊತ್ತಕ್ಕೂ ಹೆಚ್ಚಿಗೆಯಾಗಿರುತ್ತದೆ. ಆದ್ದರಿಂದ, ಘನ ಸರ್ಕಾರದ ಆದೇಶದಂತೆ ಇಂದಿರಾ ಕ್ಯಾಂಟೀನ್ ಸುತ್ತಮುತ್ತಲು ಭದ್ರತೆ ಮತ್ತು ಇತರೆ ಸೌಲಭ್ಯ (Augmentation/Ambience Work) ಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವಂತ ಅನುದಾನದಲ್ಲಿ ಭರಿಸಿಕೊಳ್ಳಬಹುದಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2018–19ರ ಆಯವ್ಯಯವು ಸರ್ಕಾರದ ವತಿಯಿಂದ ಅನುಮೋದನೆಗೊಂಡಿದ್ದು, ಇಂದಿರಾ ಕ್ಯಾಂಟೀನ್ ಸುತ್ತಮುತ್ತಲು ಭದ್ರತೆ ಮತ್ತು ಇತರೆ ಸೌಲಭ್ಯ (Augmentation/Ambience Work) ಗಳನ್ನು ಒದಗಿಸುವ ಕಾಮಗಾರಿಗಳಿಗೆ ಅನುದಾನ ಲಭ್ಯವಿಲ್ಲವಾಗಿರುವುದರಿಂದ 2018–19ನೇ ಸಾಲಿನ ಆಯವ್ಯಯದಲ್ಲಿ ಉಳಿಕೆಯಾಗಬಹುದಾದ ಅನುದಾನವನ್ನು "ಆಯವ್ಯಯದ ಅನುದಾನ ಮರುಹೊಂದಾಣಿಕೆ (Re-appropriation of grants)" ಅಡಿಯಲ್ಲಿ ಅನುದಾನವನ್ನು ಅನುಮೋದಿಸಬೇಕಾಗಿರುತ್ತದೆ. ಕಾಮಗಾರಿಯನ್ನು ಪೂರ್ಣಗೊಳಿಸಿ ಒಂದು ವರ್ಷ ಸಮಯವಾಗಿರುವ ಹಿನ್ನಲೆಯಲ್ಲಿ ಸದರಿ ಕಾಮಗಾರಿಗಳನ್ನು ಆಯುಕ್ತರವರ ಕ್ಯಾಟಗರಿ (**Commissioner Category**) ಅಡಿಯಲ್ಲಿ ಹಣ ಪಾವತಿಸಲು ಅನುಮೋದಿಸಬೇಕಾಗಿರುತ್ತದೆ.

ಈ ಹಿನ್ನಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ 2018–19 ರ ಆಯವ್ಯಯದಲ್ಲಿ ಉಳಿಕೆಯಾಗಬಹುದಾದ ಅನುದಾನದಲ್ಲಿ**ಇಂದಿರಾ ಕ್ಯಾಂಟೀನ್ ಕಟ್ಟಡದ ಸುತ್ತಮುತ್ತಲಿನ ಭದ್ರತೆ ಮತ್ತು ಇತರೆ ಸೌಲಭ್ಯ (Augmentation/Ambience Work)** ಗಳ ಒದಗಿಸಲಾದ **ಕಾಮಗಾರಿಗಳ ಒಟ್ಟು ವೆಚ್ಚ ರೂ.38.00 ಕೋಟಿಗಳನ್ನು "ಆಯವ್ಯಯ ಅನುದಾನ ಮರುಹೊಂದಾಣಿಕೆ** (Re-appropriation of grants)**"** ಅಡಿಯಲ್ಲಿ ಒದಗಿಸಲು ಕೋರಿ ಮತ್ತು ಸದರಿ ಕಾಮಗಾರಿಗಳನ್ನು ಆಯುಕ್ತರವರ ಕ್ಯಾಟಗರಿ **(Commissioner Category)** ಅಡಿಯಲ್ಲಿ ಹಣ ಪಾವತಿಸಲು ಕೋರಿ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರವರ ದಿನಾಂಕ: 26.07.2018ರ ಟಿಪ್ಪಣಿಯನ್ನು ಪರಿಶೀಲಿಸಲಾಗಿ, ಸದರಿ ಕಾಮಗಾರಿಗಳು ಸರ್ಕಾರದ ಅನುದಾನದ ಅನುಮೋದನೆ ನಿರೀಕ್ಷಿಸಿ ಕೈಗೊಂಡಿದ್ದು, ಹಾಗೂ ಸರ್ಕಾರವು ಸದರಿ ವೆಚ್ಚವನ್ನು ಪಾಲಿಕೆ ನಿಧಿಯಿಂದಲೇ ಭರಿಸಲು ಸೂಚಿಸಿರುವ ಹಿನ್ನಲೆಯಲ್ಲಿ, ಪೂರ್ಣಗೊಂಡಿರುವ ಕಾಮಗಾರಿ ಬಿಲ್ಲುಗಳ ವೆಚ್ಚವನ್ನು 2018–19ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ ಪಿ3106 ರಲ್ಲಿ ಮೀಸಲಿರಿಸಿರುವ ಅನುದಾನದಲ್ಲಿ ಹೊಂದಾಣಿಕೆ ಮಾಡಿಕೊಂಡು ಪಾಲಿಕೆಯ ನಿಧಿಯಿಂದಲೇ ಭರಿಸಿಕೊಂಡು ಹಾಗೂ ವಿಶೇಷ ಪ್ರಕರಣವೆಂದು ಆಯುಕ್ತರ ಕ್ಯಾಟಗರಿ ಅಡಿಯಲ್ಲಿ ಹಣ ಪಾವತಿಸಲು ಸಮಿತಿಯು ತೀರ್ಮಾನಿಸಿತು.**

(ಮಹದೇವ. ಎಂ)
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**